2017–18 ನೇ ಸಾಲಿನಲ್ಲಿ ಪಶುಪಾಲನಾ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು, ವ್ಯಾಪ್ತಿಗೆ ಸಂಬಂಧಿಸಿದಂತೆ ಒಟ್ಟು 104 ಪಶುವೈದ್ಯ ಸಂಸ್ಥೆಗಳು ಇದ್ದು, ಇದರಲ್ಲಿ ಉಪನಿರ್ದೇಶಕರ ಕಛೇರಿ, ಪಶುಪಾಲನಾ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಗಳು, ಜಂಟಿ ನಿರ್ದೇಶಕರು (ರೋಗ ಅಧ್ಯಯನ), ಹೆಬ್ಬಾಳ, ಬೆಂಗಳೂರು ರವರ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. 2017–18 ಖಖಆಈ–23 ರಲ್ಲಿ 4 ಕಟ್ಟಡಗಳು ಮಂಜೂರಾಗಿರುತ್ತವೆ.

➢ **ರಾಸುಗಳ ಫಲೀಕರಣ ಶಿಬಿರಗಳು :**

2017–18 ನೇ ಸಾಲಿನಲ್ಲಿ ಒಟ್ಟು 52 ಫಲೀಕರಣ ಶಿಬಿರಗಳನ್ನು ನಿಗದಿಪಡಿಸಿದ್ದು, 52 ಫಲೀಕರಣ ಶಿಬಿರಗಳನ್ನು ಏರ್ಪಡಿಸಲಾಗಿದೆ. ಈ ಯೋಜನೆ ಅನುಷ್ಠಾನಕ್ಕೆ ರೂ 5.20 ಲಕ್ಷಗಳನ್ನು ಫಲೀಕರಣ ಚಿಕಿತ್ಸೆ ಹಾಗೂ ಶಿಬಿರದ ಔಷಧಿ ಖರೀದಿಗಾಗಿ ಖರ್ಚು ಮಾಡಿ ಮಾರ್ಚ್–2018 ರ ಅಂತ್ಯಕ್ಕೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

➢ **ಮಿಶ್ರತಳಿ ಹಸು ಮತ್ತು ಕರುಗಳ ಪ್ರದರ್ಶನ :**

2017–18 ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೆಯಡಿ 9 ಮಿಶ್ರತಳಿ ಹಸು ಹಾಗೂ ಕರುಗಳ ಪ್ರದರ್ಶನ ಏರ್ಪಡಿಸಿ ಉತ್ತಮ ಮಿಶ್ರತಳಿ ಹಸು ಹಾಗೂ ಕರುಗಳಿಗೆ ಬಹುಮಾನ ವಿತರಣೆ ಮಾಡಲಾಗಿದೆ. ಈ ದಿಸೆಯಲ್ಲಿ ಉತ್ತಮ ಮಿಶ್ರತಳಿ ಹಸು ಮತ್ತು ಕರುಗಳನ್ನು ಬೆಳೆಸಲು ರೈತರನ್ನು ಉತ್ತೇಜಿಸಲಾಗಿದೆ.

➢ **ಕಿಸಾನ್ ಸಂಪರ್ಕ ಸಭೆ :**

ಈ ಯೋಜನೆಯಡಿ 2017–18 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 96 ಕಿಸಾನ್ ಸಂಪರ್ಕ ಸಭೆ ಏರ್ಪಡಿಸಿ ರೈತರಿಗೆ ಇಲಾಖೆ ಚಟುವಟಿಕೆ ಬಗ್ಗೆ ತಿಳುವಳಿಕೆ ನೀಡಲಾಗಿದೆ.

ಕ್ರ.ಸಂ	ತಾಲ್ಲೂಕು	ಭೌತಿಕ
1	ದೇವನಹಳ್ಳಿ	**24**
2	ದೊಡ್ಡಬಳ್ಳಾಪುರ	**24**
3	ಹೊಸಕೋಟೆ	**24**
4	ನೆಲಮಂಗಲ	**24**
	ಒಟ್ಟು	**96**

➢ **ಜಾನುವಾರು ಉತ್ಪನ್ನಗಳ ಸಮೀಕ್ಷೆ (ಮಾದರಿ ಸಮೀಕ್ಷೆ) :**

ರಾಜ್ಯವಲಯದ ಈ ಯೋಜನೆಯ ಉದ್ದೇಶ ಜಾನುವಾರುಗಳ ಉತ್ಪನ್ನಗಳಾದ ಹಾಲು, ಮೊಟ್ಟೆ, ಮತ್ತು ಮಾಂಸ ಇವುಗಳ ವಾರ್ಷಿಕ ಅಂದಾಜು ಮಾಡುವುದು ವರ್ಷದಲ್ಲಿ ಬೇಸಿಗೆಕಾಲ, ಮಳೆಗಾಲ, ಚಳಿಗಾಲಗಳೆಂದು 3 ಅವಧಿಗಳನ್ನಾಗಿ ವಿಂಗಡಿಸಿ ಸಕಾಲಕ್ಕೆ ಸಮೀಕ್ಷೆಯನ್ನು ಜಿಲ್ಲೆಗೆ ಜಂಟಿ ನಿರ್ದೇಶಕರು (ಅಂಕಿಅಂಶ), ಬೆಂಗಳೂರು ರವರ ಕಛೇರಿಯಿಂದ ನಿಯೋಜಿಸಿರುವ ಇಬ್ಬರು ಪಶುವೈದ್ಯಕೀಯ ಪರೀಕ್ಷಕರು ಆಯ್ಕೆಯಾದ ಹಳ್ಳಿಗಳಲ್ಲಿ ನಡೆಸುತ್ತಿದ್ದಾರೆ. 2017–18ನೇ ಸಾಲಿನಲ್ಲಿ ಹಾಲು, ಮೊಟ್ಟೆ, ಉಣ್ಣೆ ಉತ್ಪಾದನೆ ಅಧ್ಯಯನಕ್ಕಾಗಿ ಪ್ರತಿ ಋತುವಿನಲ್ಲಿ 10 ಗ್ರಾಮಗಳು, ಹಾಗೂ ಸಂಪೂರ್ಣ ಎಣಿಕೆಗಾಗಿ ಬೇಸಿಗೆ ಋತುವಿಗೆ 23 ಗ್ರಾಮಗಳನ್ನು, ಮಳೆಗಾಲ ಋತುವಿಗೆ 23 ಗ್ರಾಮಗಳನ್ನು ಹಾಗೂ ಚಳಿಗಾಲ ಋತುವಿಗೆ 23 ಗ್ರಾಮಗಳನ್ನು ನಿಗದಿಪಡಿಸಿದ್ದು, ಸಮೀಕ್ಷೆಯ ವರದಿಯನ್ನು ಪೂರ್ಣಗೊಳಿಸಿ ಗುರಿ ಸಾಧಿಸಿ ವರದಿ ಸಲ್ಲಿಸಲಾಗಿದೆ.

2017–18 ನೇ ಸಾಲಿನಲ್ಲಿ ಪಶುಭಾಗ್ಯ ಯೋಜನೆ ಪ್ರಗತಿ ವರದಿ

ಅಮೃತ ಯೋಜನೆ– ಹೈನುಗಾರಿಕೆ, ಕುರಿ/ಮೇಕೆ (ಮಹಿಳೆಯರಿಗಾಗಿ)

ಕ್ರ.ಸಂ	ಜಿಲ್ಲೆ	ಘಟಕ	ಸಾಧನೆ ಸಾಮಾನ್ಯ		ಸಾಧನೆ ಪರಿಶಿಷ್ಟ ಜಾತಿ		ಸಾಧನೆ ಪರಿಶಿಷ್ಟ ಪಂಗಡ		ಒಟ್ಟು	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಬೆಂಗಳೂರು ಗ್ರಾಮಾತರ ಜಿಲ್ಲೆ	ಹೈನುಗಾರಿಕೆ	**57.9**	**193**	**3.60**	**6**	**1.20**	**2**	**62.7**	**201**
		ಕುರಿ/ಮೇಕೆ	**11.25**	**150**	**5.58**	**62**	**1.71**	**19**	**18.54**	**23**
		ಒಟ್ಟು	**69.15**	**343**	**9.18**	**68**	**2.91**	**21**	**81.24**	**432**

ಪಶುಭಾಗ್ಯ ಯೋಜನೆ ಪ್ರಗತಿ

ಕ್ರ. ಸಂ	ಯೋಜನೆ	ಸಾಧನೆ							
		ಸಾಮಾನ್ಯ		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಒಟ್ಟು	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಹೈನುಗಾರಿಕೆ	42.9	143	13.2	22	13.8	23	69.9	188
2	ಕುರಿ/ಮೇಕೆ ಸಾಕಾಣಿಕೆ	3.37	20	0.674	2	0.337	1	4.381	23
3	ಹಂದಿ ಸಾಕಾಣಿಕೆ	1.41	6	0.47	1	0.47	1	2.35	8
4	ಕೋಳಿ ಸಾಕಾಣಿಕೆ	1.75	7	0.50	1	0.50	1	2.75	9
	ಒಟ್ಟು	49.43	176	14.844	26	15.107	16	79.381	228

3. ಸಮಾಜ ಕಲ್ಯಾಣ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಕೆಲವು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಮುಖಾಂತರ ಉಪನಿರ್ದೇಶಕರು ಹಾಗೂ ಸಿಬ್ಬಂದಿಗಳು ಅನುಷ್ಠಾನಗೊಳಿಸುತ್ತಾರೆ. ಹಾಗೂ ಕೆಲವು ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್‌ಗಳ ಮೂಲಕ ಇಲಾಖೆಯ ಸಹಾಯಕ ನಿರ್ದೇಶಕರು ಮತ್ತು ಸಿಬ್ಬಂದಿಗಳು ಅನುಷ್ಠಾನಗೊಳಿಸುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ 2011ರ ಜನಗಣತಿಯ ಪ್ರಕಾರ 2,13,700 ಪರಿಶಿಷ್ಟ ಜಾತಿಯವರ ಜನಸಂಖ್ಯೆ ಮತ್ತು 52,903 ಪರಿಶಿಷ್ಟ ವರ್ಗದವರ ಜನಸಂಖ್ಯೆ ಇದ್ದು, ಈ ಜನರ ಉನ್ನತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಮುಖ್ಯವಾಗಿ ಶೈಕ್ಷಣಿಕ ಕಾರ್ಯಕ್ರಮಗಳು, ತರಬೇತಿ ಕಾರ್ಯಕ್ರಮಗಳು, ಆರ್ಥಿಕ ಉನ್ನತಿ ಮತ್ತು ಸಾಮಾಜಿಕ ಬದಲಾವಣೆ ಹಾಗೂ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ 23 ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ಮತ್ತು 1 ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಸೇರಿದಂತೆ ಒಟ್ಟು 24 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ 9 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 33 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 24 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 1865 ವಿದ್ಯಾರ್ಥಿಗಳಿಗೆ ಅವಕಾಶವಿದ್ದು, ಆ ಪೈಕಿ **1608** ವಿದ್ಯಾರ್ಥಿಗಳು ದಾಖಲಾಗಿ ಪ್ರಯೋಜನ ಪಡೆದಿರುತ್ತಾರೆ. ಅದೇ ರೀತಿ 9 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 647 ವಿದ್ಯಾರ್ಥಿಗಳಿಗೆ ಅವಕಾಶವಿದ್ದು, **632** ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಇದಲ್ಲದೆ, ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಮೊರಾರ್ಜಿ ವಸತಿ ಶಾಲೆ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ/ಡಾ॥ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ/ಇಂದಿರಾಗಾಂಧಿ ವಸತಿ ಶಾಲೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ನಡೆಯುತ್ತಿದ್ದು, ಅವುಗಳಲ್ಲಿ 2 ಪಿ.ಯು.ಸಿ ಕಾಲೇಜು ಹಾಗೂ 10 ಪ್ರೌಢ ವಸತಿ ಶಾಲೆಗಳು ನಡೆಯುತ್ತಿದ್ದು, ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮದಲ್ಲಿ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪರಿಶಿಷ್ಟ ವರ್ಗ) ನಡೆಯುತ್ತಿದ್ದು, ಅಲ್ಲಿ 2017–18ನೇ ಸಾಲಿಗೆ 250 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು, 223 ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುತ್ತಾರೆ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 250 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು, 237 ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುತ್ತಾರೆ. ಹೊಸಕೋಟೆ ತಾಲ್ಲೂಕಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯು ಹೆಣ್ಣು ಮಕ್ಕಳಿಗಾಗಿಯೇ ಇದ್ದು 2017–18ನೇ ಸಾಲಿನಲ್ಲಿ ಒಟ್ಟು ಮಂಜೂರಾತಿ ಸಂಖ್ಯೆ 250 ಕ್ಕೆ 250 ವಿದ್ಯಾರ್ಥಿನಿಯರು ಪ್ರಯೋಜನ ಪಡೆಯುತ್ತಿದ್ದಾರೆ. ಹಾಗೂ ಹೊಸಕೋಟೆ ತಾಲ್ಲೂಕಿನ ಜಡಿಗೇನಹಳ್ಳಿಯಲ್ಲಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು ಇದ್ದು ಒಟ್ಟು ಮಂಜೂರಾತಿ ಸಂಖ್ಯೆ 160 ಕ್ಕೆ 125 ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುತ್ತಾರೆ.

1. ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳು (ಪರಿಶಿಷ್ಟ ಜಾತಿ)

(1) ಕಾಲೇಜು ವಿದ್ಯಾರ್ಥಿ ನಿಲಯಗಳ ನಿರ್ವಹಣೆ:–

ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ಈ ನಾಲ್ಕು ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿಯ 7 ಕಾಲೇಜು ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದು, ಇದರ ನಿರ್ವಹಣೆಗಾಗಿ ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ ಒಟ್ಟು ₹209.83 ಲಕ್ಷಗಳನ್ನು ನಿಗಧಿಪಡಿಸಿಕೊಂಡಿದ್ದು, **ರೂ. 207.09** ಲಕ್ಷಗಳನ್ನು ಖರ್ಚು ಮಾಡಲಾಗಿದೆ.

(2) ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ, ಇತರೆ ರಿಯಾಯಿತಿಗಳು, ಶ್ರೇಷ್ಠತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯಧನ:–

ಈ ಕಾರ್ಯಕ್ರಮದಡಿ ಪ್ರಥಮ ದರ್ಜೆಯಲ್ಲಿ ಪಾಸಾದ ಪಿ.ಯು.ಸಿ, ಪದವಿ ಹಾಗೂ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹಾಯಧನ ಮತ್ತು ವಾಹನಾ ಚಾಲನಾ ತರಬೇತಿ, ಸೈನಿಕ ಶಾಲೆಯಲ್ಲಿ ತರಬೇತಿ, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಸಲಕರಣೆ ಮತ್ತು ಡಿ.ಇಡಿ. ಹೆಣ್ಣುಮಕ್ಕಳಿಗೆ ಸಮವಸ್ತ್ರ ಭತ್ಯೆ ಮಂಜೂರು ಮಾಡಲು ಒಟ್ಟು ₹ 103.00 ಲಕ್ಷಗಳನ್ನು ನಿಗಧಿಗೊಳಿಸಿದ್ದು ಒಟ್ಟು ₹102.77 ಲಕ್ಷಗಳನ್ನು ಖರ್ಚು ಮಾಡಿ ಒಟ್ಟು 573 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಟಾನಗೊಳಿಸಿದೆ.

2. ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು (ಪರಿಶಿಷ್ಟ ಜಾತಿ)

1) ಕಾರ್ಯ ನಿರ್ವಾಹಕ ಸಿಬ್ಬಂದಿ:–

ಈ ಕಾರ್ಯಕ್ರಮದಡಿ ಜಿಲ್ಲಾ ಮತ್ತು ತಾಲ್ಲೂಕು ಕಚೇರಿಗಳ ಸಿಬ್ಬಂದಿಯವರ ವೇತನ ಹಾಗೂ ಇತರೇ ಸಾದಿಲ್ವಾರು ವೆಚ್ಚಕ್ಕಾಗಿ ₹ 169.25 ಲಕ್ಷಗಳನ್ನು ನಿಗಧಿಪಡಿಸಿಕೊಂಡಿದ್ದು, ಈ ಅನುದಾನದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 46 ವಿವಿಧ ವರ್ಗದ ಸಿಬ್ಬಂದಿ ವೇತನ ಹಾಗೂ ಕಚೇರಿ ನಿರ್ವಹಣೆಗೆ ಒಟ್ಟು ₹184.14 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:–

ಈ ಕಾರ್ಯಕ್ರಮದಡಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ನಿಗಧಿಯಾದ ಒಟ್ಟು ₹ 203.00 ಲಕ್ಷಗಳಿಗೆ ₹ 202.91 ಲಕ್ಷಗಳನ್ನು ಖರ್ಚು ಮಾಡಿ 2164 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಿದೆ. ಈ ಕಾರ್ಯಕ್ರಮದಡಿ ಪಿ.ಯು.ಸಿ ಯಿಂದ ವೈದ್ಯಕೀಯ ಮತ್ತು ತಾಂತ್ರಿಕ ಪದವಿ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

ಕೋರ್ಸ್	ವಿ.ನಿ.ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ	ವಿ.ನಿ.ಗಳಲ್ಲಿ ವಾಸಿಸದ ವಿದ್ಯಾರ್ಥಿಗಳಿಗೆ
ಗ್ರೂಪ್ –1 : ವೈದ್ಯಕೀಯ ಮತ್ತು ತಾಂತ್ರಿಕ ಪದವಿ, ಭಾರತೀಯ ವೈದ್ಯಕೀಯ ಪದ್ಧತಿ, ಶಿಕ್ಷಣ ಪದವಿ, ಕೃಷಿ ಪಶು ವೈದ್ಯಕೀಯ, ಬಿಸಿನೆಸ್ ಅಡ್ಮಿನಿಸ್ಟ್ರೇಷನ್, ಕಂಪ್ಯೂಟರ್ ಅಪ್ಲಿಕೇಷನ್ ಇತ್ಯಾದಿ	₹ 1200–00	₹ 550–00
ಗ್ರೂಪ್ –2 : ಇನ್ನಿತರೆ ವೃತ್ತಿಪರ ಮತ್ತು ತಾಂತ್ರಿಕ ಪದವಿ ಮತ್ತು ಸ್ನಾನಕೋತ್ತರ ಪದವಿ ಎಂ.ಫಿಲ್, ಪಿ.ಹೆಚ್.ಡಿ, ಸಿ.ಎ., ಐಸಿಡಬ್ಲ್ಯೂಎ ಇತ್ಯಾದಿ ಎಲ್ಲಾ ಸ್ನಾತಕೋತ್ತರ ಪದವಿ (ಗ್ರೂಪ್ –1 ರಲ್ಲಿ ಸೇರದಿರುವ)	₹ . 820–00	₹ 530–00
ಗ್ರೂಪ್ –3 : ಎಲ್ಲಾ ಪದವಿ ಕೋರ್ಸ್‌ಗಳು(ಗ್ರೂಪ್ –1 ಮತ್ತು 2 ರಲ್ಲಿ ಸೇರದಿರುವ)	₹ 570–00	₹ 300–00
ಗ್ರೂಪ್ –4 : ಉಳಿದ ಎಲ್ಲಾ ಪದವಿ ಪೂರ್ವ ಕೋರ್ಸ್‌ಗಳು ಡಿಪ್ಲಮೋ ಹತ್ತನೇ ತರಗತಿಯ ನಂತರದ ಕೋರ್ಸ್‌ಗಳು, ಪಿ.ಯು.ಸಿ 10+ 2 ,ಐ.ಟಿ.ಐ ಇತ್ಯಾದಿ ಮೇಲೆ ತಿಳಿಸಿದ ಗ್ರೂಪ್ –1, ಗ್ರೂಪ್ –2 ಹಾಗೂ ಗ್ರೂಪ್ –3 ರಲ್ಲಿ ಸೇರದೇ ಇರುವ ಕೋರ್ಸ್‌ಗಳು	₹ 380–00	₹ 230–00

3) ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ:–

ಈ ಕಾರ್ಯಕ್ರಮದಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿದ್ದು ಪ್ರಸಕ್ತ ಸಾಲಿನಲ್ಲಿ 1 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯ ಮಾತ್ರ ನಡೆಯುತ್ತಿದ್ದು,

ಅವುಗಳ ನಿರ್ವಹಣೆಗಾಗಿ ₹5.00 ಲಕ್ಷಗಳನ್ನು ಒದಗಿಸಿದ್ದು ಅದರಲ್ಲಿ ಒಂದು ವಿದ್ಯಾರ್ಥಿ ನಿಲಯಕ್ಕೆ ₹4.83 ಲಕ್ಷಗಳನ್ನು 64 ವಿದ್ಯಾರ್ಥಿಗಳ ನಿರ್ವಹಣೆಗಾಗಿ ಒದಗಿಸಿದೆ.

4) ಸರ್ಕಾರಿ ಕಾಲೇಜು ವಿದ್ಯಾರ್ಥಿ ನಿಲಯಗಳು:–

ಈ ಕಾರ್ಯಕ್ರಮದಡಿ ಹೊಸಕೋಟೆ ಟೌನ್ ಮತ್ತು ವಿಜಯಪುರ ಗಳಲ್ಲಿರುವ 2 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸಿಬ್ಬಂದಿ ವೇತನ, ಬಾಡಿಗೆ, ನಿರ್ವಹಣೆಗಾಗಿ ₹ 17.30 ಲಕ್ಷಗಳಲ್ಲಿ ಒಟ್ಟು ₹. 16.76 ಲಕ್ಷಗಳನ್ನು ಖರ್ಚು ಮಾಡಿ ಒಟ್ಟು 97 ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

3. ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು – ಪರಿಶಿಷ್ಟ ಜಾತಿ

1) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:–

ಈ ಕಾರ್ಯಕ್ರಮದಡಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

ತರಗತಿ	ಬಾಲಕ	ಬಾಲಕಿ
1 ರಿಂದ 5	750/–	850/–
6 ರಿಂದ 7	900/–	1000/–
8 ರಿಂದ 10	1000/–	1100/–

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದ್ದು, ಸದರಿ ಯೋಜನೆಯಡಿ ₹490.26 ಲಕ್ಷಗಳನ್ನು ನಿಗಧಿಪಡಿಸಿದ್ದು, ₹ 315.72 ಲಕ್ಷಗಳನ್ನು ಖರ್ಚು ಮಾಡಿ ಒಟ್ಟು 20517 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆಗೊಳಿಸಲಾಗಿದೆ.

2) ಕಟ್ಟಡಗಳ ನಿರ್ವಹಣೆ:–

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ರಿಪೇರಿ, ಸುಣ್ಣ–ಬಣ್ಣ, ಕುಡಿಯುವ ನೀರಿನ ವ್ಯವಸ್ಥೆ, ರಿಪೇರಿ ಮತ್ತಿತರ ದುರಸ್ತಿ ಕಾಮಗಾರಿಗಳಲ್ಲಿ 2017–18ನೇ ಸಾಲಿಗೆ ₹ 25.00 ಲಕ್ಷಗಳನ್ನು ನಿಗಧಿಗೊಳಿಸಿದ್ದು, ಒಟ್ಟು ₹ 24.56 ಲಕ್ಷಗಳನ್ನು ಖರ್ಚು ಮಾಡಿ 10 ವಿದ್ಯಾರ್ಥಿ ನಿಲಯಗಳ ದುರಸ್ತಿಗಾಗಿ ವಿನಿಯೋಗಿಸಿದೆ.

3) ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ (ಇ.ಬಿ.ಎಲ್. ವೆಚ್ಚ):–

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗಾಗಿ ಒಬ್ಬರಿಗೆ ₹ 1500/–ರಂತೆ ಖರ್ಚು ಮಾಡಬಹುದಾಗಿದ್ದು, ಇದರಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದಿಂದ ಲಭ್ಯವಾಗುವ ಅನುದಾನವನ್ನು ಬಳಸಿಕೊಂಡು ಅದಕ್ಕಿಂತ ಹೆಚ್ಚುವರಿ ಬೇಕಾಗುವ ಅನುದಾನವನ್ನು ಈ ಕಾರ್ಯಕ್ರಮದಲ್ಲಿ ಬಳಸಿಕೊಳ್ಳಲಾಗುವುದು. ಜಿಲ್ಲೆಯಲ್ಲಿ 9 ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದು, 2017–18ನೇ ಸಾಲಿನಲ್ಲಿ ನಿರ್ವಹಣೆಗಾಗಿ ₹ 40.00 ಲಕ್ಷಗಳಲ್ಲಿ ₹ 37.19 ಲಕ್ಷಗಳನ್ನು ಖರ್ಚು ಮಾಡಿ 409 ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

4) ಅಸ್ಪೃಷ್ಯತಾ ನಿವಾರಣೆಗಾಗಿ ಕೇಂದ್ರ ಪುರಸ್ಕೃತ ಯೋಜನೆ:– (ಕೇಂದ್ರ ಪುರಸ್ಕೃತ ಯೋಜನೆ)

ಈ ಕಾರ್ಯಕ್ರಮದಡಿ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ₹ 5.00 ಮತ್ತು 3.00 ಲಕ್ಷಗಳಂತೆ ಪ್ರೋತ್ಸಾಹಧನ ಮಂಜೂರು ಮಾಡಲು ಹಾಗೂ ಅಸ್ಪೃಷ್ಯತಾ ನಿವಾರಣಾ ಯೋಜನೆ ಅನುಷ್ಠಾನಗೊಳಿಸಲು 2017–18ನೇ ಸಾಲಿನಲ್ಲಿ ₹ 4.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಸದರಿ ಮೊತ್ತವನ್ನು ಖರ್ಚು ಮಾಡಿ 45 ದಂಪತಿಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಿದೆ.

5) ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ: (ಕೇಂದ್ರ ಪುರಸ್ಕೃತ ಯೋಜನೆ)

ಈ ಕಾರ್ಯಕ್ರಮದಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರ ಆಯಾ ಕೋರ್ಸ್‌ಗಳಿಗೆ ನಿಗಧಿಪಡಿಸಿದ ವಿದ್ಯಾರ್ಥಿ ವೇತನ ಮತ್ತು ಶುಲ್ಕವನ್ನು ಮಂಜೂರು ಮಾಡಬಹುದಾಗಿದೆ. 2017–18ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ₹150.00 ಲಕ್ಷಗಳು ಬಿಡುಗಡೆಯಾಗಿದ್ದು, ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ₹ 104.36 ಲಕ್ಷಗಳನ್ನು ಅರ್ಹ 1307 ವಿದ್ಯಾರ್ಥಿಗಳಿಗೆ ಮಂಜೂರು ಮಾಡಿದೆ.

ವಿಶೇಷ ಘಟಕ ಯೋಜನೆ:

(1) ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ:–

2017–18ನೇ ಸಾಲಿಗೆ ಈ ಯೋಜನೆಯಲ್ಲಿ ₹52.00 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ 46 ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳಾದ ಚರಂಡಿ, ರಸ್ತೆ ನಿರ್ಮಾಣ ಇತ್ಯಾದಿ ಕಾಮಗಾರಿಗಳಿಗೆ ₹ 50.03 ಲಕ್ಷಗಳನ್ನು ವಿನಿಯೋಗಿಸಿದೆ.

(2) ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಆರ್ಥಿಕ ಸಹಾಯ:–

2017–18ನೇ ಸಾಲಿಗೆ ಈ ಯೋಜನೆಯಲ್ಲಿ ₹ 46.00ಲಕ್ಷಗಳು ನಿಗಧಿಯಾಗಿದ್ದು, ಪೂರ್ಣ ಅನುದಾನ ಬಿಡುಗಡೆಯಾಗಿ ₹ 45.98 ಲಕ್ಷಗಳು ಖರ್ಚಾಗಿರುತ್ತದೆ. ಇದರಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಅರಣ್ಯ, ಮೀನುಗಾರಿಕೆ ಇತ್ಯಾದಿ ಇಲಾಖೆಗಳ ಮುಖಾಂತರ 1279 ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಸವಲತ್ತು ನೀಡಲು ಆರ್ಥಿಕ ಸಹಾಯಧನವಾಗಿ ವಿನಿಯೋಗಿಸಿದೆ.

(3) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:–

ಈ ಕಾರ್ಯಕ್ರಮದಡಿ 23 ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ 1494 ವಿದ್ಯಾರ್ಥಿಗಳಿಗೆ ಊಟ, ಸಮವಸ್ತ್ರ, ಲೇಖನಸಾಮಗ್ರಿ, ಹಾಸಿಗೆಹೊದಿಕೆ, ಸೋಪು, ಎಣ್ಣೆ ಇತ್ಯಾಧಿ ಸೌಲಭ್ಯಗಳನ್ನು ನೀಡುವುದರ ಜೊತೆಗೆ 84 ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಹೊರಗುತ್ತಿಗೆ ನೌಕರರ ವೇತನಕ್ಕಾಗಿ ಮತ್ತು ನಿಲಯಗಳ ನಿರ್ವಹಣೆಗಾಗಿ ₹. 685.37 ಲಕ್ಷಗಳನ್ನು ನಿಗಧಿಗೊಳಿಸಿದ್ದು, ₹. 645.92 ಲಕ್ಷಗಳನ್ನು ವಿನಿಯೋಗಿಸಿದೆ.

4. ಜಿಲ್ಲಾ ಪಂಚಾಯತ್ ಯೋಜನೆ ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ)

1) ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನ ಹಾಗೂ ಸಹಾಯಧನ:–

ಈ ಕಾರ್ಯಕ್ರಮದಡಿ ₹26.00 ಲಕ್ಷಗಳನ್ನು ನಿಗಧಿಪಡಿಸಿಕೊಂಡಿದ್ದು ಇದರಲ್ಲಿ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಶಿಷ್ಯವೇತನ

ಪಾವತಿಗಾಗಿ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಒಟ್ಟು ₹25.77 ಲಕ್ಷ ಖರ್ಚು ಮಾಡಿದೆ. ಇದರಿಂದ 220 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.

5. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ):–

1) ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:–

ಈ ಕಾರ್ಯಕ್ರಮದಡಿ ವಿವಿಧ ಕೋರ್ಸ್‌ಗಳಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ₹ 44.00 ಲಕ್ಷಗಳನ್ನು ನಿಗಧಿಗೊಳಿಸಿದ್ದು, ₹ 43.01 ಲಕ್ಷಗಳನ್ನು ಖರ್ಚು ಮಾಡಿ ಒಟ್ಟು 136 ವಿದ್ಯಾರ್ಥಿಗಳಿಗೆ ಮಂಜೂರು ಮಾಡಿದೆ.

6. ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ)

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:–

ಈ ಕಾರ್ಯಕ್ರಮದಡಿ ₹ 108.00 ಲಕ್ಷಗಳನ್ನು ನಿಗಧಿಗೊಳಿಸಿದ್ದು ₹ 56.73 ಲಕ್ಷಗಳನ್ನು ಖರ್ಚು ಮಾಡಿ ಒಟ್ಟು 3787 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಮಂಜೂರು ಮಾಡಿದೆ

7. ಗಿರಿಜನ ಉಪ–ಯೋಜನೆ:

(1) ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ:–

2017–18ನೇ ಸಾಲಿಗೆ ಈ ಯೋಜನೆಯಲ್ಲಿ ₹18.00 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳಾದ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ, ರಸ್ತೆ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗೆ ₹ 17.19 ಲಕ್ಷಗಳನ್ನು ವಿನಿಯೋಗಿಸಿ 19 ಕಾಲೋನಿಗಳ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಿದೆ.

(2) ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಆರ್ಥಿಕ ಸಹಾಯ:–

2017–18ನೇ ಸಾಲಿಗೆ ಈ ಯೋಜನೆಯಲ್ಲಿ ₹11.00 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ ಪರಿಶಿಷ್ಟ ವರ್ಗದ 310 ಕುಟುಂಬಗಳಿಗೆ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರ ಇಲಾಖಾ ಕಾರ್ಯಕ್ರಮಗಳ ಸವಲತ್ತು ನೀಡಲು ₹10.99 ಲಕ್ಷಗಳ ಆರ್ಥಿಕ ಸಹಾಯಧನವಾಗಿ ವಿನಿಯೋಗಿಸಲಾಗಿದೆ.

4. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಜನರಿಗೆ ಶೈಕ್ಷಣಿಕ, ಔದ್ಯೋಗಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಿ, ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಸಕ್ತ 2017–18 ಸಾಲಿಗೆ ಯೋಜನೇತರ ಅಡಿಯಲ್ಲಿ ರೂ. 1177.14 ಲಕ್ಷ ನಿಗದಿಯಾಗಿದ್ದು, ರೂ. 1173.97 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

ವಿದ್ಯಾರ್ಥಿನಿಲಯಗಳ ನಿರ್ವಹಣೆ :–

ಮೆಟ್ರಿಕ್ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಒಟ್ಟು 600 ಸಂಖ್ಯಾಬಲದ 3 ಬಾಲಕಿಯರ 3 ಬಾಲಕರ ವಿದ್ಯಾರ್ಥಿನಿಲಯ ಹಾಗೂ 4 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು 14 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಒಟ್ಟು 775 ವಿದ್ಯಾರ್ಥಿಗಳು ಒಟ್ಟಾರೆ 1375 ವಿದ್ಯಾರ್ಥಿಗಳ ನಿರ್ವಹಣೆ ಹಾಗೂ 109 ಸಿಬ್ಬಂದಿಗಳಿಗೆ ವೇತನ ಪಾವತಿಸಲು ರೂ.560.55 ಲಕ್ಷ ಒದಗಿಸಿದ್ದು, ಅದರಲ್ಲಿ 552.46 ಲಕ್ಷ ವೆಚ್ಚ ಮಾಡಲಾಗಿದೆ.

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮತ್ತು ವಿಶೇಷ ದುರಸ್ತಿ:–

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಮತ್ತು ವಿಶೇಷ ದುರಸ್ತಿಗಾಗಿ ರೂ.35.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಂತೆ ರೂ.35.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ವಕೀಲರಿಗೆ ಪ್ರೋತ್ಸಾಹಧನ:–

ಕಾನೂನು ಪದವಿ ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ ತರಬೇತಿ ಅವಧಿಯಲ್ಲಿ ಮಾಹೆಯಾನ ರೂ.4000/–ಗಳ ಶಿಷ್ಯವೇತನ ನೀಡಲಾಗುತ್ತಿದೆ. ಈ ಸಾಲಿಗೆ ರೂ.9.60 ಲಕ್ಷ ಬಿಡುಗಡೆಯಾಗಿದ್ದು, ಇದರಲ್ಲಿ 30 ಅಭ್ಯರ್ಥಿಗಳಿಗೆ ಒಟ್ಟು ರೂ.9.60 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು:–

ಇಲಾಖಾ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಲು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ ವೇತನ ಹಾಗೂ ಇತರೆ ವೆಚ್ಚ ಪಾವತಿಸಲು ರೂ.30.85 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಅದರಂತೆ ರೂ.29.88 ಲಕ್ಷ ಖರ್ಚು ಮಾಡಲಾಗಿದೆ.

ಮೆಟಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ:–

ಇಲಾಖಾ ವಿದ್ಯಾರ್ಥಿನಿಲಯಗಳಿಗೆ ಬೇಕಾಗುವ ಪಾತ್ರೆ, ಪೀಠೋಪಕರಣಗಳು ಹಾಗೂ ವ್ಯಾಸಂಗಕ್ಕೆ ಅನುಕೂಲವಾಗುವ ಸಾಮಾಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲು ರೂ.25.00 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ.25.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಕಾರ್ಯನಿರ್ವಾಹಕ ಸಿಬ್ಬಂದಿ:–

ಜಿಲ್ಲಾ ಕಛೇರಿಯ ಸಿಬ್ಬಂದಿ ವೇತನ ಪಾವತಿಸಲು ಹಾಗೂ ಕಛೇರಿ ನಿರ್ವಹಣೆಗೆ ರೂ. 38.50 ಲಕ್ಷಗಳನ್ನು ಒದಗಿಸಲಾಗಿದ್ದು, ಅದರಲ್ಲಿ ರೂ. 38.50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇತರೆ ಹಿಂದುಳಿದ ವರ್ಗಗಳಿಗೆ ರಿಯಾಯಿತಿ:–

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಜಾತಿ/ ಸಮುದಾಯದ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ವರ್ಗ–1ಕ್ಕೆ ರೂ.2.50ಲಕ್ಷ, ಇತರೆ ವರ್ಗದವರಿಗೆ ರೂ.1.00 ಲಕ್ಷದೊಳಗೆ ಹಾಗೂ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯ್ತಿ ನೀಡಲಾಗುತ್ತದೆ. 2017–18ನೇ ಸಾಲಿನಲ್ಲಿ ರೂ.362.50 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, 5284 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಹೊಲಿಗೆ ತರಬೇತಿ ಕೇಂದ್ರಗಳು:–

ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಹೊಲಿಗೆ ಕಸುಬಿನಲ್ಲಿ ನುರಿತ ಸ್ವಯಂ ಉದ್ಯೋಗದಲ್ಲಿ ತೊಡಗಿ ಜೀವನ ನಡೆಸಲು ಅನುಕೂಲವಾಗುವಂತೆ ಹೊಲಿಗೆ ಕೇಂದ್ರಗಳ ಮೂಲಕ ಹೊಲಿಗೆ ತರಬೇತಿ ನೀಡಲಾಗುತ್ತದೆ. ಇದಕ್ಕಾಗಿ ರೂ. 3.50 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಅದರಲ್ಲಿ ರೂ.3.57 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, 20 ಅಭ್ಯರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ:–

5ನೇ ತರಗತಿಯಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.250/– ವಾರ್ಷಿಕ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುವುದು. 8ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕರಿಗೆ ರೂ.500/– ಬಾಲಕಿಯರಿಗೆ ರೂ.600/– ವಾರ್ಷಿಕ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದ್ದು, ಪೋಷಕರ ವಾರ್ಷಿಕ ಆದಾಯ ರೂ.44,500/– ಮಿತಿಯೊಳಗೆ ಇರಬೇಕು.

ಮೆಟ್ರಿಕ್ ನಂತರದ ಪಿ.ಯು.ಸಿ./ಜೆ.ಓ.ಸಿ ವಿದ್ಯಾರ್ಥಿಗಳಿಗೆ ರೂ.1600, ಪದವಿ/ಡಿಪ್ಲೋಮೋ ವಿದ್ಯಾರ್ಥಿಗಳಿಗೆ– ರೂ.2100, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ– ರೂ.3300/– ತಾಂತ್ರಿಕ/ವೈದ್ಯಕೀಯ ವಿದ್ಯಾರ್ಥಿಗಳಿಗೆ ರೂ.3500/– ಪೋಷಕರ ವಾರ್ಷಿಕ ಆದಾಯ ರೂ.1.00 ಲಕ್ಷಗಳೊಳಗೆ ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲು ವಿದ್ಯಾರ್ಥಿ ವೇತನಕ್ಕಾಗಿ ರೂ.113.74 ಲಕ್ಷಗಳ ಆಯವ್ಯಯ ಒದಗಿಸಲಾಗಿದ್ದು, ರೂ.113.74 ಲಕ್ಷ ಖರ್ಚು ಮಾಡಲಾಗಿದೆ. ಇದರಿಂದ 10061 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಅನಾಥಾಲಯಗಳಿಗೆ ಸಹಾಯಧನ:–

ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ 1 ಸ್ವಯಂ ಸೇವಾ ಸಂಸ್ಥೆ ನಡೆಸುತ್ತಿರುವ 50 ಸಂಖ್ಯಾಬಲದ ಅನಾಥಾಲಯಗಳಿಗೆ ಪ್ರೋತ್ಸಾಹ/ನೆರವು ನೀಡುವ ಸಲುವಾಗಿ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.750/– ರಂತೆ ಸಹಾಯಧನ ನೀಡಲಾಗುತ್ತಿದೆ. ಈ ಸಾಲಿನಲ್ಲಿ ರೂ.11.23 ಲಕ್ಷ ಒದಗಿಸಿದ್ದು, ಹಾಲಿ ಅನಾಥಾಲಯವು ಮುಚ್ಚಿರುವುದರಿಂದ ಅನುದಾನ ವೆಚ್ಚವಾಗದೇ ಹಾಗೆ ಸರ್ಕಾರದಲ್ಲೇ ಉಳಿದಿರುತ್ತದೆ.

ರಾಜ್ಯವಲಯ ಕಾರ್ಯಕ್ರಮಗಳು

ಊಟ ಮತ್ತು ವಸತಿ ಸಹಾಯ ಯೋಜನೆ (ವಿದ್ಯಾಸಿರಿ):–

2017–18ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಗೆ ವಿದ್ಯಾಸಿರಿ ಯೋಜನೆ (ಊಟ ಮತ್ತು ವಸತಿ ಸಹಾಯ ಯೋಜನೆ) ಅಡಿಯಲ್ಲಿ ರೂ.91.99 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ.99.19 ಲಕ್ಷ ವೆಚ್ಚ ಮಾಡಿದ್ದು, ಒಟ್ಟು 1729 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ವಿದ್ಯಾರ್ಥಿಗಳು ಕಾಲೇಜಿಗೆ ದಾಖಲಾದ ತಿಂಗಳಿಂದ ಶೇ. 75% ರಷ್ಟು ಹಾಜರಾತಿ ಅನುಗುಣವಾಗಿ ತಿಂಗಳಿಗೆ ರೂ.1500/– ರಂತೆ 10 ತಿಂಗಳ ಅವಧಿಯ ಹಾಜರಾತಿಗೆ ಅನುಗುಣವಾಗಿ ಬರುವ ಮೊತ್ತವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಜಮಾ ಮಾಡಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ವಿದ್ಯಾರ್ಥಿವೇತನ

ಕೇಂದ್ರ ಪುರಸ್ಕೃತ ಯೋಜನೆಯಡಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ರೂ. 99.67 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ. 99.67 ಲಕ್ಷ ವೆಚ್ಚ ಮಾಡಿದ್ದು, ಒಟ್ಟು 11955 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ರೂ. 93.23 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ. 93.23 ಲಕ್ಷ ವೆಚ್ಚ ಮಾಡಿದ್ದು, ಒಟ್ಟು 4132 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ವಿದ್ಯಾರ್ಥಿ ವೇತನದ ಮೊತ್ತವನ್ನು ಸಹ ಆನ್‌ಲೈನ್ ಮೂಲಕ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

ವಿದ್ಯಾರ್ಥಿವೇತನ ದರ ಈ ಕೆಳಕಂಡಂತೆ ಇದೆ ಅದರಂತೆ ಮಂಜೂರು ಮಾಡಿದೆ:

1. ಎ ಗುಂಪಿನ– ಕೋರ್ಸ್ (ತಾಂತ್ರಿಕ, ವೈದ್ಯಕೀಯ ಮತ್ತು ವೃತ್ತಿಪರ ಕೋರ್ಸ್‌ಗಳು) ವಾರ್ಷಿಕ 3,500/–
2. ಬಿ ಗುಂಪಿನ– ಕೋರ್ಸ್ (ಸ್ನಾತಕೋತ್ತರ, ಪದವಿಗಳು) ವಾರ್ಷಿಕ 3,350/–
3. ಸಿ ಗುಂಪಿನ– ಕೋರ್ಸ್ (ಪದವಿ ಕೋರ್ಸ್‌ಗಳು) ವಾರ್ಷಿಕ 2,100/–
4. ಡಿ ಗುಂಪಿನ– ಕೋರ್ಸ್ (ಪಿ.ಯು.ಸಿ. ಜೆ.ಓ.ಸಿ. ಮತ್ತು ಡಿಪ್ಲೋಮಾ ಕೋರ್ಸ್) ಗಳಿಗೆ ವಾರ್ಷಿಕ 1,600/–

ಇತರೆ ಹಿಂದುಳಿದ ವರ್ಗಗಳಿಗೆ ರಿಯಾಯಿತಿ:–

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಜಾತಿ/ಸಮುದಾಯದ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ವರ್ಗ–1ಕ್ಕೆ ರೂ.2.50 ಲಕ್ಷ, ಇತರೆ ವರ್ಗದವರಿಗೆ ರೂ.1.00 ಲಕ್ಷದೊಳಗೆ ಹಾಗೂ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ವಿನಾಯಿತಿ ನೀಡಲಾಗುತ್ತದೆ. 2017–18ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿ ರೂ.197.84 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ಅದರಿಂದ 3036 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಪಿ.ಹೆಚ್.ಡಿ. ಪೂರ್ಣಾವಧಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನ/ ಫೆಲೋಶಿಪ್:–

ಕರ್ನಾಟಕದ ಶಾಸನಬದ್ದ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪೂರ್ಣಾವಧಿ ಪಿ.ಹೆಚ್.ಡಿ. ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರವರ್ಗ–1ಕ್ಕೆ ರೂ.4.50 ಲಕ್ಷ, ಪ್ರವರ್ಗ–2ಎ, 3ಎ ಮತ್ತು 3ಬಿ ಗೆ 3.50 ಲಕ್ಷ ಆದಾಯ ಮಿತಿಯೊಳಗಿರುವ ಅಭ್ಯರ್ಥಿಗಳಿಗೆ ಮಾಸಿಕ ರೂ.5000/– ರಂತೆ ಗರಿಷ್ಟ 3 ವರ್ಷಗಳ ಅವಧಿಗೆ ವ್ಯಾಸಂಗ ವೇತನ/ಫೆಲೋಶಿಪ್ ಮಂಜೂರು ಮಾಡಲಾಗುವುದು. 2017–18ನೇ ಸಾಲಿಗೆ 1 ವಿದ್ಯಾರ್ಥಿಗೆ ರೂ. 0.40 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರ:

ಎಸ್.ಎಸ್.ಎಲ್.ಸಿ., ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 90% ಹಾಗೂ ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಶೇಕಡ 70% ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹವನ್ನು ಎಸ್.ಎಸ್.ಎಲ್.ಸಿ.–ರೂ.10,000/–,ಪಿ.ಯು.ಸಿ–ರೂ.15,000/–, ಪದವಿ/ಸ್ನಾತಕೋತ್ತರ ಪದವಿ ರೂ.20,000/– ಮತ್ತು ವೃತ್ತಿಪರ ಪದವಿ/ವೃತ್ತಿಪರ ಸ್ನಾತಕೋತ್ತರ ಪದವಿ–ರೂ.25,000/–ರಂತೆ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

2017–18 ನೇ ಸಾಲಿಗೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 90% ಕ್ಕಿಂತ ಹೆಚ್ಚು ಅಂಕ ಪಡೆದ 20 ವಿದ್ಯಾರ್ಥಿಗಳಿಗೆ ರೂ. 2.40 ಲಕ್ಷಗಳನ್ನು ಹಾಗೂ ಪದವಿ/ಸ್ನಾತಕೋತ್ತರ ಪದವಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 70% ಕ್ಕಿಂತ ಹೆಚ್ಚು ಅಂಕ ಪಡೆದ 23 ವಿದ್ಯಾರ್ಥಿಗಳಿಗೆ ರೂ.5.05 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆ 43 ವಿದ್ಯಾರ್ಥಿಗಳಿಗೆ ಒಟ್ಟು ರೂ.7.45 ಲಕ್ಷ ವೆಚ್ಚ ಮಾಡಲಾಗಿದೆ.

ನರ್ಸಿಂಗ್ ತರಬೇತಿ ಭತ್ಯೆ:

ಜಿ.ಎನ್.ಎಂ ಮತ್ತು ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತರಬೇತಿ ಶುಲ್ಕ, ಇತರೆ ಶುಲ್ಕ ಹಾಗೂ ಶಿಷ್ಯ ವೇತನವನ್ನು ನೀಡಲಾಗುವುದು. 2017–18ನೇ ಸಾಲಿಗೆ 10 ವಿದ್ಯಾರ್ಥಿಗಳಿಗೆ ರೂ.0.68 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

5. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ವರದಿಯು ಅಂಗೀಕೃತವಾದ್ದರಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರತ್ಯೇಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯನ್ನು 1977ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ನಂತರ ಸರ್ಕಾರದ ಆದೇಶ ಕ್ರಮಾಂಕ:ಎಂ.ಡಬ್ಲ್ಯೂಡಿ 203/ಎಂಡಿಎಸ್/2014, ಬೆಂಗಳೂರು ದಿ:09/02/2015, ಮೇ–01 ರಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಪ್ರತ್ಯೇಕಗೊಳಿಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 2015–16ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಇಲಾಖೆ ಮೂಲಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ ಭಾರತೀಯ ಸಂವಿಧಾನದ ಅನುಚ್ಛೇದ 15(4)ರನ್ವಯ ಶೈಕ್ಷಣಿಕ ಕ್ಷೇತ್ರದಲ್ಲಿ, ಅನುಚ್ಛೇದ 16(4)ರನ್ವಯ ಔದ್ಯೋಗಿಕ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಜನಾಂಗದವರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ/ಸಕಇ/251/ಬಿಸಿಎ/94. ದಿನಾಂಕ–31–1–1995ರ ಅನುಸಾರ ಮೀಸಲಾತಿಯನ್ನು ಗ್ರಾಮಾಂತರ ಪ್ರದೇಶದ ಹಾಗೂ ನಗರ ಪ್ರದೇಶದ ಅಲ್ಪಸಂಖ್ಯಾತರ ಜನರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ.

ಆಡಳಿತ ವಿಧಾನ

ಅಲ್ಪಸಂಖ್ಯಾತರ ಇಲಾಖೆಯ ಕಾರ್ಯಕ್ರಮಗಳನ್ನು ಪ್ರಸ್ತುತ ಜಿಲ್ಲಾ ಹಂತದಲ್ಲಿ ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧೀನದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುತ್ತಾರೆ. ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಹಾ ಜಿಲ್ಲಾ ಕಛೇರಿಯ ಅಧೀನದಲ್ಲೇ ನಿರ್ವಹಿಸಲಾಗುತ್ತದೆ.

ತಾಲ್ಲೂಕು ಹಂತದಲ್ಲಿ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳ ಕಛೇರಿ ಮತ್ತು ಮಾಹಿತಿ ಕೇಂದ್ರಗಳನ್ನು ತೆರೆದಿದ್ದು ವಿಸ್ತರಣಾಧಿಕಾರಿಗಳು, ಅಲ್ಪಸಂಖ್ಯಾತರ ಇಲಾಖಾ ಕಾರ್ಯಕ್ರಮಗಳ ಅನುಷ್ಟಾನಾಧಿಕಾರಿಗಳಾಗಿರುತ್ತಾರೆ. ವಿದ್ಯಾರ್ಥಿನಿಲಯಗಳ ತಪಾಸಣೆ, ಶೈಕ್ಷಣಿಕ ಸಂಸ್ಥೆಗಳ ತಪಾಸಣೆ, ಘಟಕ ಕಛೇರಿಗಳ ತಪಾಸಣೆ ನಡೆಸುವುದು, ನಿರ್ದೇಶನಾಲಯದಿಂದ ಜಿಲ್ಲಾ ಕಛೇರಿಗೆ ಸೂಚಿಸಲಾದ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಮಾಹಿತಿ ಸಲ್ಲಿಸುವುದು ಇತ್ಯಾದಿಗಳು ಇವರ ಪ್ರಮುಖ ಜವಬ್ದಾರಿಗಳಾಗಿರುತ್ತದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಉಚಿತ ಊಟ, ವಸತಿ ಹಾಗೂ ಇತರೆ ಸೌಕರ್ಯಗಳನ್ನೊಳಗೊಂಡ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ವಹಿಸಲಾಗುತ್ತಿದೆ. ಹಾಗೆಯೇ ಜಿಲ್ಲೆಯಲ್ಲಿ 02 ಮೊರಾರ್ಜಿ ದೇಸಾಯಿ ವಸತಿಶಾಲೆ ಮತ್ತು 03 ಮೌಲಾನಾ ಅಜಾದ್ ಮಾದರಿ ಶಾಲೆಗಳುನ್ನು ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿದೆ.

2017–18ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಛೇರಿಯಲ್ಲಿ ಅನುಷ್ಠಾನಗೊಳಿಸಲಾಗಿರುವ ಕಾರ್ಯಕ್ರಮಗಳ ವಿವರ

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ ಜಿಲ್ಲಾವಲಯ ಯೋಜನೆ ಕಾರ್ಯಕ್ರಮಗಳ ಅಡಿ ಜಿಲ್ಲಾ ಪಂಚಾಯತ್‌ನಿಂದ ಒಟ್ಟು ರೂ.118.39 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ರೂ.115.15 ಅನುದಾನ ಖರ್ಚು ಮಾಡಿ ಶೇ.97ರಷ್ಟು ಪ್ರಗತಿ ಸಾಧಿಸಲಾಗಿದೆ. ಅಲ್ಲದೆ ಇಲಾಖೆಯ ರಾಜ್ಯವಲಯ ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ 2017–18ನೇ ಸಾಲಿಗೆ ರೂ612.64 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದ್ದು, 612.62 ಖರ್ಚು ಭರಿಸಿ ಶೇ.100 ಪ್ರಗತಿ ಸಾಧಿಸಲಾಗಿದೆ. ಕಾರ್ಯಕ್ರಮವಾರು ಪ್ರಗತಿ ಸಾಧಿಸಲಾದ ವಿವರ ಈ ಕೆಳಕಂಡಂತಿರುತ್ತದೆ.

1) ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು:

ಪಿ.ಯು.ಸಿ ಮತ್ತು ಅದಕ್ಕಿಂತ ಎಲ್ಲಾ ಹೆಚ್ಚಿನ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ, ಗ್ರಂಥಾಲಯ, ಗಣಕಯಂತ್ರ ಸೌಲಭ್ಯ, ಕ್ರೀಡಾ ಸಾಮಾಗ್ರಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಈ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.1500/–ದರದಲ್ಲಿ ಆಹಾರ ನೀಡಲಾಗುತ್ತದೆ. ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರು ಇದರ ಪ್ರಯೋಜನ ಪಡಿಯುತ್ತಿದ್ದಾರೆ.

ಈ ನಿಲಯಗಳಿಗೆ ಪ್ರವೇಶ ಕಲ್ಪಿಸುವಾಗ ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾಗಿರುವ ಸಂಖ್ಯಾ ಬಲಕ್ಕೆ ಶೇ.75 ರಷ್ಟು ಸ್ಥಾನಗಳನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮುಸ್ಲಿಂ–ಶೇ.77, ಕ್ರಿಶ್ಚಿಯನ್ ಶೇ. 14, ಜೈನ್ ಶೇ.6, ಬೌದ್ಧ ಶೇ.2, ಮತ್ತು ಸಿಖ್‌ರಿಗೆ ಶೇ.1 ರಷ್ಟು ಮೀಸಲಾತಿ ಅನ್ವಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ

ಕಲ್ಪಿಸಲಾಗುವುದು ವಿದ್ಯಾರ್ಥಿಗಳನ್ನು ತಾಲ್ಲೂಕು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಲಮಂಗಲ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ತಾಲ್ಲೂಗಳಲ್ಲಿ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ಒಟ್ಟು 03 ವಿದ್ಯಾರ್ಥಿನಿಲಯಗಳಿದ್ದು, 175 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸದರಿ ವಿದ್ಯಾರ್ಥಿನಿಲಯ ನಿರ್ವಹಣೆಗೆ ಮತ್ತು ಸಿಬ್ಬಂದಿಗೆ 2017–18ನೇ ಸಾಲಿನಲ್ಲಿ 80.99 ಲಕ್ಷ ಅನುದಾನ ಒದಗಿಸಿದ್ದು, ರೂ.78.67 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

1) ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ಶಿಷ್ಯವೇತನ:

ಪ್ರತಿ ವರ್ಷ ಕಾನೂನು ಪದವಿ ಪಡೆದಿರುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ವಕೀಲ ವೃತ್ತಿಯಲ್ಲಿ ತರಬೇತಿ ಪಡೆಯಲು ತರಬೇತಿ ಭತ್ಯೆ ನೀಡುವ ಕಾರ್ಯಕ್ರಮವಾಗಿದೆ. ಪ್ರತಿ ವರ್ಷ ಎರಡು ಅಲ್ಪಸಂಖ್ಯಾತರ ಕಾನೂನು ಪದವೀಧರರನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ. ತರಬೇತಿ ಅವಧಿಯು 4 ವರ್ಷಗಳಾಗಿರುತ್ತದೆ. ಈ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 4000/–ರಂತೆ ತರಬೇತಿ ಭತ್ಯೆ ನೀಡಲಾಗುತ್ತದೆ. ಈ ಕಾರ್ಯಕ್ರಮಕ್ಕಾಗಿ 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.0.72 ಲಕ್ಷಗಳು ಒದಗಿಸಿದ್ದು, 03 ಅಭ್ಯರ್ಥಿಗಳು ಇದರ ಪ್ರಯೋಜನೆ ಪಡೆಯುತ್ತಿರುತ್ತಾರೆ.

2) ಕಾರ್ಯನಿರ್ವಾಹಕ ಸಿಬ್ಬಂದಿ:

ಅಲ್ಪಸಂಖ್ಯಾತರ ಜಿಲ್ಲಾ ಕಛೇರಿಯಲ್ಲಿ ಜಿಲ್ಲಾ ಅಧಿಕಾರಿಗಳು, 02 ಪ್ರಥಮ ದರ್ಜೆ ಸಹಾಯಕರು, 02 ದ್ವಿತೀಯ ಸಹಾಯಕರು, 01 ವಾಹನ ಚಾಲಕರು, 01 ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿದ್ದು, ಸದರಿ ಸಿಬ್ಬಂದಿಗಳ ವೇತನ ಪಾವತಿಸಲು ಹಾಗೂ ಕಛೇರಿಯ ನಿರ್ವಹಣೆಗೆ 2017–18ನೇ ಸಾಲಿಗೆರೂ.36.68 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ರೂ.35.78 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3) ಬಿದಾಯಿ ಯೋಜನೆ:

ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಸಮುದಾಯದ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರ ಮದುವೆ ಕಾರ್ಯಕ್ಕಾಗಿ ವಿವಾಹದ ಖರ್ಚು–ವೆಚ್ಚಗಳ ಸಹಾಯಧನ ರೂ. 50,000/–ಗಳಂತೆ ಅರ್ಹ ಫಲಾನುಭವಿಗೆಮಂಜೂರು ಮಾಡಲಾಗುತ್ತದೆ. 2017–18ನೇ ಸಾಲಿನಲ್ಲಿ ಬಿದಾಯಿ ಯೋಜನೆ ಕಾರ್ಯಕ್ರಮದಡಿ ರೂ.137.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, 274 ಫಲಾನುಭವಿಗಳು ಇದರ ಪ್ರಯೋಜನ ಪಡೆದಿರುತ್ತಾರೆ. ಹಾಗೂ ಕ್ರಿಶ್ಚಿಯನ್ ಬಿದಾಯಿ ಯೋಜನೆಯಡಿ ರೂ.050 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು 01 ಫಲಾನುಭವಿ ಇದರ ಪ್ರಯೋಜನ ಪಡೆದಿರುತ್ತಾರೆ.

4) ವಿದ್ಯಾಸಿರಿ :

ಅಲ್ಪಸಂಖ್ಯಾತರ ಸಮುದಾಯದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಸ್ಥಳಾವಕಾಶ ದೊರೆಯದೆ ಇರುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸದರಿ ಯೋಜನೆಯಡಿ ಪ್ರತಿ ಅರ್ಹ ವಿದ್ಯಾರ್ಥಿಗೆ ಮಾಹೆಯಾನ ರೂ.1500/–ರಂತೆ 10 ತಿಂಗಳ ಅವಧಿಗೆ ರೂ.15,000/–ಗಳ ವಿದ್ಯಾರ್ಥಿ ವೇತನವನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. 2017–18ನೇ ಸಾಲಿನಲ್ಲಿ ಬೆಂಗಳುರು ಗ್ರಾಮಾಂತರ ಜಿಲ್ಲೆಗೆ ರೂ.12.30 ಲಕ್ಷಗಳು ಒದಗಿಸಿದ್ದು, 82 ವಿದ್ಯಾರ್ಥಿಗಳು ಇದರ ಪ್ರಯೋಜನೆ ಪಡೆದಿರುತ್ತಾರೆ.

2) ನರ್ಸಿಂಗ್ ತರಬೇತಿ ಶಿಷ್ಯವೇತನ:

Paramedical/GNM /BSC ನರ್ಸಿಂಗ್ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಾರ್ಷಿಕವಾರು ರೂ. 35,000/– ಪ್ರೋತ್ಸಾಹ

ಧನವನ್ನು ನೀಡುತ್ತಿದ್ದು, ಸದರಿ ಹಣವನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. 2017–18ನೇ ಸಾಲಿನಲ್ಲಿ ಬೆಂಗ ಗ್ರಾಮಾಂತರ ಜಿಲ್ಲೆಗೆ ರೂ.1.75 ಲಕ್ಷಗಳು ಒದಗಿಸಿದ್ದು, 05 ವಿದ್ಯಾರ್ಥಿಗಳ ಇದರ ಪ್ರಯೋಜನೆ ಪಡೆದಿರುತ್ತಾರೆ.

3) ಮಾನ್ಯ ಮುಖ್ಯಮಂತ್ರಿಗಳ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ಕಾಲೋನಿ ಅಭಿವೃದ್ಧಿ ಯೋಜನೆ:

ಮಾನ್ಯ ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರರು ಶೇ.50% ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಾಸಮಾಡುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ ಮತ್ತು ಚರಂಡಿ/ಒಳಚರಂಡಿ ನಿರ್ಮಾಣಕ್ಕೆ 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.399.98 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಅದನ್ನು ದೇವನಹಳ್ಳಿ ಮತ್ತು ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ.50.00ಲಕ್ಷಗಳಂತೆ ಹಾಗೂ ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ.149.99ಲಕ್ಷಗಳಂತೆ ಒಟ್ಟು ರೂ.399.98ಲಕ್ಷಗಳು ವಿನಿಯೋಗಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳು 2018–19ನೇ ಸಾಲಿಗೂ ಮುಂದುವರೆದಿರುತ್ತವೆ. ಕಾರ್ಯಕ್ರಮಗಳ ಬಗ್ಗೆ ಮಾಹಿತಿಗಾಗಿ ಜಿಲ್ಲಾ ಮಾಹಿತಿ ಕೇಂದ್ರ, ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಹಾಗೂ ಆಯಾ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳನ್ನು ಸಂಪರ್ಕಿಸಿ ಅಲ್ಪಸಂಖ್ಯಾತ ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಸಾರ್ವಜನಿಕರು ವಿವರ ಪಡೆಯಬಹುದಾಗಿರುತ್ತದೆ.

2017–18ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಜಿಲ್ಲಾವಲಯ ಯೋಜನೆಯಡಿ ಒದಗಿಸಿದ ಅನುದಾನದ ವಿವರ

ಕ್ರ. ಸಂ	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ (ಯೋಜನೆ)	ಒದಗಿಸಿದ ಆಯವ್ಯಯ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ		ಖರ್ಚು		ಒಟ್ಟು ಖರ್ಚು	ಷರಾ
			ವೇತನ	ಇತರೆ	ವೇತನ	ಇತರೆ		
1	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು 2225–00–103–0–34	80.99	4.82	76.15	2.52	76.15	78.67	–
2.	ಅಲ್ಪಸಂಖ್ಯಾತರಿಗಾಗಿ ತರಬೇತಿ (ಕಾನೂನು ಪದವೀಧರರಿಗೆ ಶಿಷ್ಯವೇತನ) 2225–00–103–0–44	0.72	–	0.72	–	0.70	0.70	–
3.	ಕಾರ್ಯಕಾರಿ ಸಿಬ್ಬಂದಿ 2225–00–103–0–51	36.68	18.26	18.42	17.37	18.41	35.78	–
4.	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶಿಷ್ಯವೇತನ 2225–00–103–0–84	0.60	–	0.60	–	0.50	0.50	–
ಒಟ್ಟು		**118.99**	**23.08**	**95.89**	**19.89**	**95.76**	**115.65**	–

6. ಖಾದಿ ಮತ್ತು ಗ್ರಾಮೋದ್ಯೋಗ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯವರು ಸ್ವಯಂ ಉದ್ಯೋಗಸ್ಥರಾಗಿ ಸ್ವಾವಲಂಬಿಯಾಗಲು ಮತ್ತು ವೃತ್ತಿನಿರತ ಕುಶಲಕರ್ಮಿಗಳು ಕುಶಲ ಕಸುಬುಗಳಲ್ಲಿ ಕಾರ್ಯನಿರತವಾಗಿರುವ ವೃತ್ತಿಗಳಾದ ಮರಗೆಲಸ, ಕಮ್ಮಾರಿಕೆ, ಗಾರೆಕೆಲಸ, ಕ್ಷೌರಿಕ, ದೋಬಿ, ಕಲ್ಲುಕೆಲಸ, ಟೈಲರಿಂಗ್ ಇತ್ಯಾದಿ ಕುಶಲಕರ್ಮಿಗಳಿಗೆ ವೃತ್ತಿಯಲ್ಲಿ ಸಹಕಾರಿಯಾಗುವ ಸುಧಾರಿತ ಉಪಕರಣಗಳನ್ನು ವಿತರಿಸುವ ಯೋಜನೆ, ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ ಇರುವಂತಹ ಅಲ್ಪ ಬಂಡವಾಳದಲ್ಲಿ ಕೈಗೊಳಬಹುದಾದ ಕೈಗಾರಿಕಾ ಉತ್ಪನ್ನಗಳನ್ನು ತಯಾರಿಸುವ ಪ್ರಾತ್ಯೇಕ್ಷತ ತರಬೇತಿ ಹಾಗೂ ಅತೀ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು/ವಿಸ್ತರಣೆಗೆ/ಅಭಿವೃದ್ದಿಗೆ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಮೇಲೆ ಬಡ್ಡಿ ಸಹಾಯಧನವನ್ನು ನೀಡುವ ಯೋಜನೆಗಳನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

1. ಜಿಲ್ಲಾ ಔದ್ಯಮಿಕ ಕೇಂದ್ರ (2851–00–107–0–27)

ಈ ಯೋಜನೆಯಡಿ 2017–18ನೇ ಸಾಲಿಗೆ ರೂ.43.56 ಲಕ್ಷ ಆರ್ಥಿಕ ಗುರಿ ಮತ್ತು 200 ಭೌತಿಕ ಗುರಿ ನಿಗಧಿಪಡಿಸಿ, ಸದರಿ ಗುರಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆ. 4 ತಾಲ್ಲೂಕುಗಳಲ್ಲಿ 200 ಮಂದಿ ವೃತ್ತಿನಿರತ ನಿರುದ್ಯೋಗಿ ಯುವತಿ/ಮಹಿಳೆಯರಿಗೆ ಗರಿಷ್ಠ ರೂ.5000/– ಮೌಲ್ಯದ ಹೊಲಿಗೆ ಯಂತ್ರವನ್ನು ಉಚಿತವಾಗಿ ವಿತರಿಸಲಾಗಿದೆ.

ಬಿಡುಗಡೆಯಾದ 43.56 ಲಕ್ಷಗಳಲ್ಲಿ ವೇತನ ಮತ್ತು ವೇತನೇತರ ವೆಚ್ಚಕ್ಕಾಗಿ ನಿಗದಿ ಪಡಿಸಿದ ಅನುದಾನ ರೂ 33.56 ಗಳಲ್ಲಿ Rs. 29.5 ಲಕ್ಷಗಳು ವೆಚ್ಚವಾಗಿದ್ದು, ಫಲಾನುಭವಿವಾರು ಕಾರ್ಯಕ್ರಮಕ್ಕೆ ನಿಗದಿಯಾದ ರೂ.10.00 ಲಕ್ಷಗಳಲ್ಲಿ, 200 ಮಂದಿ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರಗಳನ್ನು ವಿತರಿಸಲು ರೂ.10.00 ಲಕ್ಷ ವೆಚ್ಚ ಭರಿಸಿದೆ.

2. ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆ (2851–00–107–0–32)

ಈ ಯೋಜನೆಯಡಿ 2017–18ನೇ ಸಾಲಿಗೆ ರೂ.10.00 ಲಕ್ಷ ಆರ್ಥಿಕ ಗುರಿ ಮತ್ತು 200 ಭೌತಿಕ ಗುರಿ ನಿಗಧಿಪಡಿಸಿದ್ದು, ಸದರಿ ಗುರಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಯೋಜನೆಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ, ಅವರ ವೃತ್ತಿಗನುಗುಣವಾಗಿ ಅಂದರೆ ಮರಗೆಲಸ, ಕಮ್ಮಾರಿಕೆ, ಗಾರೆಕೆಲಸ, ಕ್ಷೌರಿಕ, ದೋಬಿ, ಕಲ್ಲುಕೆಲಸದ 202 ಮಂದಿ ಕುಶಲಕರ್ಮಿಗಳಿಗೆ ಹಂಚಿಕೆಯಾದ ರೂ.10 ಲಕ್ಷಗಳಲ್ಲಿ, ಗರಿಷ್ಠ ರೂ.5000/– ಬೆಲೆಯ ಉಪಕರಣಗಳನ್ನು ಉಚಿತವಾಗಿ ವಿತರಿಸಲು ರೂ.9.94 ಲಕ್ಷ ವೆಚ್ಚವಾಗಿದೆ.

3. ವಿಚಾರ ಸಂಕಿರಣ / ವಸ್ತುಪ್ರದರ್ಶನ (2851–00–107–0–34)

ಈ ಯೋಜನೆಯಡಿ 2017–18 ನೇ ಸಾಲಿಗೆ ರೂ.10.00 ಲಕ್ಷ ಆರ್ಥಿಕ ಗುರಿ ನಿಗದಿ ಪಡಿಸಿಲಾಗಿರುತ್ತದೆ.

ಅದರಂತೆ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ನಮ್ಮ ಜಿಲ್ಲೆಯನ್ನು ಬಿಂಬಿಸುವ ಸ್ಥಬ್ದ ಚಿತ್ರವನ್ನು ನಿರ್ಮಿಸಿಲು ರೂ 9.97 ಲಕ್ಷ ವೆಚ್ಚ ಭರಿಸಲಾಗಿದೆ.

4. ಕುಶಲರ್ಮಿಗಳಿಗೆ ಬಡ್ಡಿ ಸಹಾಯಧನ ಯೋಜನೆ. (2851–00–107–0–39)

ಈ ಯೋಜನೆಯಡಿ 2017–18ನೇ ಸಾಲಿಗೆ ರೂ.4.00 ಲಕ್ಷ ಆರ್ಥಿಕ ಗುರಿಯಿದ್ದು, ಇದನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಿಗೆ ಸಮನಾಗಿ ಹಂಚಿಕೆ ಮಾಡಿದ್ದು, ಸದರಿ ಯೋಜನೆಯಡಿ ಹಣಕಾಸು ಸಂಸ್ಥೆಗಳಿಂದ ರೂ.5.00 ಲಕ್ಷಗಳ ಒಳಗೆ ಸಾಲ ಪಡೆದಿರುವ ಕುಶಲಕರ್ಮಿ / ಅತೀ ಸಣ್ಣ ಕೈಗಾರಿಕೆಗಳಿಗೆ ಇಲಾಖಾ ಮಾರ್ಗಸೂಚಿ ಪ್ರಕಾರ ಹಣಕಾಸು ಸಂಸ್ಥೆಯವರು ವಿಧಿಸಿರುವ ಬಡ್ಡಿಯ ಶೇಕಡ 7ರ ಮೇಲ್ಪಟ್ಟು ಬಡ್ಡಿಯನ್ನು ಗರಿಷ್ಠ ಶೇಕಡ 5.ರ ಮಿತಿಗೊಳಪಟ್ಟು ಬಡ್ಡಿ ಸಹಾಯಧನವಾಗಿ ರೂ 4.0 ಲಕ್ಷಗಳನ್ನು ನೇರವಾಗಿ 46 ಫಲಾನುಭವಿಗಳ ಬ್ಯಾಂಕ್ ಸಾಲದ ಖಾತೆಗೆ ಜಮಾ ಮಾಡಲಾಗಿದೆ.

7. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸರ್ವೇಜನಾ ಸುಖಿನೋ ಭವಂತು ಎಂಬ ನಾಣ್ನುಡಿಯಂತೆ ಎಲ್ಲರಿಗೂ ಆರೋಗ್ಯ ಭಾಗ್ಯ ಎಂಬ ಸರ್ಕಾರದ ಘೋಷಣೆಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು 4 ತಾಲ್ಲೂಕುಗಳನ್ನೊಳಗೊಂಡು, ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಗ್ರಾಮಾಂತರ ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ 4 ತಾಲ್ಲೂಕ್ ಆಸ್ಪತ್ರೆಗಳು, 48 ಪ್ರಾಥಮಿಕ ಆರೋಗ್ಯ ಕೇಂದ್ರಗಳು 2 ಸಮುದಾಯ ಆರೋಗ್ಯ ಕೇಂದ್ರಗಳು,ಹಾಗೂ ಗ್ರಾಮೀಣ ಮಟ್ಟದಲ್ಲಿ 199 ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ರೂಪಿಸಿರುವ ಆರೋಗ್ಯ ಸೇವಾ ಸೌಲಭ್ಯಗಳು ಈ ರೀತಿ ಇರುತ್ತವೆ. ಹಾಗೂ 2 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಿರುತ್ತದೆ. ಮತ್ತು ಹೊಸಕೋಟೆ ತಾಲ್ಲೂಕು, ದೇವನಹಳ್ಳಿ ತಾಲ್ಲೂಕಿನಲ್ಲಿ ಆರೋಗ್ಯ ವಿಸ್ತರಣಾ ಘಟಕ ಸ್ಥಾಪನೆಯಾಗಿರುತ್ತದೆ.

ಕುಟುಂಬ ಕಲ್ಯಾಣ ಕಾರ್ಯಕ್ರಮ :–

ಕುಟಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪ್ರತಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾಹೆಯಲ್ಲಿ 4 ಶಿಭಿರಗಳನ್ನು ಏರ್ಪಡಿಸಿ ಅರ್ಹದಂಪತಿಗಳಿಗೆ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗಳನ್ನು ನೆರವೇರಿಸಲಾಗುತ್ತಿದೆ. ಪುರುಷರಿಗೆ ನೋ–ಸ್ಕಾಲ್ಪೆಲ್ ವ್ಯಾಸೆಕ್ಟಮಿ ಶಿಭಿರಗಳನ್ನು ಪ್ರತಿ ತಿಂಗಳಲ್ಲಿ ಏರ್ಪಡಿಸಿ ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಜಿಲ್ಲೆಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ ಸಂತಾನಹರಣ ಶಸ್ತ್ರ ಚಿಕಿತ್ಸೆಯ ಗುರಿ 5940 ಇದ್ದು 3929 ಫಲಾನುಭವಿಗಳಿಗೆ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ.ಈ ಪೈಕಿ 48 ಪುರುಷ ಫಲಾನುಭವಿಗಳಿಗೆ ನೋ–ಸ್ಕಾಲ್‌ಪಾಲ್ ವ್ಯಾಸೆಕ್ಟಮಿ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ. ಮಹಿಳೆಯರಿಗೆ ವಂಕಿ ಅಳವಡಿಕೆಯಲ್ಲಿ ವಾರ್ಷಿಕ ಗುರಿ 5100 ಇದ್ದು, 2787 ಫಲಾನುಭವಿಗಳಿಗೆ ಯಶಸ್ವಿಯಾಗಿ ವಂಕಿ ಅಳವಡಿಸಲಾಗಿದೆ. ನಿರೋದ್ ವಿತರಣೆಯಲ್ಲಿ ವಾರ್ಷಿಕ ಗುರಿ 7290 ನಿಗದಿಯಾಗಿದ್ದು,8010 ಸಾಧನೆಯಾಗಿರುತ್ತದೆ. ಅಂತೆಯೇ ನುಂಗುವ ಗುಳಿಗೆಯಲ್ಲಿ 6100 ಗುರಿ ನಿಗಧಿಯಾಗಿದ್ದು 4286 ರಷ್ಟು ಸಾಧನೆಯಾಗಿರುತ್ತದೆ.

ಲಸಿಕಾ ಕಾರ್ಯಕ್ರಮ :–

ಲಸಿಕಾ ಕಾರ್ಯಕಮ್ರದಡಿಯಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವು ಪ್ರತಿ ಗುರುವಾರ ಉಪ–ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರ/ತಾಲ್ಲೂಕು ಆಸ್ಪತ್ರೆಗಳಲ್ಲಿ ನಡೆಯುತ್ತದೆ. ಸದರಿ ಆರೋಗ್ಯ ಸಂಸ್ಥೆಗಳಿಗೆ ಮಕ್ಕಳನ್ನು ಕರೆತರುವವರಿಗೆ ರೂ.100/–ಗಳನ್ನು ಒಂದು ಅಧಿವೇಶನಕ್ಕೆ (ಸೆಷನ್) ಹಾಗೂ ಲಸಿಕಾ ಸಾಗಣೆದಾರರಿಗೆ ರೂ.75=00 ನೀಡಲಾಗುತ್ತಿದೆ.

ಸದರಿ ಕಾರ್ಯಕ್ರಮದಡಿಯಲ್ಲಿ 2017–18ನೇ ಸಾಲಿನಲ್ಲಿ ಪೆಂಟಾವಲೆಂಟ್/ಪೋಲಿಯೋ ಲಸಿಕೆ ಹಾಕಲು ವಾರ್ಷಿಕ ಗುರಿ 14347 ಇದ್ದು, 14643 ಮಕ್ಕಳಿಗೆ ಲಸಿಕೆ ಹಾಕಲಾಗಿದೆ. ಅದೇ ರೀತಿ ಬಿ.ಸಿ.ಜಿ. ಲಸಿಕೆ ಹಾಕಲು ವಾರ್ಷಿಕ ಗುರಿ 14347 ನಿಗದಿಯಾಗಿದ್ದು, 9239 ಸಾಧನೆಯಾಗಿರುತ್ತದೆ. ಅಂತೆಯೇ ಗರ್ಭಿಣಿಯರಿಗೆ ಟಿ.ಟಿ. ಲಸಿಕೆಗಳನ್ನು ನೀಡುವಲ್ಲಿ ವಾರ್ಷಿಕ ಗುರಿ 16400 ನಿಗದಿಯಾಗಿದ್ದು, 12831 ರಷ್ಟು ಸಾಧನೆಯಾಗಿರುತ್ತದೆ.

ಪಲ್ಸ್ ಪೋಲಿಯೋ ಕಾರ್ಯಕ್ರಮ :–

2018ನೇ ಸಾಲಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವು ಭಾರತ ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಅನುಷ್ಠಾನಗೊಳಿಸಲಾಯಿತು. ಮಾರ್ಚ್–2018ರ ಎರಡನೇ ಸುತ್ತಿನಲ್ಲಿ ಒಟ್ಟು 117771 ಮಕ್ಕಳಿಗೆ ಲಸಿಕೆ ಹಾಕುವ ಗುರಿಯನ್ನು ಹೊಂದಿದ್ದು, 118893 ರಷ್ಟು ಮಕ್ಕಳಿಗೆ ಲಸಿಕೆ ಹಾಕಲಾಗಿದೆ. ಸಾಧನೆ ಶೇ.101%.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮ:–

1. Village Health Sanitation and Natriation ಸಮಿತಿಗಳಿಗೆ ಪ್ರಾರಂಭಿಕ ಶುಲ್ಕ ಒಳಗೊಂಡಂತೆ 765 ಸಮಿತಿಗಳಿಗೆ ಒಟ್ಟು ರೂ 63,56,764/– ಗಳಂತೆ ಅನುದಾನ ಬಿಡುಗಡೆ ಮಾಡಲಾಗಿದೆ.
2. 157 ಉಪಕೇಂದ್ರ ಸಮಿತಿಗಳಿಗೆ ಒಟ್ಟು ರೂ 12,58,121/–ರೂ ಗಳಂತೆ ಅನುಧಾನ ಬಿಡುಗಡೆ ಮಾಡಲಾಗಿದೆ.
3. ಆರೋಗ್ಯ ರಕ್ಷಾ ಸಮಿತಿ. ಯ 48 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೂ 38,94,799=00 2 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒಟ್ಟು ರೂ 195,000/– ಅನುದಾನ ನೀಡಿದೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳಿಗೆ 11,58,773/– ಅನುದಾನವನ್ನು ನೀಡಿದೆ.

ಪ್ರಸೂತಿ ಆರೈಕೆ ಕಾರ್ಯಕ್ರಮ :–

ಪ್ರಸೂತಿ ಆರೈಕೆ:– ಸದರಿ ಕಾರ್ಯಕ್ರಮದಲ್ಲಿ 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕಿನ ಮಹಿಳೆಯರಿಗೆ ರೂ.60,25,000=00 ಪ್ರೋತ್ಸಾಹ ಧನವನ್ನು ಹೆರಿಗೆಯಾದ 2 ದಿನದೊಳಗೆ ನೀಡಲಾಗಿದೆ.

ಮಡಿಲುಕಿಟ್:– ಮಡಿಲುಕಿಟ್ ಗಳನ್ನು ಅರ್ಹಮಹಿಳೆಯರಿಗೆ ನೀಡಲಾಗುತ್ತಿದೆ. 2017–18 ನೇ ಸಾಲಿಗೆ ರಾಜ್ಯದಿಂದ ಸರಬರಾಜು ಮಾಡಿರುವುದಿಲ್ಲ. ಆದರೆ ಜಿಲ್ಲೆಯಲ್ಲಿ ಈ ಹಿಂದೆ ಉಳಿದ 815 ಮಡಿಲುಕಿಟ್‌ಗಳನ್ನು ವಿತರಿಸಲಾಗಿದೆ.

ಜನನಿ ಸುರಕ್ಷ:– ಯೋಜನೆಯಡಿಯಲ್ಲಿ 4944 ಫಲಾನುಭಿಗಳಿಗೆ ರೂ 3,67,4000=00 ರೂ ಗಳನ್ನು ವಿತರಿಸಲಾಗಿದೆ.

ಜಿಲ್ಲೆಯಲ್ಲಿ 2017–18ನೇ ಸಾಲಿನಲ್ಲಿ 14720 ಹೆರಿಗೆಗಳ ಗುರಿ ಇದ್ದು, ಒಟ್ಟು 9083 (62%) ಹೆರಿಗೆಗಳನ್ನು ನೆರವೇರಿಸಲಾಗಿದೆ ಈ ಪೈಕಿ ಆರೋಗ್ಯ ಸಂಸ್ಥೆಗಳಲ್ಲಿ 9079 (99%) ರಷ್ಟು ಹೆರಿಗೆಗಳನ್ನು ನೆರವೇರಿಸಲಾಗಿದೆ.

ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮ (ಆರ್.ಬಿ.ಎಸ್.ಕೆ.)

ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮದಡಿಯಲ್ಲಿ ಕ್ರಿಯಾ ಯೋಜನೆ ರೂಪಿಸಿರುವಂತೆ 1 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಲಾಯಿತು ಕೆಲವು ಮಕ್ಕಳಿಗೆ ವಿಶೇಷ ತಜ್ಞರಿಂದ ಆರೋಗ್ಯ ತಪಾಸಣೆ ಮಾಡಲಾಯಿತು ಜಿಲ್ಲೆಯಲ್ಲಿ ಒಟ್ಟು 1247 ಪ್ರಾಥಮಿಕ ಶಾಲೆಗಳು ಮತ್ತು 1229 ಅಂಗನವಾಡಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು ಮಕ್ಕಳ ಸಂಖ್ಯೆ: 203708 ಇದ್ದು, ಈ ಪೈಕಿ ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮದಡಿಯಲ್ಲಿ 194476 ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಮಾಡಲಾಗಿದೆ. ಶೇ% 95.47% ಆಗಿರುತ್ತದೆ 9232 ಉಳಿದ ಮಕ್ಕಳನ್ನು 2018–19 ನೇ ಸಾಲಿನಲ್ಲಿ ಆರೋಗ್ಯ ತಪಾಸಣೆ ಮಾಡಲಾಗುವುದು.

ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ :–

ಜಿಲ್ಲೆಯಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ (ಆರ್,ಎನ್,ಟಿ,ಸಿ,ಪಿ,) ಕಾರ್ಯಕ್ರಮವು ಜಾರಿಗೆ ಬಂದಿರುತ್ತದೆ. ಸದರಿ ಕಾರ್ಯಕ್ರಮದಂತೆ ಜಿಲ್ಲೆಯನ್ನು 4 ಕ್ಷಯರೋಗ ಘಟಕಗಳನ್ನಾಗಿ ವಿಭಜಿಸಲಾಗಿದೆ. ಸರಾಸರಿ 2.5 ಲಕ್ಷ ಜನಸಂಖ್ಯೆಗೆ 1 ರಂತೆ ಕ್ಷಯರೋಗ ಘಟಕಗಳನ್ನು ಗುರ್ತಿಸಲಾಗಿದೆ. 1 ತಾಲ್ಲೂಕುಗಳನ್ನೊಳಗೊಂಡಂತೆ 1 ಕ್ಷಯ ರೋಗ ಘಟಕವಿರುತ್ತದೆ.ಹಾಗೂ ಪ್ರತಿ ಕ್ಷಯರೋಗ ಘಟಕದಲ್ಲಿ 1 ಲಕ್ಷ ಜನಸಂಖ್ಯೆಗೆ 1ರಂತೆ 11 ಕ್ಷಯರೋಗ ಸೂಕ್ಷ್ಮದರ್ಶಕ ಕೇಂದ್ರಗಳನ್ನು ಗುರ್ತಿಸಲಾಗಿದೆ. (Link DMC/ 4 ಜೋಡಣೆ ಸೂಕ್ಷ್ಮದರ್ಶಕ ಕೇಂದ್ರಗಳು)

ಲಕ್ಷ ಜನಸಂಖ್ಯೆಗೆ 1ರಂತೆ 11 ಕ್ಷಯರೋಗ ಸೂಕ್ಷ್ಮದರ್ಶಕ ಕೇಂದ್ರಗಳನ್ನು ಗುರ್ತಿಸಲಾಗಿದೆ. (Link DMC/ 4 ಜೋಡಣೆ ಸೂಕ್ಷ್ಮದರ್ಶಕ ಕೇಂದ್ರಗಳು)

ಸದರಿ ಕಾರ್ಯಕ್ರಮದಲ್ಲಿ 2017–18 ನೇ ಸಾಲಿನಲ್ಲಿ 6400 ರೋಗಿಗಳ ಪತ್ತೆ ಹಚ್ಚುವ ಗುರಿ ಇದ್ದು 10283 ರಷ್ಟು ಸಾಧನೆಯಾಗಿದೆ ಅಂತೆಯೇ ಕಫಾ ಪರೀಕ್ಷೆಯಲ್ಲಿ ವಾರ್ಷಿಕ ಗುರಿ 2304 ನಿಗದಿಯಾಗಿದ್ದು 992 ರಷ್ಟು ಸಾಧನೆಯಾಗಿರುತ್ತದೆ. ಹಾಗೂ Conversion. 440/520= 85 %, Cured, 379/482= 79% ಸಾಧನೆಯಾಗಿರುತ್ತದೆ. MDR ಕ್ಷಯರೋಗಿಗಳು On hand MDR Cases 22 no ಇರುತ್ತದೆ. ಹಾಗೂ ಮಾರ್ಚಿ–2018 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಃಟಂಂಐ ಯಂತ್ರವನ್ನು ಅಳವಡಿಸಿದ್ದು ಇದರಲ್ಲಿ ಇನ್ನು ಅತಿ ಹೆಚ್ಚು ಹೆಚ್ಚು ಕ್ಷಯರೋಗಿಗಳನ್ನು ಪತ್ತೆ ಹಚ್ಚಿ ನಮ್ಮ ಜಿಲ್ಲೆಯಲ್ಲಿ ಕ್ಷಯರೋಗ ನಿರ್ಮೂಲನೆ ಮಾಡಬೇಕೆಂದು ನಮ್ಮ ಗುರಿಯಾಗಿರುತ್ತದೆ.

ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮ :–

ಸಾಂಕ್ರಾಮಿಕ ರೋಗಗಳ ವರದಿ. 2017.									
ಕ್ರ.ಸ	ಸಾಂಕ್ರಾಮಿಕ ರೋಗಗಳು	ಡಿಸೆಂಬರ್–2017				ಡಿಸೆಂಬರ್–2016			
		ಪ್ರಸಕ್ತ ಮಾಹೆ		ಪ್ರಸಕ್ತ ಮಾಹೆ		ಪ್ರಸಕ್ತ ಮಾಹೆ		ಪ್ರಸಕ್ತ ಮಾಹೆ	
		ಹರಡಿದ್ದು	ಮರಣ	ಹರಡಿದ್ದು	ಮರಣ	ಹರಡಿದ್ದು	ಮರಣ	ಹರಡಿದ್ದು	ಮರಣ
1	ಕರಳು ಬೇನೆ	219	0	3962	0	526	0	612	0
2	ಕಾಲರ	0	0	0	0	0	0	0	0
3	ಅರಶಿನ ಕಾಮಾಲೆ	0	0	0	0	0	0	20	0
4	ವಿಷಮಶೀತಜ್ವರ	100	0	2801	0	449	0	1813	0
5	ಮಂಗನ ಕಾಯಿಲೆ	0	0	0	0	0	0	0	0
6	ಹಂದಿಗೋಡು	0	0	0	0	0	0	0	0
7	ಲೆಪ್ಟೊಸ್ಪೈರೋಸಿಸ್	0	0	0	0	0	0	0	0
8	ನಾರು ಹುಣ್ಣು	0	0	0	0	0	0	0	0
9	ಪ್ಲೇಗ್	0	0	0	0	0	0	0	0
10	ನಾಯಿ ಕಡಿತ	767	0	7744	0	665	0	6496	0
11	ಹಾವು ಕಡಿತ	6	0	70	0	05	0	51	1
12	ಆಂಥ್ರಾಕ್ಸ್	0	0	0	0	0	0	0	0
13	ರೇಬೀಸ್	0	0	0	0	0	0	0	0

ಮಲೇರಿಯಾ ನಿಯಂತ್ರಣ ಕಾರ್ಯಕ್ರಮ :–

ಮಲೇರಿಯಾ ರೋಗವು ಆರೋಗ್ಯವಂತನಿಗೆ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯ ಮೂಲಕ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆ ರೋಗ ಹರಡುವ ಸೊಳ್ಳೆಗಳನ್ನು ನಾಶಗೊಳಿಸುವುದು ಮತ್ತು ಆರೋಗ್ಯವಂತನನ್ನು ರೋಗಕ್ಕೆ ತುತ್ತಾಗದಂತೆ ರಕ್ಷಿಸುವುದು ಹಾಗೂ ಮನೆಯ

ಪರಿಸರವನ್ನು ಶುಚಿಯಾಗಿಟ್ಟುಕೊಳ್ಳುವುದು, ರೋಗಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಿ ರೋಗದಿಂದ ಮುಕ್ತನನ್ನಾಗಿ ಮಾಡುವುದು,(ಮಲೇರಿಯಾ ಪ್ಯಾರಸೈಟ್).

ಈ ನಿಟ್ಟಿನಲ್ಲಿ ಇಲಾಖೆಯ ಆರೋಗ್ಯ ಕಾರ್ಯಕರ್ತರು ಸಮೀಕ್ಷಾ ಕಾರ್ಯ ಕೈಗೊಂಡು, ಮನೆ ಮನೆಗೆ ಭೇಟಿ ನೀಡಿ ಜ್ವರ ಕಾಣಿಸಿಕೊಂಡವರ ರಕ್ತಲೇಪನ ತೆಗೆದು ಅವರಿಗೆ ಮಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಅಂತೆಯೇ ಆಸ್ಪತ್ರೆಗಳಲ್ಲಿಯೂ ಸಹಾ ಚಿಕಿತ್ಸೆ ನೀಡಲಾಗುವುದು. 2017ನೇ ವರ್ಷದಲ್ಲಿ 129024 ರಕ್ತ ಲೇಪನ ಸಂಗ್ರಹಣಾ ಗುರಿ ಇದ್ದು 92785 ರಷ್ಟು ಸಾಧನೆಯಾಗಿದೆ. 03 ದೃಡಪಟ್ಟ ಮಲೇರಿಯಾ ಪ್ರಕರಣಗಳು ದಾಖಲಾಗಿ ಅವರುಗಳಿಗೆ ಸಮರ್ಪಕವಾಗಿ ಸಂಪೂರ್ಣವಾಗಿ ತೀವ್ರ ಚಿಕಿತ್ಸೆ ನೀಡಲಾಗಿದೆ.

2017ನೇ ಸಾಲಿನಲ್ಲಿ 36 ದೃಡಪಟ್ಟ ಡೆಂಗ್ಯೂ ಪ್ರಕರಣಗಳು ವರದಿಯಾಗಿರುತ್ತದೆ. 26 ದೃಡಪಟ್ಟ ಚಿಕನ್ ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ. ಈ ಪೈಕಿ ಯಾವುದೇ ಸಾವು ಸಂಭವಿಸಿರುವುದಿಲ್ಲ.

ಅಂಧತ್ವ ನಿವಾರಣಾ ಕಾರ್ಯಕ್ರಮ :–

ಸದರಿ ಕಾರ್ಯಕ್ರಮದಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ಐ.ಒ.ಎಲ್. ಅಳವಡಿಕೆಯ ಸುಲಭ ಹಾಗೂ ಸುರಕ್ಷಿತ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಈ ಕಾರ್ಯಕ್ರಮದಡಿ 2017–18 ಸಾಲಿನಲ್ಲಿ 1 ರಿಂದ 10 ನೇ ತರಗತಿಯಲ್ಲಿ ಓದುತ್ತಿರುವ 85688 ಮಕ್ಕಳಿಗೆ ಕಣ್ಣಿನ ತಪಾಸಣೆ ಮಾಡಲಾಗುತ್ತಿದೆ. ಗ್ರಾಮೀಣ ಮಟ್ಟದಲ್ಲಿ ಕಣ್ಣಿನ ತಪಾಸಣೆ ಮಾಡಲಾಗಿದ್ದು, ಇದರಲ್ಲಿ 1450 ಮಕ್ಕಳಿಗೆ ಉಚಿತ ಕನ್ನಡಕಗಳು ವಿತರಣೆ ಮಾಡಲಾಗಿದೆ. ಗ್ರಾಮೀಣ ಮಟ್ಟದಲ್ಲಿ ಕಣ್ಣಿನ ಪೊರೆ ಇರುವ ಫಲಾನುಭವಿಗಳಿಗೆ ಉಚಿತವಾಗಿ ನುರಿತ ವೈದ್ಯರುಗಳಿಂದ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ನಿಗದಿಪಡಿಸಿದ ದಿನಾಂಕಗಳಂದು ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಗ್ರೋಬ್ ಐ ಫೌಂಟೇಷನ್, ಲಯನ್ಸ್ ಐ ಆಸ್ಪತ್ರೆ, ಪ್ರಾಜೆಕ್ಟ್ ದೃಷ್ಟಿ ಹಾಗೂ ಎಂ.ವಿ.ಜೆ ಮೆಡಿಕಲ್ ಕಾಲೇಜ್ ಹೊಸಕೋಟೆ ಇವರ ವತಿಯಿಂದಲೂ ಸಹ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುವುದು. 2017–18ನೇ ಸಾಲಿನಲ್ಲಿ ಜಿಲ್ಲೆಗೆ 6570 ಗುರಿ ನಿಗದಿಯಾಗಿದ್ದು, 6596 ರಷ್ಟು ಫಲಾನುಭವಿಗಳಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲಾಗಿದೆ. ಹಾಗೂ ವಯಸ್ಸಾದ ವೃದ್ದರಿಗೆ ಹತ್ತಿರದ ದೃಷ್ಟಿ ದೋಷದಿಂದ ಬಳಲುತ್ತಿರುವವರಿಗೆ 1818 ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಗಿದೆ.

ಕುಷ್ಟರೋಗ ನಿರ್ಮೂಲನಾ ಕಾರ್ಯಕ್ರಮ :–

ಕುಷ್ಟರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಮಾರ್ಪಡಿತ ಕುಷ್ಠರೋಗ ನಿವಾರಣಾ ಆಂಧೋಲನದಲ್ಲಿ ರೋಗಿಗಳು ಸ್ವಯಂ ಪ್ರೇರಿತರಾಗಿ ವರದಿ ಕೇಂದ್ರಗಳಿಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದಾರೆ. 2017–18ನೇ ಸಾಲಿನಲ್ಲಿ 26 ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಅಂತೆಯೇ, 20 ರೋಗಿಗಳನ್ನು ಗುಣಪಡಿಸಲಾಗಿದೆ.

2017–18ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿ ಪಡಿಸಿರುವ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ಒಟ್ಟಾರೆ ಅನುದಾನದ ವಿವರ (ಲಕ್ಷ ರೂ.ಗಳಲ್ಲಿ)

ಮುಖ್ಯ ಲೆಕ್ಕ ಶೀರ್ಷಿಕೆ	ನಿಗದಿಯಾದ ಅನುದಾನ. ರೂ	ಬಿಡುಗಡೆಯಾದ ಅನುದಾನ ರೂ	ವೆಚ್ಚ ರೂ
2210–2211	2539.04	2539.04	2327.29
2211 ಕೇಂದ್ರ ಪುರಸ್ಕೃತ ಯೋಜನೆ	1002.10	1002.10	959.36
2210 (ತಾ.ಪಂ.)	77.21	77.21	69.96
ಒಟ್ಟು ರೂ	**3618.35**	**3618.35**	**3386.61**

2017–18ನೇ ಸಾಲಿನಲ್ಲಿ ಕಟ್ಟಡಗಳ ದುರಸ್ಥಿ ಮತ್ತು ಔಷದಿ ಖರೀದಿಗೆ ನಿಗದಿಯಾದ ಅನುದಾನ ದ ವಿವರ

ಕ್ರ.ಸ	ಲೆಕ್ಕ ಶೀರ್ಷಿಕೆ	ನಿಗಧಿಯಾದ ಅನುದಾನ (ಲಕ್ಷ ರೂ.ಗಳಲ್ಲಿ)	ಖರ್ಚಾದ ಮೊತ್ತ (ಲಕ್ಷ ರೂ.ಗಳಲ್ಲಿ)
1	2210–00–101–0–36 ಯೋಜನೆ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ	40.00	39.34.
2	2210–00–103–0–43 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯ ಚಿಕಿತ್ಸೆ ಉಪಕರಣಗಳು/ ಸಲಕರಣೆಗಳ ಖರೀದಿ	40.00	39.90
3	2210–00–103–0–45 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯಚಿಕಿತ್ಸೆ,ಉಪಕರಣಗಳು/ಸಲಕರಣೆಗಳ ಖರೀದಿ	15.00	14.99
4	2210–00–102–0–40 ಯೋಜನೆ ಸಲಕರಣೆಗಳು ಮತ್ತು ಪಿಠೋಪಕರಣಗಳ ದುರಸ್ತಿ	10.00	9.89
5	*2210–00–106–0–53(ಯೋಜನೆ)* ಯೋಜನೆ ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಔಷಧಿ ಪೂರೈಕೆಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ	10.00	9.84
	ಒಟ್ಟು	**115.00**	**113.96**

Bio Medical Waste Management Information

Levels of Hospitals	No of Health Care Facilities	Progress on Bio Medical Waste Handling Rules		
		Name of HCF Tie up with CTF	Liquid Waste Disinfection Unit Completed	Deep Burial & Sharp Pit Completed
District Hospital	0	0	0	0
Taluka Level Hospital	4	4	4	4
Community Health Center	2		2	2
Primary Health Center	48	6	45	45

8. ಆಯುಷ್ ಇಲಾಖೆ

ಸಾರ್ವಜನಿಕರ ಆರೋಗ್ಯ ಸೇವೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ಆಯುಷ್ ಇಲಾಖೆಯು ಸಹ ಒಂದು ಭಾಗ. ಈ ಭಾರತೀಯ ವೈದ್ಯ ಪದ್ಧತಿಗಳಲ್ಲಿ ಆಯುರ್ವೇದ, ಯುನಾನಿ, ಹೋಮಿಯೋಪತಿ, ಸಿದ್ದ ಹಾಗೂ ಯೋಗಾ ಪ್ರಕೃತಿ ಚಿಕಿತ್ಸೆ ಎಂಬ ಐದು ವಿವಿಧ ಪದ್ಧತಿಗಳ ಮುಖಾಂತರ ಸಾರ್ವಜನಿಕ ಆರೋಗ್ಯ ಸೇವೆಯನ್ನು ನಿರ್ವಹಿಸುವ ಮೂಲ ಕಾರ್ಯಕ್ರಮವಾಗಿದೆ. ಹಾಗೂ ಚಿಕಿತ್ಸಾಲಯಗಳ ಆವರಣದಲ್ಲಿ ಔಷಧಿ ಸಸ್ಯಗಳನ್ನು ಬೆಳಸಲು ಕೆಲವುಕಡೆ ಸ್ಥಳಾವಕಾಶ ಸಹ ಇರುತ್ತದೆ. ಇಲ್ಲಿ ಬೆಳೆಯುವಂತಹ ಔಷಧಿ ಸಸ್ಯಗಳನ್ನು ಉಪಯೋಗಿಸಿಕೊಂಡು ಕೆಲವು ಸಣ್ಣ ಖಾಯಿಲೆಗಳಿಗೆ ಕಷಾಯಗಳನ್ನು ಮತ್ತಿತರ ಔಷಧಿಗಳನ್ನು ತಯಾರು ಮಾಡಿಕೊಡಲು ಅನುಕೂಲವಾಗುತ್ತಿದೆ. ಜನರಲ್ಲಿ ಮನೆಮದ್ದು ಅರಿವು ಈ ಮುಖಾಂತರ ಮಾಡಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಕೆಳಕಂಡಂತೆ ಆಯುರ್ವೇದ/ಯುನಾನಿ/ ಹೋಮಿಯೋಪತಿ ಚಿಕಿತ್ಸಾಲಯಗಳು/ಆಸ್ಪತ್ರೆಗಳು ತಾಲ್ಲೂಕುವಾರು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

1	ದೊಡ್ಡಬಳ್ಳಾಪುರ ತಾಲ್ಲೂಕು	1	ಸರ್ಕಾರಿ ಆಯುರ್ವೇದ ಆಸ್ಪತ್ರೆ, ದೊಡ್ಡಬಳ್ಳಾಪುರ–6ಹಾಸಿಗೆ.
		2	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೋಲಿಗೆರೆ.
		3	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹಣಬೆ.
		4	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೋಡಿಹಳ್ಳಿ.
2	ನೆಲಮಂಗಲ ತಾಲ್ಲೂಕು	1	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮಂಟನಕುರ್ಚಿ.
		2	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಂಟಗಾನಹಳ್ಳಿ.
		3	ಸರ್ಕಾರಿ ಯುನಾನಿ ಚಿಕಿತ್ಸಾಲಯ, ಇಸ್ಲಾಂಪುರ.
		4	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ, ಭೈರಸಂದ್ರ.
3	ದೇವನಹಳ್ಳಿ ತಾಲ್ಲೂಕು	1	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೆಗ್ಗನಹಳ್ಳಿ.

ಜಿಲ್ಲಾ ಯೋಜನೆ ಅಡಿಯಲ್ಲಿ ಬರುವ ಕಾರ್ಯಕ್ರಮಗಳ ವಿವರಗಳು

1	2210–00–105–0–38 ಕಟ್ಟಡಗಳು	ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರಿಂದ ಆಯುಷ್ ಇಲಾಖೆಯ ಚಿಕಿತ್ಸಾಲಯಗಳ ಕಟ್ಟಡಗಳನ್ನು ನಿರ್ಮಾಣ ಮಾಡಲು 2017–18ನೇ ಸಾಲಿನಲ್ಲಿ ರೂ.10.00 ಲಕ್ಷಗಳು ನಿಗದಿಪಡಿಸಿದ್ದು, ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆ ಮೇರೆಗೆ ಈ ಕೆಳಕಂಡ ಚಿಕಿತ್ಸಾಲಯಗಳ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. 1. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಯಂಟಿಗಾನಹಳ್ಳಿ ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಯ ಹೊಸ ಕಟ್ಟಡದ ಕಾಮಗಾರಿಗೆ ರೂ. 10.00 ಲಕ್ಷ ನಿಗದಿ ಪಡಿಸಿದ್ದು ಕಟ್ಟಡದ ಕಾಮಗಾರಿ ರೂ. 9.74 ಲಕ್ಷಗಳು ಕಾಮಗಾರಿಗೆ ವೆಚ್ಚ ಮಾಡಿದೆ

ಜಿಲ್ಲಾ ಯೋಜನೇತರ ಅಡಿಯಲ್ಲಿ ಬರುವ ಕಾರ್ಯಕ್ರಮಗಳ ವಿವರಗಳು

1	2210–00–101–0–29 ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳು ತೆರೆಯುವುದು ಮತ್ತು ನಿರ್ವಹಣೆ.	ಈ ಕಾರ್ಯಕ್ರಮದಡಿಯಲ್ಲಿ **7** ಆಯುಷ್ ಚಿಕಿತ್ಸಾಲಯಗಳು 1 ಆಯುಷ್ ಆಸ್ಪತ್ರೆ ಒಳಪಟ್ಟಿದ್ದು ಇವುಗಳಲ್ಲಿ **8** ವೈದ್ಯಾಧಿಕಾರಿಗಳು ಮತ್ತು **9** ಸಿಬ್ಬಂದಿ ವರ್ಗದವರು **ಒಟ್ಟು 17** ಹುದ್ದೆಗಳು ಕಾರ್ಯನಿರ್ವಹಿಸುತ್ತಿದ್ದು, ಇವರುಗಳ ವೇತನ, ಕಛೇರಿ ವೆಚ್ಚ ಮತ್ತು ಇತ್ಯಾದಿಗಳಿಗೆ **ರೂ. 154.35** ಲಕ್ಷ ನಿಗದಿಪಡಿಸಿದ್ದು ಮಾರ್ಚ್–2018ರ ಅಂತ್ಯದವರೆಗೆ ವೇತನಕ್ಕಾಗಿ ರೂ. **118.92** ಲಕ್ಷ ವೆಚ್ಚಮಾಡಲಾಗಿದೆ. ವೇತನೇತರ ಕಾರ್ಯಕ್ರಮಗಳಿಗೆ ರೂ. **4.81** ಲಕ್ಷ ವೆಚ್ಚಮಾಡಲಾಗಿದೆ.
2	2201–00–101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ.	ಈ ಕಾರ್ಯಕ್ರಮದಡಿಯಲ್ಲಿ ನೆಲಮಂಗಲ ತಾಲ್ಲೂಕಿನ ಇಸ್ಲಾಂಪುರದಲ್ಲಿ **1** ಯುನಾನಿ ಚಿಕಿತ್ಸಾಲಯ ಕಾರ್ಯ ನಿರ್ವಹಿಸುತ್ತಿದ್ದು ಸದರಿ ಚಿಕಿತ್ಸಾಲಯದಲ್ಲಿ **1** ವೈದ್ಯಾಧಿಕಾರಿ ರವರು ಕಾರ್ಯ ನಿರ್ವಹಿಸುತ್ತಿದ್ದು ಅವರ ವಾರ್ಷಿಕ ವೇತನ, ಕಛೇರಿ ವೆಚ್ಚ ಮತ್ತು ಇತರೆ ವೆಚ್ಚಕ್ಕೆ ರೂ. **17.14** ಲಕ್ಷ ನಿಗದಿಪಡಿಸಿದ್ದು ಮಾರ್ಚ್ 2018 ರ ಅಂತ್ಯದವರೆಗೆ ವೇತನಕ್ಕಾಗಿ ರೂ. **14.19** ಲಕ್ಷ ವೆಚ್ಚಮಾಡಲಾಗಿದೆ. ವೇತನೇತರ ಕಾರ್ಯಕ್ರಮಗಳಿಗೆ ರೂ.**2.13** ಲಕ್ಷಗಳ ವೆಚ್ಚ ಮಾಡಲಾಗಿದೆ.
3	2210–00–101–0–35 ಭಾ.ವೈ.ಪ. ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯ ಧನ.	ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೋಮಿಯೋಪಥಿ ಚಿಕಿತ್ಸಾಲಯಗಳಿಗೆ **ರೂ. 3.21** ಲಕ್ಷಗಳನ್ನು ನಿಗದಿ ಪಡಿಸಿದ್ದು , ಈ ಹಣವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರ ಅಧಿಕೃತ ಪತ್ರದ ಸಂ.ಗ್ರಾಜಿಪಂ/ಅಭಿ–2/ಸಿಆರ್/46/2017–18 ದಿನಾಂಕ.27–02–2018 ರನ್ವಯ ಸರ್ಕಾರಿ ಹೋಮಿಯೋಪತಿ. ಚಿಕಿತ್ಸಾಲಯ ಬೈರಸಂದ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿನ ಚಿಕಿತ್ಸಾಲಯಗಳಿಗೆ ಅಗತ್ಯವಿರುವ **ಪಿಠೋಪಕರಣಗಳು** ಹಾಗೂ **ಶುಭ್ರತೆ ಮತ್ತು ಸ್ವಚ್ಚತೆಗೆ** ಮತ್ತು ಕಂಪ್ಯೂಟರನ್ನು ನಿಯಮಾನುಸಾರ ಖರೀದಿಸಲಾಗಿದೆ, ಅದಕ್ಕೆ ಒಟ್ಟು ರೂ. 3.19 ಲಕ್ಷಗಳನ್ನು ವೆಚ್ಚಮಾಡಲಾಗಿದೆ.
4	2210–00–101–0–37. ಆಯುಷ್ ಇಲಾಖೆಯ ಔಷಧಗಳು ಮತ್ತು ರಸಾಯನಿಕಗಳ ಖರೀದಿ.	ಈ ಲೆಕ್ಕಶೀರ್ಷಿಕೆಯಡಿಯಲ್ಲಿ **ಒಟ್ಟು 8** ಚಿಕಿತ್ಸಾಲಯಗಳು **1** ಆಸ್ಪತ್ರೆಗೆ ವಾರ್ಷಿಕವಾಗಿ ಬೇಕಾಗಿರುವ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡುವ ಕಾರ್ಯಕ್ರಮವಾಗಿದೆ. ಈ 2017–18ನೇ ಸಾಲಿನಲ್ಲಿ **ರೂ 6.10** ಲಕ್ಷಗಳನ್ನು ಔಷಧಿ ಖರೀದಿಸಿ ಅವಶ್ಯಕತೆ ಅನುಸಾರ ರೋಗಗಳಿಗೆ ಔಷಧೋಪಚಾರ ನೀಡುವುದರ ಮೂಲಕ ಮೇ ಹೆಚ್ಚ್ ಎಲ್ ಎಲ್ ಲೈಫ್ ಕೇರ್ ತಿರುವನಂತಪುರಂ ಇವರಿಂದ ನೇರವಾಗಿ 4(ಜಿ) ರಡಿಯಲ್ಲಿ ಅಯುರ್ವೇದ ಔಷಧಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರ ಅಧಿಕೃತ ಪತ್ರದಸಂ.ಗ್ರಾಜಿಪಂ/ಅಭಿ–2/ಸಿಆರ್/46/2017–18 ದಿನಾಂಕ.13–03–2018 ರನ್ವಯ ಯುನಾನಿ ಔಷಧಿಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2017–18ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ

ಕ್ರ. ಸಂ	ವಿವರ	ಹೊಸ	ಹಳೆ
1	ಸ.ಆ. ಆ. ದೊಡ್ಡಬಳ್ಳಾಪುರ	10998	14395
2	ಸ.ಅ.ಚಿ. ಕೋಲಿಗೆರೆ	3786	3869
3	ಸ.ಅ.ಚಿ. ಕೋಡಿಹಳ್ಳಿ	3925	4243
4	ಸ.ಅ.ಚಿ. ಹಣಬೆ	4001	5049
5	ಸ.ಅ.ಚಿ. ಹೆಗ್ಗನಹಳ್ಳಿ	2901	3273
6	ಸ.ಅ.ಚಿ. ಯಂಟಿಗಾನಹಳ್ಳಿ	3129	4399
7	ಸ.ಅ.ಚಿ. ಮಂಟನಕುರ್ಚಿ	3300	4595
	ಮೊತ್ತ	**32040**	**39823**
8	ಸ.ಹೋ.ಚಿ. ಬೈರಸಂದ್ರ	2427	3756
	ಮೊತ್ತ	**2427**	**3756**
	ಸ.ಯು.ಚಿ. ಇಸ್ಲಾಂಪುರ	4581	6960
	ಮೊತ್ತ	**4581**	**6960**

2017–18 ನೇ ಸಾಲಿನಲ್ಲಿ ರಾಜ್ಯ ವಲಯ ಆರೋಗ್ಯ ಐ.ಇ.ಸಿ ಮತ್ತು ತರಬೇತಿ ಕಾರ್ಯಕ್ರಮಗಳ ಪ್ರಗತಿಯ ವಿವರ (ರಾಜ್ಯ ವಲಯ) ಜಿಲ್ಲಾ ಆಯುಷ್ ಅಧಿಕಾರಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ

ಕ್ರ ಸಂ	ಕಾರ್ಯಕ್ರಮಗಳು	ವಾರ್ಷಿಕ ಗುರಿ		ಸಾಧಿಸಿದ ಪ್ರಗತಿ		ಶೇಕಡವಾರು ಪ್ರಗತಿ
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ಆರೋಗ್ಯ ಶಿಬಿರಗಳು ಕಾರ್ಯಕ್ರಮ	13	2.60	13	2.60	100%
2	ತಾಲ್ಲೂಕು ಮಟ್ಟದ ಸೆಮಿನಾರ್ ವರ್ಕ್‌ಷಾಪ್	2	1.02	2	1.02	100%
3	ಜಿಲ್ಲಾ ಮಟ್ಟದ ಸೆಮಿನಾರ್ ವರ್ಕ್‌ಷಾಪ್	–	–	–	–	–
4	ಮನೆಮದ್ದು ಕಾರ್ಯಕ್ರಮ	20	1.82	20	1.82	100%
	ಮೊತ್ತ	**35**	**5.44**	**35**	**5.44**	100%

9. ತೋಟಗಾರಿಕೆ ಇಲಾಖೆ

ಪ್ರಸ್ತುತ ತೋಟಗಾರಿಕೆ ಬೆಳೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿದ್ದು,ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಫಲವಾಗಿವೆ. ತೋಟಗಾರಿಕೆಯ ಹೊಸ ತಾಂತ್ರಿಕತೆಗಳ ಅಳವಡಿಕೆಗೆ ರೈತರು ಉತ್ಸಾಹ ತೋರಿ ಮುಂದೆ ಬರುತ್ತಿರುವ ಹಿನ್ನೆಲೆಯಲ್ಲಿ ರೈತ ಸಮುದಾಯದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ.. ಜಿಲ್ಲೆಯ ರೈತರಿಗೆ ವಿವಿಧ ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ತುಂಬಾ ಆಸಕ್ತಿ ಇದ್ದು ಸಕ್ರಿಯವಾಗಿ ವಾಣಿಜ್ಯ ತೋಟಗಾರಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಜಿಲ್ಲೆಯು ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದ್ದು ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳು ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಗೆ ಬರುತ್ತವೆ.ಜಿಲ್ಲೆಯಲ್ಲಿ ಸರಾಸರಿ ವಾರ್ಷಿಕ ಮಳೆ 824 ಮಿ.ಮಿ.ಇದ್ದು ವಿವಿಧ ಹಣ್ಣು ತರಕಾರಿ ಹಾಗೂ ಹೂವಿನ ಬೆಳೆಗಳಿಗೆ ಸೂಕ್ತವಾದ ಹವಾಮಾನ ಮತ್ತು ಮಣ್ಣಿನ ಗುಣಲಕ್ಷಣಗಳನ್ನು ಹೊಂದಿದೆ.

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

I.ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು.

1.ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ : (ಡಿ–02)
(ಲೆಕ್ಕ ಶೀರ್ಷಿಕೆ:2435–00–101–0–28)

2017–18ನೇ ಸಾಲಿನ ಹನಿ ನೀರಾವರಿಗಾಗಿ ರೂ. 50.00 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ. 50.00 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ. 49.97283 ಲಕ್ಷಗಳ ಪ್ರಗತಿಯನ್ನು (ಭೌತಿಕ 89.90 ಹೆ) ಸಾಧಿಸಲಾಗಿರುತ್ತದೆ.

2.ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (ಡಿ–04) (ಲೆಕ್ಕ ಶೀರ್ಷಿಕೆ: 2435–00–101–0–35)

2017–18 ನೇ ಸಾಲಿನ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಯೋಜನೆಯಡಿ ರೂ.0.25 ಲಕ್ಷಗಳು ಗುರಿಯಿದ್ದು, ಬಿಡುಗಡೆಯಾದ ರೂ. 0.25 ಲಕ್ಷಗಳನ್ನು ದಂಡುಪಾಳ್ಯ ತೋಟಗಾರಿಕೆ ಕ್ಷೇತ್ರದ ನಿರ್ವಹಣೆ ರೂ. 0.24975 ಲಕ್ಷ ಉಪಯೋಗಿಸಿಕೊಂಡು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

3.ಶೈತ್ಯಗಾರಗಳಿಗೆ ಧನ ಸಹಾಯ : (ಡಿ–07) (ಲೆಕ್ಕ ಶೀರ್ಷಿಕೆ:2435–00–101–0–39)

2017–18 ನೇ ಸಾಲಿನ ಶೀಥಲ ಗೃಹಗಳ ಸಹಾಯಧನ ಯೋಜನೆಯಡಿ ರೂ. 4.00 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ. 4.00 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ. 4.00 ಲಕ್ಷಗಳ ಪೂರ್ಣ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

4.ಜೇನು ಕೃಷಿ ಅಭಿವೃದ್ಧಿ ಯೋಜನೆ: (ಡಿ–08) (ಲೆಕ್ಕ ಶೀರ್ಷಿಕೆ:2851–00–107–0–33)

ಸದರಿ ಯೋಜನೆಯಡಿ ರೂ. 2.00 ಲಕ್ಷಗಳ ಗುರಿಯಿದ್ದು. ಬಿಡುಗಡೆಯಾದ ರೂ. 2.00 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ. 2.00 ಲಕ್ಷಗಳ ಪೂರ್ಣ ಪ್ರಗತಿ ಸಾಧಿಸಲಾಗಿರುತ್ತದೆ.

II.ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1. ರೈತರಿಗೆ ಸಹಾಯ: (ಡಿ–09) (ಲೆಕ್ಕ ಶೀರ್ಷಿಕೆ:2435–00–101–0–62)

ಈ ಯೋಜನೆಯಲ್ಲಿ ರೈತರು ಬೆಳೆದಿರುವ ತೋಟಗಾರಿಕೆ ಬೆಳೆಗಳಿಗೆ ಬಾದಿಸುತ್ತಿರುವ ಕ್ರಿಮಿಕೀಟ ಹಾಗೂ ರೋಗಗಳನ್ನು ನಿಯಂತ್ರಿಸುವ ಸಲುವಾಗಿ ಶೇಕಡ 50ರ ಸಹಾಯಧನದಲ್ಲಿ ಸಸ್ಯಸಂರಕ್ಷಣೆ ಔಷಧಿ ವಿತರಣೆ,ಪ್ರದೇಶ ವಿಸ್ತರಣೆ ಹಾಗೂ ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ದಿ ಕಾರ್ಯಕ್ರಮಗಳಿರುತ್ತವೆ. 2017–18ನೇ ಸಾಲಿನಲ್ಲಿ ರೈತರಿಗೆ ಸಹಾಯ ಯೋಜನೆಯಡಿ ರೂ.8.36 ಲಕ್ಷಗಳ ಗುರಿಯಿದ್ದು,ಬಿಡುಗಡೆಯಾದ ರೂ.8.36 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ.8.36 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

2.ರೈತರಿಗಾಗಿ ತರಬೇತಿ: (ಡಿ–10) (ಲೆಕ್ಕ ಶೀರ್ಷಿಕೆ:2435–00–101–0–64)

ತೋಟಗಾರಿಕಾ ಕ್ಷೇತ್ರಗಳಲ್ಲಿ ವೃದ್ದಿಪಡಿಸಲಾದ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ಮನದಟ್ಟು ಮಾಡುವ ಸಲುವಾಗಿ ರೂ.1.39 ಲಕ್ಷ ಅನುದಾನದಲ್ಲಿ 348 ರೈತರಿಗೆ ಕಾರ್ಯಕ್ರಮ ನೀಡುವ ಗುರಿಯಿದ್ದು, ಪೈಕಿ 2017–18 ನೇ ಸಾಲಿನಲ್ಲಿ ಬಿಡುಗಡೆಯಾದ ರೂ.1.39 ಲಕ್ಷಗಳ ಅನುದಾನದಲ್ಲಿ ರೂ. 1.39 ಲಕ್ಷಗಳನ್ನು ಖರ್ಚು ಮಾಡಿದ್ದು, ಜಿಲ್ಲೆಯ ಒಟ್ಟು 348 ರೈತರು ಹಾಗೂ ರೈತ ಮಹಿಳೆಯರಿಗೆ ತರಬೇತಿ ನೀಡಲಾಗಿದೆ.

3.ವಿಶೇಷ ಘಟಕ ಯೋಜನೆ:(ಡಿ–11) (ಲೆಕ್ಕ ಶೀರ್ಷಿಕೆ:2225–00–101–0–62)

ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಅಭಿವೃದ್ದಿಗಾಗಿ ತೆಂಗಿನ ತೋಟಗಳ ಅಭಿವೃದ್ಧಿಗಾಗಿ ಹಾಗೂ ಹಳೆ ತೋಟಗಳ ನಿರ್ವಹಣೆಗಾಗಿ ರೂ. 5.10 ಲಕ್ಷಗಳ ಗುರಿಯಿದ್ದು ಬಿಡುಗಡೆಯಾದ ರೂ. 5.10 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ. 5.10 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

4.ಗಿರಿಜನ ಉಪಯೋಜನೆ: (ಡಿ–12) (ಲೆಕ್ಕ ಶೀರ್ಷಿಕೆ:2225–00–102–0–70)

ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಅಭಿವೃದ್ದಿಗಾಗಿ ತೆಂಗಿನ ತೋಟಗಳ ಅಭಿವೃದ್ಧಿಗಾಗಿ ಹಾಗೂ ಹಳೆ ತೋಟಗಳ ನಿರ್ವಹಣೆಗಾಗಿ ರೂ. 0.80 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ. 0.68 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ. 0.68 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

10. ರೇಷ್ಮೆ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ರೇಷ್ಮೆ ಇಲಾಖೆಯ 2017–18ನೇ ಸಾಲಿನ ಕಾರ್ಯಕ್ರಮಗಳ ಸಂಕ್ಷಿಪ್ತ ಟಿಪ್ಪಣಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರೇಷ್ಮೆ ಇಲಾಖೆಯ ಅಸ್ತಿತ್ವದಲ್ಲಿ 4 ತಾಲ್ಲೂಕುಗಳಲ್ಲಿ 3 ರೇಷ್ಮೆ ಸಹಾಯಕ ನಿರ್ದೇಶಕರುಗಳ ಕಛೇರಿಗಳು, 10 ಸಾಮಾನ್ಯ ತಾಂತ್ರಿಕ ಸೇವಾ ಕೇಂದ್ರಗಳು 3 ಬಿತ್ತನೆ ಕೋಠಿಗಳು, 2 ಸರ್ಕಾರಿ ಚಾಕಿ ಸಾಕಾಣಿಕಾ ಕೇಂದ್ರಗಳು ಮತ್ತು 50 ರೇಷ್ಮೆ ವಲಯ ಕಛೇರಿಗಳಿದ್ದು, ರೇಷ್ಮೆ ಕೃಷಿಯ ಅಭಿವೃದ್ದಿಗಾಗಿ ಕೆಲಸ ನಿರ್ವಹಿಸುತ್ತಿವೆ.

ಜಿಲ್ಲೆಯಲ್ಲಿ ಒಟ್ಟು 6801.63 ಹೆಕ್ಟೇರ್ ಪ್ರದೇಶದಲ್ಲಿ 6,508 ರೇಷ್ಮೆ ಬೆಳೆಗಾರರು ಮಿಶ್ರತಳಿ ಮತ್ತು ದ್ವಿತಳಿ ಗೂಡನ್ನು ಉತ್ಪಾದಿಸುತ್ತಿದ್ದಾರೆ. ಒಟ್ಟು ರೇಷ್ಮೆ ಬೆಳೆಗಾರರ ಪೈಕಿ 232 ಜನ ಪರಿಶಿಷ್ಠ ಜಾತಿ, 379 ಪರಿಶಿಷ್ಠ ಪಂಗಡ, 41 ಜನ ಅಲ್ಪಸಂಖ್ಯಾತರು ಹಾಗೂ 5,856 ಜನ ಇತರೆ ರೇಷ್ಮೆ ಬೆಳೆಗಾರರಿರುತ್ತಾರೆ. ಒಟ್ಟು ರೇಷ್ಮೆ ಬೆಳೆಗಾರರ ಪೈಕಿ 3,248 ಅತಿ ಸಣ್ಣ ರೈತರು, 2,899 ಸಣ್ಣ ರೈತರು, 288 ಮಧ್ಯಮ ರೈತರು, 73 ದೊಡ್ಡ ರೈತರಾಗಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 465 ಮಹಿಳಾ ರೇಷ್ಮೆ ಬೆಳೆಗಾರರು ಪ್ರತ್ಯೇಕವಾಗಿ ರೇಷ್ಮೆ ಹುಳು ಸಾಕಾಣಿಕೆಯನ್ನು ಕೈಗೊಂಡಿರುತ್ತಾರೆ.

2017–18ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 240 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹೊಸತಳಿ ಹಿಪ್ಪುನೇರಳೆ ಕಡ್ಡಿಯನ್ನು ನಾಟಿ ಮಾಡಿಸಲು ಗುರಿಯಿದ್ದು, ಸಾಧನೆ– 217.75 ಹೆಕ್ಟೇರ್ ಆಗಿದೆ. 4241.150 ಮೆಟ್ರಿಕ್ ಟನ್ ಮಿಶ್ರತಳಿ ಮತ್ತು 313.950 ಮೆಟ್ರಿಕ್ ಟನ್ ದ್ವಿತಳಿ ಗೂಡು ಉತ್ಪಾದನಾ ಗುರಿಯನ್ನು ನೀಡಿದ್ದು, 3426.141 ಮೆಟ್ರಿಕ್ ಟನ್ ಮಿಶ್ರತಳಿ ಮತ್ತು 298.372 ಮೆಟ್ರಿಕ್ ಟನ್ ದ್ವಿತಳಿ ಗೂಡು ಉತ್ಪಾದನೆಯಾಗಿದೆ.

ಇಲಾಖೆಯ ಹೆಸರು:– ರೇಷ್ಮೆ ಇಲಾಖೆ		ವರ್ಷ:–2017–18					ಮಾಹೆ:– ಮಾರ್ಚ್–2018		
ಕ್ರ. ಸಂ	ಕಾರ್ಯಕ್ರಮ	ಭೌತಿಕ	ವಾರ್ಷಿಕ ಗುರಿ	ಪ್ರಸ್ತುತ ಮಾಹೆಯಲ್ಲಿ			ಪ್ರಸ್ತುತ ಮಾಹೆಯ ಅಂತ್ಯಕ್ಕೆ		
				ಗುರಿ	ಸಾಧನೆ	ಶೇಕಡಾ	ಗುರಿ	ಸಾಧನೆ	ಶೇಕಡಾ
1	ಮಿಶ್ರ ತಳಿ ರೇಷ್ಮೆ ಉತ್ಪಾದನೆ	ಮೆಟ್ರಿಕ್ ಟನ್	589.050	41.190	46.644	82.9	589.050	552.602	93.8
2	ದ್ವಿತಳಿ ರೇಷ್ಮೆ ಉತ್ಪಾದನೆ	ಮೆಟ್ರಿಕ್ ಟನ್	48.300	3.360	4.637	138.0	48.300	54.248	112.3

ಈ ಸಂಬಂಧ ಯೋಜನೆ ಕಾರ್ಯಕ್ರಮಗಳ ಪ್ರಗತಿಯ ವಿವರಗಳು
ಜಿಲ್ಲಾ ಪಂಚಾಯತ್ ಕಾರ್ಯಕ್ರಮ

1. ರೇಷ್ಮೆ ಬೆಳೆಗಾರರಿಗೆ ಸಹಾಯ

ಈ ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ/ವಿಚಾರ ಸಂಕಿರಣ ಹಾಗೂ ರೇಷ್ಮೆಗೆ ಸಂಬಂಧಿಸಿದಂತೆ ಸಾಹಿತ್ಯ ಹಾಗೂ ಕಾರ್ಯಾಗಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಭೌತಿಕ ಗುರಿ 1500 ಇದ್ದು,ಸಾಧನೆ 1498 ಆಗಿದೆ. ಜಿಲ್ಲೆಯಲ್ಲಿ ಹಿಪ್ಪುನೇರಳೆ ನಾಟಿ ಹಾಗೂ ವಸ್ತು ಪ್ರದರ್ಶನಕ್ಕೆ ನಿಗದಿಯಾದ ಗುರಿಯನ್ನು ರೇಷ್ಮೆ ಬೆಳೆಗಾರರಿಗೆ ಸೋಂಕು ನಿವಾರಕಗಳನ್ನು ನೀಡಲಾಗಿದೆ ಈ ಎಲ್ಲಾ ಕಾರ್ಯಕ್ರಮಗಳಿಗೂ ಒಟ್ಟು ರೂ.45.00 ಲಕ್ಷಗಳ ಆರ್ಥಿಕ ಗುರಿಯಿದ್ದು, ವಂಟನೆ ರೂ:44.98 ಲಕ್ಷಗಳು ಖರ್ಚಾಗಿದೆ.

2. ತಾಲ್ಲೋಕು ಪಂಚಾಯತ್ ಕಾರ್ಯಕ್ರಮ:– ಕ್ಷೇತ್ರೋತ್ಸವ,ವಸ್ತುಪ್ರದರ್ಶನ,ಪ್ರಚಾರ ಸಾಹಿತ್ಯ ಹಾಗೂ ಹೊಸತಳಿ ಹಿಪ್ಪುನೇರಳೆ ನಾಟಿ ಗೆ ಪ್ರೋತ್ಸಾಹಧನ

ಈ ಕಾರ್ಯಕ್ರಮದಡಿ ಹೊಸದಾಗಿ ಹಿಪ್ಪುನೇರಳೆ ತಳಿ ನಾಟಿ ಮಾಡಿದ 39 ಜನ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ರೂ:3,47,569/–ಗಳನ್ನು ನೀಡಲಾಗಿದೆ.ಹಿಪ್ಪುನೇರಳೆ ನರ್ಸರಿ ನಾಟಿ ಮಾಡಲಾದ ಒಬ್ಬ ರೇಷ್ಮೆ ಬೆಳೆಗಾರನಿಗೆ ಪ್ರೋತ್ಸಾಹಧನ ರೂ:75,000/–ಗಳನ್ನು ನೀಡಲಾಗಿದೆ.ಆರು ಕ್ಷೇತ್ರೋತ್ಸವಗಳಿಗೆ ರೂ:12,000/–, ಎರಡು ವಸ್ತು ಪ್ರದರ್ಶನಗಳಿಗೆ ರೂ:10,000/– ಹಾಗೂ ಪ್ರಚಾರ ಸಾಹಿತ್ಯಕ್ಕಾಗಿ ರೂ:50,000/–ಗಳನ್ನು ಖರ್ಚು ಮಾಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೂ ಒಟ್ಟು ರೂ.5.00 ಲಕ್ಷಗಳ ಆರ್ಥಿಕ ಗುರಿಯಿದ್ದು, ರೂ:4.95 ಲಕ್ಷಗಳು ಖರ್ಚಾಗಿದೆ.

3. ವಿಶೇಷ ಘಟಕ ಯೋಜನೆ (ರಾಜ್ಯ ನೆರವು ಯೋಜನೆ ಅಡಿಯಲ್ಲಿ)

ಪರಿಶಿಷ್ಟ ಜಾತಿಯ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಮಾಡಲು ಸಾಕಷ್ಟು ಸಲಕರಣೆ ಹೊಂದಿಲ್ಲದ 12 ಜನ ರೇಷ್ಮೆ ಬೆಳೆಗಾರರಿಗೆ ಹುಳು ಸಾಕುವ ಸಲಕರಣೆಗಳನ್ನು ನೀಡಲಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ಹೊಸಕೋಟೆ ತಾಲ್ಲೂಕಿಗೆ ರೂ.0.90 ಲಕ್ಷ ನಿಗಧಿಯಾಗಿದ್ದು ರೂ.0.90 ಲಕ್ಷ ಬಿಡುಗಡೆಯಾಗಿದ್ದು, ರೂ.0.89981 ಲಕ್ಷ ವೆಚ್ಚವಾಗಿರುತ್ತದೆ.

4. ಗಿರಿಜನ ಉಪಯೋಜನೆ (ರಾಜ್ಯ ನೆರವು ಯೋಜನೆ ಅಡಿಯಲ್ಲಿ):–

ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರ ಪೈಕಿ ಸಾಕಷ್ಟು ಸಲಕರಣೆಗಳನ್ನು ಹೊಂದಿಲ್ಲದ ಕಾರಣ 3 ಜನ ಫಲಾನುಭವಿಗಳಿಗೆ ಹುಳು ಸಾಕುವ ಸಲಕರಣೆಗಳನ್ನು ಉಚಿತವಾಗಿ ನೀಡಲಾಗಿರುತ್ತದೆ. ಆರ್ಥಿಕ ವಂಟನೆ ರೂ.0.23 ಲಕ್ಷಗಳು ನಿಗಧಿಯಾಗಿದ್ದು, ರೂ.0.22425 ಲಕ್ಷಗಳು ವೆಚ್ಚವಾಗಿರುತ್ತದೆ.

ಇದಲ್ಲದೆ ಜಿಲ್ಲಾ ಪಂಚಾಯತ್‌ನಿಂದ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೇತನಕ್ಕೆ ರೂ.270.00ಲಕ್ಷ ಮತ್ತು ವೇತನೇತರ ಕಾರ್ಯಕ್ರಮದ ಬಾಬ್ತಿಗೆ ರೂ.224.70 ಲಕ್ಷಗಳು ಲಿಂಕ್ ಡಾಕ್ಯೂಮೆಂಟ್‌ನಂತೆ ಒಟ್ಟು ರೂ.494.70 ಲಕ್ಷಗಳು ನಿಗಧಿಯಾಗಿರುತ್ತದೆ. ಇದರಲ್ಲಿ ರೂ.160.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆದು ರೋಗಗಳು ಉಲ್ಬಣಿಸುವ ಕಡೆ ಔಷಧಿಗಳನ್ನು ನೀಡಿ ಸೋಂಕು ನಿವಾರಣೆ ಕ್ರಮ ಕೈಗೊಂಡು ರೋಗಗಳನ್ನು ತಡೆಗಟ್ಟಿ ರೋಗ ನಿರೋಧಕಗಳನ್ನು ಹಾಗೂ ಅವಶ್ಯವಿರುವ ಹುಳು ಸಾಕಾಣಿಕಾ ಸಲಕರಣೆಗಳನ್ನು ಉಚಿತವಾಗಿ ರೇಷ್ಮೆ ಬೆಳೆಗಾರರಿಗೆ ನೀಡಿ ಉತ್ತಮ ಇಳುವರಿ ಪಡೆದು ಗೂಡನ್ನು ಉತ್ಪಾದಿಸಲಾಗಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ)

ಕ್ರ. ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳುಸಾಕಾಣಿಕಾ ಮನೆ	52	59.260	52	59.260
2	ಚಂದ್ರಿಕೆ ಮನೆ	33	10.515	33	10.515
3	ಹುಳುಸಾಕಾಣಿಕಾ ಸಲಕರಣೆ	464	58.015	464	58.015
4	ರೋಟರಿ ಚಂದ್ರಿಕೆ	91	29.452	91	29.452
	ಒಟ್ಟು	**640**	**157.242**	**640**	**157.242**

ರೇಷ್ಮೆ ಅಭಿವೃದ್ಧಿ ವಿಶೇಷ ಘಟಕ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಚಂದ್ರಿಕೆ ಮನೆ	1	0.240	1	0.240
2	ಹುಳು ಸಾಕಾಣಿಕಾ ಮನೆ	11	14.542	11	14.542
3	ಹುಳು ಸಾಕಾಣಿಕಾ ಸಲಕರಣೆ	170	25.307	170	25.307
4	ಸೋಂಕುನಿವಾರಣೆ	59	2.345	59	2.343
	ಒಟ್ಟು	**241**	**42.434**	**241**	**42.434**

ರೇಷ್ಮೆ ಅಭಿವೃದ್ಧಿ ಗಿರಿಜನ ಉಪ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಚಂದ್ರಿಕೆ ಮನೆ	1	0.500	1	0.500
2	ಹುಳು ಸಾಕಾಣಿಕಾ ಮನೆ	6	8.187	6	8.187
3	ಹುಳು ಸಾಕಾಣಿಕಾ ಸಲಕರಣೆ	173	29.321	173	29.321
4	ಸೋಂಕುನಿವಾರಣೆ	101	4.118	101	4.118
	ಒಟ್ಟು	**281**	**42.126**	**281**	**42.126**

ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಗೂಡಿಗೆ ಪ್ರೋತ್ಸಾಹಧನ	3542	126.547	3542	126.547
2	ದ್ವಿತಳಿ ಚಾಕಿಗೆ ಪ್ರೋತ್ಸಾಹಧನ	2111	33.200	2111	32.929
3	ಹುಳು ಸಾಕಾಣಿಕಾ ಮನೆ	30	82.880	30	82.880
	ಒಟ್ಟು	**5683**	**242.627**	**5683**	**242.627**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಸಾಮಾನ್ಯ)

ಕ್ರ. ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೇವಿನ ಹಿಂಡಿ	60	2.631	60	2.631
2	ಹಸಿರೆಲೆ ಗೊಬ್ಬರ	60	0.777	60	0.777
3	ಜೈವಿಕ ಗೊಬ್ಬರ	60	0.178	60	0.178
4	ಪೋಷಣ್	54	0.172	54	0.172
5	ಡ್ರಮ್ ಕಿಟ್ ಅಳವಡಿಕೆ	1	0.155	1	0.155
	ಒಟ್ಟು	**234**	**3.913**	**234**	**3.913**

ರಾಷ್ಟ್ರೀಯ ಕೃಷಿ ವಿಕಾಸ ವಿಶೇಷ ಘಟಕ ಯೋಜನೆ

ಕ್ರ. ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೇವಿನ ಹಿಂಡಿ	190	8.215	190	8.215
2	ಹಸಿರೆಲೆ ಗೊಬ್ಬರ	190	2.461	190	2.461
3	ಜೈವಿಕ ಗೊಬ್ಬರ	190	0.570	190	0.570
4	ಪೋಷಣ್	190	0.640	190	0.640
	ಒಟ್ಟು	**760**	**11.886**	**760**	**11.886**

ರಾಷ್ಟ್ರೀಯ ಕೃಷಿ ವಿಕಾಸ ಗಿರಿಜನ ಉಪ ಯೋಜನೆ

ಕ್ರ. ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೇವಿನ ಹಿಂಡಿ	100	4.310	100	4.310
2	ಹಸಿರೆಲೆ ಗೊಬ್ಬರ	100	1.295	100	1.295
3	ಜೈವಿಕ ಗೊಬ್ಬರ	100	0.300	100	0.300
4	ಪೋಷಣ್	100	0.337	100	0.337
	ಒಟ್ಟು	**400**	**6.242**	**400**	**6.242**

ಪ್ರಧಾನ ಕೃಷಿ ಸಿಂಚಾಯಿ ಯೋಜನೆ

ಕ್ರ. ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹನಿನೀರಾವರಿ	262	143.824	262	143.824
	ಒಟ್ಟು	**262**	**143.824**	**262**	**143.824**

ಜಿಲ್ಲಾ ಪಂಚಾಯತ್ ಯೋಜನೆ (ಸಾಮಾನ್ಯ)

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	967	29.000	966	28.980
	ಒಟ್ಟು	967	29.000	966	28.980

ಜಿಲ್ಲಾ ಪಂಚಾಯತ್ ವಿಶೇಷ ಘಟಕ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	300	9.000	299	9.000
	ಒಟ್ಟು	**300**	**9.000**	**299**	**9.000**

ಜಿಲ್ಲಾ ಪಂಚಾಯತ್ ಗಿರಿಜನ ಉಪ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	233	7.000	233	7.000
	ಒಟ್ಟು	**233**	**7.000**	**233**	**7.000**

ತಾಲ್ಲೂಕು ಪಂಚಾಯತ್ ಯೋಜನೆ

ಕ್ರ ಸಂ	ವಿವರ	ಮಾರ್ಚ್–2018ರ ಅಂತ್ಯಕ್ಕೆ ಗುರಿ		ಮಾರ್ಚ್–2018ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹೊಸತಳಿ ನಾಟಿಗೆ ಪ್ರೋತ್ಸಾಹಧನ, ವಸ್ತು ಪ್ರದರ್ಶನ &ಹುಳುಸಾಕಾಣಿಕಾ ಸಲಕರಣೆ	47	5.000	49	4.950
	ಒಟ್ಟು	**47**	**5.000**	**49**	**4.950**

11. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕುಗಳಿದ್ದು, ಅವುಗಳು ದೇವನಹಳ್ಳಿ: ದೊಡ್ಡಬಳ್ಳಾಪುರ: ಹೊಸಕೋಟೆ: ನೆಲಮಂಗಲ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ನಗರಗಳ ಜನ ಸಂಖ್ಯೆಯನ್ನು ಹೊರತುಪಡಿಸಿ, ಗ್ರಾಮೀಣ ಪ್ರದೇಶಗಳಲ್ಲಿ 9,90,923 ಜನಸಂಖ್ಯೆ ಇರುತ್ತದೆ. ಈ ಜಿಲ್ಲೆಯ ಭೌಗೋಳಿಕ ಪ್ರದೇಶವು 2,295.15 ಚದರ ಕಿ.ಮೀ.ಗಳಾಗಿದ್ದು, ಒಟ್ಟು 1,271 ಜನವಸತಿಗಳಲ್ಲಿ 951 ಕಂದಾಯ ಗ್ರಾಮಗಳಿರುತ್ತವೆ. ಜಿಲ್ಲೆಯಲ್ಲಿ ಸರಾಸರಿ ವಾರ್ಷಿಕ ಮಳೆಯು ಪ್ರಮಾಣ 748 ಮಿ.ಮೀ.ಅಗಿರುತ್ತದೆ. ಜಿಲ್ಲೆಯಲ್ಲಿ ಸದಾ ಕಾಲ ಹರಿಯುವ ನೀರಿನ ಜಲಮೂಲ ಇರುವುದಿಲ್ಲ. ಜಿಲ್ಲೆಯು ಮುಖ್ಯವಾಗಿ ಅಂತರ್ಜಲದ ನೀರಿನ ಮೇಲೆ ಅವಲಂಬಿತವಾಗಿದೆ. ಅಂತರ್ಜಲ ಮಟ್ಟ ದಿನೇದಿನೇ ಕುಸಿಯುತ್ತಿರುತ್ತದೆ.

1. 2017–18ನೇ ಸಾಲಿನ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವರದಿ:

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 2660.15 ಕಿ.ಮೀ.ಉದ್ದದ ಗ್ರಾಮಾಂತರ ರಸ್ತೆಗಳು ಈ ವಿಭಾಗದ ಉಸ್ತುವಾರಿಯಲ್ಲಿರುತ್ತದೆ. ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ನಿರ್ವಹಣೆ ಮಾಡಲು 2017–18ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಯಡಿ ವಿವರಗಳು ಈ ಕೆಳಕಂಡಂತಿ ಇರುತ್ತವೆ.

ರಸ್ತೆಗಳ ಘೋಶ್ವಾರೆ:

ಕ್ರ.ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1.	3054 ಸಿ.ಎಂ.ಜಿ.ಎಸ್.ವೈ	300.00	300.00	145	141	291.48
2.	5054 RIDF 22, 23	120.00	50.00	3	1	50.00
3.	3054 ಗ್ರಾಮೀಣ ರಸ್ತೆಗಳ ನಿರ್ವಹಣೆ / ದುರಸ್ಥಿ	267.13	220.00	83	83	220.00

2. 2017–18ನೇ ಸಾಲಿನ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವರದಿ:

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕಿಯಾ ಯೋಜನೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ರೂ. 349.02 ಲಕ್ಷಗಳು ಅನುದಾನದಲ್ಲಿ ಸರ್ಕಾರಿ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳು ಒಟ್ಟಾರೆ 171 ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಇವುಗಳಲ್ಲಿ 171 ಕಾಮಗಾರಿಗಳು ರೂ. 339.00 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

3. 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕಿಯಾ ಯೋಜನೆಯಲ್ಲಿ 2515–00–101–0–31 ಶಾಸನ ಬದ್ದ ಅನುದಾನದಲ್ಲಿ ರೂ. 400.00 ಲಕ್ಷಗಳು ಅನುದಾನದಲ್ಲಿ ರಸ್ತೆ ಹಾಗೂ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆಗಾಗಿ 219 ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಇವುಗಳಲ್ಲಿ 219 ಕಾಮಗಾರಿಗಳು ರೂ. 393.63 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

ಸಣ್ಣ ನೀರಾವರಿ ಕಾಮಗಾರಿಗಳು ಸಂಬಂಧಿಸಿದ ವರದಿ

2017–18ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವಿಭಾಗ 4 ತಾಲ್ಲೂಕುಗಳಲ್ಲಿ 40 ಹೆಕ್ಟೇರ್‌ಗಿಂತ ಕಡಿಮೆ ಇರುವ ಒಟ್ಟು 611 ಸಣ್ಣ ನೀರಾವರಿ ಕೆರೆಗಳಿರುತ್ತವೆ. ಸದರಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ 2017–18ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಡಿ

(1) ಲೆಕ್ಕ ಶೀರ್ಷಿಕೆ:**2702–10–101–0–26** ಯೋಜನೇತರ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಅಡಿಯಲ್ಲಿ ರೂ.81.32 ಲಕ್ಷಗಳ ಅನುದಾನದಲ್ಲಿ ಒಟ್ಟು 33 ಕಾಮಗಾರಿಗಳು ಅನುಮೋದನೆಗೊಂಡಿದ್ದು, ಮಾರ್ಚ್–2018ರ ಅಂತ್ಯಕ್ಕೆ ರೂ.78.78 ಲಕ್ಷಗಳು ಖರ್ಚಾಗಿದ್ದು, 33 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

(2) ಲೆಕ್ಕ ಶೀರ್ಷಿಕೆ "**ಕೆರೆ ಸಂಜೀವಿನಿ ಹಂತ 3 ಯೋಜನೆ**" ಯಡಿ ರೂ.60.00 ಲಕ್ಷಗಳ ಅನುದಾನವನ್ನು ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕಿನ 14 ಕೆರೆಗಳು ಅನುಮೋದನೆಗೊಂಡಿದ್ದು, 6 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 7 ಕೆರೆಗಳಲ್ಲಿ ಮಳೆ ನೀರು ಶೇಖರಣೆಯಾಗಿದ್ದು ಸರ್ಕಾರದ ಆದೇಶದಂತೆ ಕಾಮಗಾರಿಗಳನ್ನು ಕೈಬಿಡಲಾಗಿದೆ.

12. ಸಾರ್ವಜನಿಕ ಶಿಕ್ಷಣ ಇಲಾಖೆ

1. ಶಾಲಾ/ ಕಾಲೇಜು

ಈ ಜಿಲ್ಲೆಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿವರ

ಕ್ರ. ಸಂ.	ವಿವರ	ಸರ್ಕಾರಿ	ಅನುದಾನಿತ	ಅನುದಾನ ರಹಿತ	ಒಟ್ಟು
1.	ಕಿರಿಯ ಪ್ರಾಥಮಿಕ ಶಾಲೆಗಳು	652	0	40	692
2.	ಹಿರಿಯ ಪ್ರಾಥಮಿಕ ಶಾಲೆಗಳು	451	14	181	646
3.	ಪ್ರೌಢಶಾಲೆಗಳು	63	48	122	235

ಶಿಕ್ಷಕರ ವಿವರ: ಪ್ರಾಥಮಿಕ ಶಾಲಾ ವಿಭಾಗ:

ಕ್ರ. ಸಂ.	ಶಿಕ್ಷಕರು	ಸರ್ಕಾರದಿಂದ ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವವರು	ಖಾಲಿ ಹುದ್ದೆ	ಖಾಸಗಿ ಅನುದಾನಿತ ಮಂಜೂರಾದ ಹುದ್ದೆ	ಖಾಸಗಿ ಅನುದಾನಿತ ಕಾರ್ಯನಿರ್ವಹಿಸುತ್ತಿರುವವರು	ಖಾಲಿ ಹುದ್ದೆ
1.	ಸರ್ವ ಶಿಕ್ಷಣ ಅಭಿಯಾನ	313	261	52	0	0	0
2.	ಪ್ರಾಥಮಿಕ (ಯೋಜನೇತರ)	3697	3168	29	103	100	03
ಶಿಕ್ಷಕರ ವಿವರ: ಪ್ರೌಢಶಾಲಾ ವಿಭಾಗ							
1.	ಯೋಜನೆ						
2.	ಯೋಜನೇತರ	757	712	45	450	396	54

ವಿದ್ಯಾರ್ಥಿಗಳ ಸಂಖ್ಯೆ:

ಕ್ರ.ಸಂ.	ತರಗತಿ	ಗಂಡು	ಹೆಣ್ಣು	ಒಟ್ಟು
1.	1 ರಿಂದ 5ನೇ ತರಗತಿ	14869	16117	30986
2.	6 ರಿಂದ 7ನೇ ತರಗತಿ	7089	7085	14174
3.	8 ರಿಂದ 10ನೇ ತರಗತಿ	7528	7490	15018

2. ಆಯವ್ಯಯ: 2017–18

2017–18ನೇ ಸಾಲಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಡಿಯಲ್ಲಿ ವೇತನ ಮತ್ತು ಇತರೆ ಬಾಬ್ತುಗಳಿಗೆ ಪ್ರಸ್ತಾಪಿತ ಹಣ ಬಿಡುಗಡೆಯಾದ ಬಗ್ಗೆ ಮಾಹಿತಿ (ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಿವರ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚು
		ಸರ್ಕಾರಿ ವೇತನ		
1.	ಪ್ರಾಥಮಿಕ ಶಿಕ್ಷಣ	13286.44	13286.44	12477.85
2.	ಪ್ರೌಢಶಿಕ್ಷಣ	3577.13	3577.13	3248.08
		ಅನುದಾನಿತ /ಖಾಸಗಿ ಶಾಲೆಗಳಿಗೆ ವೇತನ		
1.	ಪ್ರಾಥಮಿಕ ಶಿಕ್ಷಣ	345.76	345.76	322.97
2.	ಪ್ರೌಢಶಿಕ್ಷಣ	2039.54	2039.54	1916.24

ಪರೀಕ್ಷಾ ಫಲಿತಾಂಶ:

ಕ್ರ. ಸಂ.	ವಿವರ	ಪರೀಕ್ಷೆಗೆ ಕುಳಿತವರು			ಪಾಸಾದವರು			ಶೇಕಡವಾರು
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
1.	ಎಸ್.ಎಸ್.ಎಲ್.ಸಿ.	6044	5891	11935	4845	4962	9807	82.71%

ಜಿಲ್ಲೆಯ ಫಲಿತಾಂಶ ರಾಜ್ಯದಲ್ಲಿ 14 ನೇ ಸ್ಥಾನ ಪಡೆದಿರುತ್ತದೆ.

ಸರ್ವ ಶಿಕ್ಷಣ ಅಭಿಯಾನ:– ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದೊಂದಿಗೆ ಹಾಗೂ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದೆ. ಸಮುದಾಯವು ಶಾಲಾ ವ್ಯವಸ್ಥೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದರ ಮೂಲಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಕಾರ್ಯಕ್ರಮವಾಗಿದೆ. ಈ ಸಾಲಿನಲ್ಲಿ ಲಕ್ಷ ರೂ. 2365.956/– ಗಳಿಗೆ ಯೋಜನೆ ಸಿದ್ದಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ರೂ. 1395.753/–ಲಕ್ಷ ಬಿಡುಗಡೆಯಾಗಿ ನಿಗದಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಅನುಷ್ಠಾನಗೊಳಿಸಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು

ಕ್ರ.ಸಂ.	ಯೋಜನೆ	ವಿವರ
1.	ಅಕ್ಷರ ದಾಸೋಹ	ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 5ನೇ ತರಗತಿಯ 34027 ಮಕ್ಕಳಿಗೆ ಮತ್ತು 6 ರಿಂದ 8ನೇ ತರಗತಿಯ ಸರ್ಕಾರಿ, ಅನುದಾನಿತ 23147 ಶಾಲಾ ಮಕ್ಕಳಿಗೆ ಮತ್ತು 9 ಮತ್ತು 10ನೇ ತರಗತಿಯ ಸರ್ಕಾರಿ, ಅನುದಾನಿತ 15215 ಶಾಲಾ ಮಕ್ಕಳಿಗೆ ಬಿಸಿಯೂಟ ನೀಡಲಾಗಿದೆ.
2.	ಪಠ್ಯ ಪುಸ್ತಕ	1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ 77408 ಪಠ್ಯಪುಸ್ತಕಗಳನ್ನು ವಿತರಣೆ ಮಾಡಲಾಗಿದೆ.
3.	ಸಮವಸ್ತ್ರ	1 ರಿಂದ 7ನೇ ತರಗತಿ ಎಲ್ಲಾ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ 8 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಒಟ್ಟು 62855 ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ ಮಾಡಲಾಗಿದೆ.

ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು

ತಾಲ್ಲೂಕು	ಶಾಲೆಗಳ ಸಂಖ್ಯೆ	ಲಭ್ಯವಿರುವ ಮೂಲಭೂತ ಸೌಲಭ್ಯಗಳು				
		ನೀರು	ಶೌಚಾಲಯ	ಶಾಲಾ ಕೊಠಡಿಗಳು	ವಿದ್ಯುತ್	ಕಾಂಪೌಂಡ್
ದೇವನಹಳ್ಳಿ	211	211	211	763	210	193
ದೊಡ್ಡಬಳ್ಳಾಪುರ	343	343	343	1183	339	358
ಹೊಸಕೋಟೆ	255	255	255	1004	251	227
ನೆಲಮಂಗಲ	282	282	282	973	281	236
ಒಟ್ಟು	**1091**	**1091**	**1091**	**3923**	**1081**	**1014**

ಸರ್ಕಾರಿ ಪ್ರೌಢಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು

ತಾಲ್ಲೂಕು	ಶಾಲೆಗಳ ಸಂಖ್ಯೆ	ಲಭ್ಯವಿರುವ ಮೂಲಭೂತ ಸೌಲಭ್ಯಗಳು				
		ನೀರು	ಶೌಚಾಲಯ	ಶಾಲಾ ಕೊಠಡಿಗಳು	ವಿದ್ಯುತ್	ಕಾಂಪೌಂಡ್
ದೇವನಹಳ್ಳಿ	17	17	17	190	17	14
ದೊಡ್ಡಬಳ್ಳಾಪುರ	16	16	16	256	16	15
ಹೊಸಕೋಟೆ	19	19	19	242	19	17
ನೆಲಮಂಗಲ	11	11	11	148	11	10
ಒಟ್ಟು	63	63	63	836	63	56

13. ಅಕ್ಷರ ದಾಸೋಹ

2002 ಜೂನ್ 1 ರಿಂದ ಶೈಕ್ಷಣಿಕವಾಗಿ ಹಿಂದುಳಿದ 7 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಪ್ರಪ್ರಥಮವಾಗಿ ಅಕ್ಷರ ದಾಸೋಹ ಯೋಜನೆ ಅನುಷ್ಠಾನಗೊಂಡಿತು. ನಂತರ 2003ರ ಜುಲೈ 1ರಿಂದ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಅಕ್ಷರ ದಾಸೋಹ ಯೋಜನೆಯನ್ನು ವಿಸ್ತರಿಸಲಾಯಿತು.

ಆಗಸ್ಟ್–2013 ರಿಂದ ರಾಜ್ಯಾದ್ಯಂತ 1 ರಿಂದ 10 ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯನ್ನು ಅನುಷ್ಠಾನ ಗೊಳಿಸಲಾಯಿತು (ವಾರದಲ್ಲಿ ಮೂರು ದಿನ) ಜುಲೈ–2017 ರಿಂದ ಕ್ಷೀರ ಭಾಗ್ಯ ಯೋಜನೆಯನ್ನು ವಾರದಲ್ಲಿ 5 ದಿನಗಳಿಗೆ ವಿಸ್ತರಿಸಿದೆ.

2017–18 ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ 04 ತಾಲ್ಲೂಕುಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಒಟ್ಟು 1217 ಸರ್ಕಾರಿ ಮತ್ತು ಅನುದಾನಿತ ಶಾಲೆಗಳು ಇರುತ್ತವೆ. ಇವುಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು 1092 ಮತ್ತು ಪ್ರೌಢ ಶಾಲೆಗಳು 63 ಇರುತ್ತವೆ. ಅನುದಾನಿತ ಪ್ರಾಥಮಿಕ ಶಾಲೆಗಳು 14 ಮತ್ತು ಪ್ರೌಢ ಶಾಲೆಗಳು 48 ಒಟ್ಟು 62 ಶಾಲೆಗಳು ಈ ಶಾಲೆಗಳಲ್ಲಿ 1ರಿಂದ10ನೇ ತರಗತಿಯವರೆಗೆ ಒಟ್ಟು 71819 ಮಕ್ಕಳು ವ್ಯಾಸಂಗ ಮಾಡುತ್ತಿರುತ್ತಾರೆ, ಹಾಗೂ ಎಲ್ಲಾ ಮಕ್ಕಳು ಫಲಾನುಭವಿಗಳಾಗಿರುತ್ತಾರೆ. 1217 ಅಡುಗೆ ಕೇಂದ್ರಗಳಲ್ಲಿ ಆಯಾ ಶಾಲಾ ಹಂತದಲ್ಲಿಯೇ ಅಡುಗೆ ತಯಾರಿಸುತ್ತಿರುತ್ತಾರೆ.

ಅಡುಗೆಯವರು: ಜಿಲ್ಲೆಯಲ್ಲಿ 2161 ಅಡುಗೆಯವರು ಕಾರ್ಯ ನಿರ್ವಹಿಸುತ್ತಿದ್ದು ಮುಖ್ಯ ಅಡುಗೆಯವರಿಗೆ ರೂ.2700/– ಹಾಗೂ ಸಹಾಯಕ ಅಡುಗೆಯವರಿಗೆ ರೂ.2600/– ಮಾಸಿಕ ಗೌರವಧನ 01–01–2018 ರಿಂದ ಅನ್ವಯವಾಗುವಂತೆ ನೀಡಲಾಗುತ್ತಿದೆ. (ಕ್ಷೀರಭಾಗ್ಯ ಯೋಜನೆಯೂ ಸೇರಿ) ಆಯಾ ತಿಂಗಳೇ ಗೌರವಧನ ನೀಡಲಾಗುತ್ತಿದೆ.

ಮಧ್ಯಾಹ್ನ ಉಪಾಹಾರ ಯೋಜನೆಯ ಅಂಕಿ ಅಂಶಗಳ ವಿವರ								
ಶಾಲೆಗಳ ವಿವರ			ವಿದ್ಯಾರ್ಥಿಗಳ ವಿವರ			ಅಡುಗೆಯವರ ವಿವರ		
ಸರ್ಕಾರಿ	ಅನುದಾನಿತ	ಒಟ್ಟು	ಸರ್ಕಾರಿ	ಅನುದಾನಿತ	ಒಟ್ಟು	ಮುಖ್ಯ ಅಡುಗೆಯವರ	ಸಹಾಯಕ ಅಡುಗೆಯವರ	ಒಟ್ಟು
1155	62	1217	60880	10939	71819	1198	963	2161



ಕ್ಷೀರಭಾಗ್ಯ: ಕ್ಷೀರಭಾಗ್ಯ ಯೋಜನೆಯಲ್ಲಿ 2017–18ನೇ ಸಾಲಿನಲ್ಲಿ ಎಲ್ಲಾ 1217 ಶಾಲೆಗಳಲ್ಲಿಯೂ 1ರಿಂದ 10ನೇ ತರಗತಿಯ ಒಟ್ಟು 71819 ಮಕ್ಕಳಿಗೆ ಬಿಸಿ ಹಾಲನ್ನು ನೀಡಲಾಗುತ್ತಿದೆ. ಕೆ.ಎಮ್.ಎಫ್. ವತಿಯಿಂದ ಹಾಲಿನ ಪುಡಿ ಸರಬರಾಜಾಗುತ್ತಿದ್ದು, ಶಾಲೆಗಳಲ್ಲಿ ಬಿಸಿ ಹಾಲನ್ನು ತಯಾರಿಸಿ ವಾರದಲ್ಲಿ 5 ದಿನ ಪ್ರಾರ್ಥನೆಗೆ ಮುಂಚೆ 150 ಎಂ.ಎಲ್. ರಂತೆ ಮಕ್ಕಳಿಗೆ ನೀಡಲಾಗುತ್ತಿದೆ. ಮಾರ್ಚ್–2018 ಅಂತ್ಯದವರೆಗೆ ಕೆ.ಎಮ್.ಎಫ್,ರವರ ಎಲ್ಲಾ ಬಿಲ್ಲುಗಳನ್ನು ಪಾವತಿಸಲಾಗಿದೆ. 2018–19ನೇ ಸಾಲಿಗೆ ರೂ. 1.50,00,000(ಒಂದು ಕೋಟಿ ಐವತ್ತು ಲಕ್ಷ) ಮುಂಗಡವಾಗಿ ಪಾವತಿಸಿದೆ.



ಆಹಾರ ಧಾನ್ಯ: ಬಿಸಿಯೂಟ ಯೋಜನೆಯಡಿಯಲ್ಲಿ ಭಾರತ ಆಹಾರ ನಿಗಮದಿಂದ ಅಕ್ಕಿ ಎತ್ತುವಳಿ ಮಾಡುತ್ತಿದ್ದು, ಮಾರ್ಚ್–2018ರ ಅಂತ್ಯದವರೆಗೆ ಸದರಿಯವರ ಎಲ್ಲಾ ಬಿಲ್ಲುಗಳನ್ನು ಪಾವತಿಸಲಾಗಿದೆ. ಕೆ.ಎಫ್.ಸಿ.ಎಸ್.ಸಿಯವರಿಂದ ಬೇಳೆ ಎಣ್ಣೆ, ಉಪ್ಪುಗಳನ್ನು ಖರೀದಿಸುತ್ತಿದ್ದು, ಮಾರ್ಚ್–2018ರ ಅಂತ್ಯದವರೆಗೆ ಎಲ್ಲಾ ಬಿಲ್ಲುಗಳನ್ನು ಪಾವತಿಸಲಾಗಿದೆ. ಮಕ್ಕಳ ಆಹಾರ ತಯಾರಿಕೆಗೆ ಸಾದಿಲ್ವಾರು ಅನುದಾನವನ್ನು ಶಾಲಾ ಎಸ್.ಡಿ.ಎಂ.ಸಿಯವರ ಮತ್ತು ಮುಖ್ಯ ಶಿಕ್ಷಕರ ಖಾತೆಗೆ ಮಾರ್ಚ್–2018ರ ವರೆಗೆ ತಾಲ್ಲೂಕು ಪಂಚಾಯತ್ ಗಳ ಮೂಲಕ ಬಿಡುಗಡೆ ಗೊಳಿಸಲಾಗಿದೆ. 2018–19ನೇ ಸಾಲಿಗೆ ಮುಂಗಡ ಹಣ ರೂ.1.00,00,000 (ಒಂದು ಕೋಟಿ) ಪಾವತಿಸಿದೆ.

ಅಡುಗೆ ಕೋಣೆ: 2006–07 ರಿಂದ 2013–14ನೇ ಸಾಲಿಗೆ ಮಂಜೂರಾಗಿರುವ ಅಡುಗೆ ಕೋಣೆಗಳ ಸಂಖ್ಯೆ:862 2017–18ನೇ ಸಾಲಿಗೆ 30 ಅಡುಗೆ ಕೋಣೆಗಳು ರಾಮನಗರ ಜಿಲ್ಲೆಯಿಂದ ವರ್ಗಾವಣೆಗೊಂಡು ಅನುದಾನವು ಬಿಡುಗಡೆಯಾಗಿರುತ್ತದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ತೆಲುಗು ಪ್ರೌಢಶಾಲೆ ಹೊರತುಪಡಿಸಿ ಉಳಿದ 29 ಅಡುಗೆ ಕೋಣೆಗಳು ಮುಕ್ತಾಯ ಹಂತದಲ್ಲಿವೆ.



ಅನುದಾನ: 2017–18ನೇ ಸಾಲಿಗೆ ರೂ.2602.49 ಲಕ್ಷಗಳು ಬಿಡುಗಡೆಯಾಗಿದ್ದು ರೂ.2029.72 ಲಕ್ಷಗಳು ಖರ್ಚಾಗಿದ್ದು ರೂ.572.77 ಲಕ್ಷಗಳು ಉಳಿಕೆಯಾಗಿರುತ್ತದೆ. ಹಾಗೂ 2018–19ನೇ ಸಾಲಿನಲ್ಲಿ ಅಕ್ಷರ ದಾಸೋಹ ಯೋಜನೆಗೆ ರೂ.2649.02 ಲಕ್ಷಗಳು ನಿಗಧಿಯಾಗಿದ್ದು ಮೊದಲನೇ ತ್ರೈಮಾಸಿಕ ಅನುದಾನ ಜೂನ್–2018ರ ಅಂತ್ಯಕ್ಕೆ ರೂ.662.26 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

2017–18ನೇ ಸಾಲಿನ MPIC (ಎಂಪಿಕ್) ಪ್ರಗತಿ ವರದಿ ಮಾರ್ಚ್–2018 ಮಾಹೆಯ ಅಂತ್ಯಕ್ಕೆ (ಸಾರ್ವಜನಿಕ ಶಿಕ್ಷಣ ಇಲಾಖೆ)

ಇಲಾಖೆ ಹೆಸರು:–ಅಕ್ಷರ ದಾಸೋಹ **ರೂ.ಲಕ್ಷಗಳಲ್ಲಿ**

ಕ್ರ. ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ನಿಗದಿ ಗೊಳಿಸಿದ ಅನುದಾನ	ಬಿಡುಗಡೆ ಗೊಳಿಸಿದ ಅನುದಾನ	ಬಿಡುಗಡೆ ಗೊಳಿಸಿದ , ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	TP /SP /ZP	ಬಳಕೆಯಾದ ಅನುದಾನ			ಉಳಿಕೆ ಅನುದಾನ	ಬಿಡುಗಡೆಗೆ ಶೇಕಡ 9/4	ಭೌತಿಕ ಪ್ರಗತಿ			ಶೇಕಡ 13/12
						ಹಿಂದಿನ ತಿಂಗಳ ವರೆಗಿನ ಒಟ್ಟು ಖರ್ಚು	ಪ್ರಸ್ತುತ ಮಾಹೆಯ ಖರ್ಚು	ಒಟ್ಟು ಖರ್ಚು (7+8)			ಘಟಕ ಶಾಲೆಗಳ ಸಂಖ್ಯೆ	ಗುರಿ	ಸಾಧನೆ	
1	2	3	4	5	6	7	8	9	10	11	12	13	14	15
ಜಿಲ್ಲಾ ಪಂಚಾಯತ್ ಕಾರ್ಯಕ್ರಮ														
1	2202–00–101–0–18–001 ಅಕ್ಷರ ದಾಸೋಹ(ವೇತನ)	55.00	62.13	ಆಇ238ವೆಚ್ಚ 6/2017 ದಿನಾಂಕ:18–08–2017		40.58	1.97	42.55	**19.58**	68.49	5	10	7	70
2	2202–00–101–0–18–050 ಅಕ್ಷರ ದಾಸೋಹ (ಕಛೇರಿ ವೆಚ್ಚ)	1607.58	1962.52	ಎನ್.ಎಂ.ಸಿ 2015–16ರ ವರೆಗೆ ಉಳಿಕೆ ಅನುದಾನ (654.98		1112.10	321.23	1433.33	**529.19**	73.04	1219	40979	40979	100
3	2202–00–101–0–18–422 ಅಕ್ಷರ ದಾಸೋಹ (ಎಸ್.ಸಿ.ಪಿ)	462.79	447.20	ಆಇ238ವೆಚ್ಚ 6/2017 ದಿನಾಂಕ:23–11–2017		321.10	116.13	437.23	**9.97**	97.77	1219	24927	24927	100
4	2202–00–101–0–18–423 ಅಕ್ಷರ ದಾಸೋಹ (ಟಿ.ಎಸ್.ಪಿ)	130.64	130.64			81.12	35.49	116.61	**14.03**	89.26	1219	5586	5586	100
	ಒಟ್ಟು	**2256.01**	**2602.49**			**1554.90**	**474.82**	**2029.72**	**572.77**	**77.99**	**1219**	**71492**	**71492**	**100**

14. ಸಾಮಾಜಿಕ ಅರಣ್ಯ ಇಲಾಖೆ

ಬೆಂಗಳೂರು ಸಾಮಾಜಿಕ ಅರಣ್ಯ ವಿಭಾಗವು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/286/ಎಫ್.ಎ.ಸಿ./84 ದಿನಾಂಕ 16.10.1985 ರಂತೆ ರೂಪುಗೊಂಡಿದ್ದು, ದಿನಾಂಕ:07.05.1986 ರಿಂದ ಕಾರ್ಯೋನ್ಮುಖವಾಗಿದೆ. ಈ ವಿಭಾಗದ ಆಡಳಿತ ವ್ಯಾಪ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಈ ಕೆಳಕಂಡ ಉಪ ವಿಭಾಗ ಮತ್ತು ವಲಯಗಳು ಸೇರಿವೆ.

ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು

ಈ ಉಪ ವಿಭಾಗದ ಅಧೀನದಲ್ಲಿ ಹೊಸಕೋಟೆ ಸಾಮಾಜಿಕ ಅರಣ್ಯ ವಲಯ (ದೇವನಹಳ್ಳಿ ತಾಲ್ಲೂಕು ಸೇರಿದಂತೆ) ದೊಡ್ಡಬಳ್ಳಾಪುರ ಸಾಮಾಜಿಕ ಅರಣ್ಯ ವಲಯ ಮತ್ತು ನೆಲಮಂಗಲ ಸಾಮಾಜಿಕ ಅರಣ್ಯ ವಲಯಗಳು ಕಾರ್ಯನಿರ್ವಹಿಸುತ್ತಿವೆ. ಉಪ ವಿಭಾಗ ಮಟ್ಟದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ವಲಯಗಳ ಮಟ್ಟದಲ್ಲಿ ವಲಯ ಅರಣ್ಯಾಧಿಕಾರಿಗಳು, ಉಪ ವಲಯ ಅರಣ್ಯಾಧಿಕಾರಿ, ಅರಣ್ಯ ರಕ್ಷಕರು, ಎಂ.ಆರ್.ದಿನಗೂಲಿ ನೌಕರರು ಮತ್ತು ಅರಣ್ಯ ಪ್ರೇರಕರು ಕೆಲಸ ನಿರ್ವಹಿಸುತ್ತಿದ್ದಾರೆ.

2017–18ನೇ ಸಾಲಿನಲ್ಲಿ ಸರ್ಕಾರವು ಕಾಲಕಾಲಕ್ಕೆ ರೂಪಿಸಲಾಗುತ್ತಿರುವ ರಸ್ತೆ ಬದಿ ನೆಡುತೋಪು ಯೋಜನೆ (RSP), ರಸ್ತೆ ಬದಿ ನೆಡುತೋಪು ಯೋಜನೆ (SCP), ರಸ್ತೆ ಬದಿ ನೆಡುತೋಪು ಯೋಜನೆ (TSP), ಸಾರ್ವಜನಿಕ ವಿತರಣೆಗೋಸ್ಕರ ಸಸಿ ಬೆಳೆಸುವುದು (RSPD), ಕೆ.ಎಫ್.ಡಿ.ಎಫ್., ಮಹಾತ್ಮಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಖಾಯ್ದೆ ಯೋಜನೆ (MNREGA), ಸಾಮಾಜಿಕ ಅರಣ್ಯೀಕರಣ ಯೋಜನೆ, ಕಟ್ಟಡಗಳು. ವಿಶೇಷ ಘಟಕ ಯೋಜನೆ (SCP (TP)), ಗಿರಿಜನ ಉಪಯೋಜನೆ (TSP(TP)), ಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸಾಮಾಜಿಕ ಅರಣ್ಯದ ಕಾರ್ಯ ವೈಖರಿಯ ಕೂಲಂಕುಷ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಈ ವಿಭಾಗವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು ಸಿಬ್ಬಂದಿಯು ಎರವಲು ಸೇವೆಯ ಮೇರೆಗೆ ಸೇವೆ ಸಲ್ಲಿಸುತ್ತಿದ್ದಾರೆ.

ಅಧ್ಯಾಯ – 1

ರಕ್ಷಿತ ಅರಣ್ಯಗಳ ರಚನೆ

ಈ ವಿಭಾಗವು ಸಾಮಾಜಿಕ ಅರಣ್ಯ ಮತ್ತು ಅಭಿವೃದ್ಧಿಗೆ ಸೀಮಿತವಾಗಿರುವುದರಿಂದ ರಕ್ಷಿತ ಅರಣ್ಯಗಳ ವಿಷಯ ಅನ್ವಯಿಸುವುದಿಲ್ಲ.

ಅಧ್ಯಾಯ – 2

1. ರಕ್ಷಿತ ಅರಣ್ಯಗಳು ಪ್ರಾದೇಶಿಕ ವಿಭಾಗಗಳಿಗೆ ಸಂಬಂಧಪಟ್ಟವುಗಳಾಗಿವೆ. ರಕ್ಷಿತ ಅರಣ್ಯಗಳು ಪ್ರಾದೇಶಿಕ ವಿಭಾಗದ ಪರಿಮಿತಿಗೆ ಒಳಪಡುವುದರಿಂದ ಇಲ್ಲಿ ಪ್ರಸ್ಥಾಪಿಸಲಾಗಿಲ್ಲ.

2. (ಎ) ವಾಹನಗಳು

ಸಾಮಾಜಿಕ ಅರಣ್ಯ ವಿಭಾಗದಲ್ಲಿ

1. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಉಪಯೋಗಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 04 ಜಿ 1255 ಲಭ್ಯವಿದ್ದು ವಿಭಾಗದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಉಪಯೋಗಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 04 ಜಿ 1212 ಲಭ್ಯವಿದ್ದು ವಿಭಾಗದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

3. (ಬಿ) ಕಟ್ಟಡಗಳು

ಈ ವಿಭಾಗದಲ್ಲಿನ ವಸತಿ ಗೃಹ ಹಾಗೂ ಇತರೆ ಕಟ್ಟಡಗಳ ವಿವರ ಈ ಕೆಳಕಂಡಂತೆ ಇದೆ.

ಕ್ರ. ಸಂ.	ವಸತಿ ಗೃಹಗಳ ವಿವರ	ಸ್ಥಳ	ಸಂಖ್ಯೆ	ವಾಸಿಸುತ್ತಿದ್ದಾರೆಯೇ?	ಖಾಲಿ ಇರುವುದು	ಷರಾ
1	2	3	4	5	6	
1	ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ವಸತಿ ಗೃಹ	–	–	–	–	
2	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಸತಿ ಗೃಹ	–	–	–	–	
3	ವಲಯ ಅರಣ್ಯಾಧಿಕಾರಿಗಳ ಕಛೇರಿ ಹಾಗೂ ವಸತಿ ಗೃಹ	ದೊಡ್ಡಬಳ್ಳಾಪುರ	1	ಕಛೇರಿಗೆ ಉಪಯೋಗಿಸಲಾಗುತ್ತಿದೆ.	–	
4	ಉ.ವ.ಅ.ಅ. ವಸತಿ ಗೃಹ	ದೊಡ್ಡಬಳ್ಳಾಪುರ	2	ಇಲ್ಲ	2	
5	ಅರಣ್ಯ ರಕ್ಷಕರ ವಸತಿ ಗೃಹ	ದೊಡ್ಡಬಳ್ಳಾಪುರ	2	ಇಲ್ಲ	2	
6	ವಲಯ ಅರಣ್ಯಾಧಿಕಾರಿಗಳ ಕಛೇರಿ	ದೇವನಹಳ್ಳಿ	1	ಕಛೇರಿಗೆ ಉಪಯೋಗಿಸಲಾಗುತ್ತಿದೆ.	–	
7	ವನಪಾಲಕರ ವಸತಿ ಗೃಹ	ದೇವನಹಳ್ಳಿ	1	ಇಲ್ಲ	1	ಮಿನಿವಿಧಾನಸೌಧದ ಆವರಣದಲ್ಲಿರುವುದರಿಂದ ದೇವನಹಳ್ಳಿ ತಹಶೀಲ್ದಾರ್ ವಶದಲ್ಲಿದೆ.
8	ವಲಯ ಅರಣ್ಯಾಧಿಕಾರಿಗಳ ವಸತಿ ಗೃಹ	ಹೊಸಕೋಟೆ	1	ಇಲ್ಲ	–	
9	ವಲಯ ಅರಣ್ಯಾಧಿಕಾರಿಗಳ ಕಛೇರಿ	ಹೊಸಕೋಟೆ	1	ಕಛೇರಿಗೆ ಉಪಯೋಗಿಸಲಾಗುತ್ತಿದೆ.	–	
10	ವನಪಾಲಕರ ವಸತಿ ಗೃಹ	ಹೊಸಕೋಟೆ	2	ಇಲ್ಲ	2	
11	ಅರಣ್ಯ ರಕ್ಷಕರ ವಸತಿ ಗೃಹ	ಹೊಸಕೋಟೆ	1	ಇಲ್ಲ	1	
12	ಅರಣ್ಯ ರಕ್ಷಕರ ವಸತಿ ಗೃಹ	ನಗರೇನಹಳ್ಳಿ	1	ವಾಸಿಸಲು ಯೋಗ್ಯವಾಗಿರುವುದಿಲ್ಲ.	1	

13	ಜೆನರೇಟರ್ ರೂಂ	ಜಡಿಗೇನಹಳ್ಳಿ	1	ಉಪಯೋಗಿಸಲಾಗುತ್ತಿದೆ	–	
14	ಜೆನರೇಟರ್ ರೂಂ	ನಗರೇನಹಳ್ಳಿ	1	ಉಪಯೋಗಕ್ಕೆ ಯೋಗ್ಯವಾಗಿರುವುದಿಲ್ಲ.	–	
15	ದಾಸ್ತಾನು ಗೃಹ	ನಗರೇನಹಳ್ಳಿ	1	ಉಪಯೋಗಕ್ಕೆ ಯೋಗ್ಯವಾಗಿರುವುದಿಲ್ಲ.	–	
16	ವಲಯ ಅರಣ್ಯಾಧಿಕಾರಿಗಳ ಕಛೇರಿ ಹಾಗೂ ವಸತಿ ಗೃಹ	ನೆಲಮಂಗಲ	1	ವ.ಅ.ಅ. ಕಛೇರಿ (ಪ್ರಾದೇಶಿಕ)	–	
17	ವನಪಾಲಕರ ವಸತಿ ಗೃಹ	ನೆಲಮಂಗಲ	1	ವ.ಅ.ಅ. ಕಛೇರಿ (ಪ್ರಾದೇಶಿಕ)	–	
18	ಅರಣ್ಯ ರಕ್ಷಕರ ವಸತಿ ಗೃಹ	ಅರಿಶಿನಕುಂಟೆ	1	ಸಾ.ಅ.ವ ಕಛೇರಿಗಾಗಿ ಉಪಯೋಗಿಸಲಾಗುತ್ತಿದೆ.	–	
19	ವಾಚ್‌ಮೆನ್ ಶೆಡ್	ನೆಲಮಂಗಲ	1	ಉಪಯೋಗಿಸಲಾಗುತ್ತಿದೆ	–	
20	ವಲಯ ಅರಣ್ಯಾಧಿಕಾರಿ ಕಛೇರಿ	ಅರಿಶಿನಕುಂಟೆ	1	ಕಛೇರಿ (ನಿರ್ಮಾಣ ಕೆಲಸ ಮುಕ್ತಾಯಹಂತದಲ್ಲಿದೆ		

(3) ಅರಣ್ಯ ರಕ್ಷಣೆ

ಸಾಮಾಜಿಕ ಅರಣ್ಯ ದಿಂದ ಬೆಳೆಸಲಾದ ನೆಡುತೋಪುಗಳು ಪ್ರಾದೇಶಿಕ ಅರಣ್ಯದಿಂದ ಬೇರ್ಪಟ್ಟಿದೆ. ಸಾಮಾಜಿಕ ಅರಣ್ಯದಿಂದ ಬೆಳೆಸಲಾದ ನೆಡುತೋಪುಗಳ ರಕ್ಷಣೆ ಸಾಮಾಜಿಕ ಅರಣ್ಯದ ಸಿಬ್ಬಂದಿಯಿಂದಲೇ ಆಗಬೇಕಾಗಿದೆ. ಭಾರತ ಸರ್ಕಾರ ಮಹಾತ್ಮಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2008–09ನೇ ಸಾಲಿನಿಂದ ಶೇ. 20 ರಷ್ಟು ಅನುದಾನದಲ್ಲಿ ಅರಣ್ಯ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿದ್ದು ಇಷ್ಟೊಂದು ಪ್ರಮಾಣದ ಕೆಲಸ ಉಸ್ತುವಾರಿ ನೋಡಲು ಸಿಬ್ಬಂದಿ ಕೊರತೆ ಇರುತ್ತದೆ. ಆದರೂ ಸಹ ಸಾಮಾಜಿಕ ಅರಣ್ಯದಲ್ಲಿ ರಕ್ಷಿತ ಅರಣ್ಯ, ಶಾಲಾ ನರ್ಸರಿ, ರಸ್ತೆಬದಿ ನೆಡುತೋಪುಗಳು ಹಾಗೂ ಇತರೆ ನೆಡುತೋಪುಗಳ ರಕ್ಷಣೆ ಕೂಡ ಲಭ್ಯವಿರುವ ಸಿಬ್ಬಂದಿಯ ಜೊತೆಗೆ ಜನತೆ ನೋಡಿಕೊಳ್ಳುವರು. ಅಗ್ನಿ ಅನಾಹುತಗಳು, ದನಕರುಗಳು ಮೇಯುವುದು ಕಂಡು ಬಂದಲ್ಲಿ ಸಿಬ್ಬಂದಿಯು ಸ್ಥಳೀಯರ ಸಹಕಾರದೊಂದಿಗೆ ರಕ್ಷಣೆ ಮಾಡುವರು.

ಅಧ್ಯಾಯ – 3

ಅರಣ್ಯ ಕೃಷಿ

1. ನಿರ್ವಹಣೆ ಕ್ರಮ:–

ಸಾಮಾಜಿಕ ಅರಣ್ಯವು ಜನ ಸಮುದಾಯ, ರೈತಾಪಿ ಜನ ಹಾಗೂ ಸಂಘ ಸಂಸ್ಥೆಗಳು, ಶಾಲೆಗಳ ಮೂಲಕ ನೆಡುತೋಪು ಬೆಳೆಸಿ ನಿರ್ವಹಿಸಲಾಗುತ್ತಿದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಆಯ್ದ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಬೆಳೆಸಿಕೊಡುವ

ಗಿಡಗಳ ಸಂರಕ್ಷಣೆ, ನಿರ್ವಹಣೆಯನ್ನು ಅವರೇ ನಿರ್ವಹಿಸುವರು. ಸಾಮಾಜಿಕ ಅರಣ್ಯ ವಿಭಾಗದಲ್ಲಿ ಬೆಳೆಸಿದ ನೆಡುತೋಪುಗಳನ್ನು ಮುಂದಿನ ನಿರ್ವಹಣೆಗಾಗಿ ಆಯಾ ಗ್ರಾಮ ಪಂಚಾಯಿತಿ/ಗ್ರಾಮ ಅರಣ್ಯ ಸಮಿತಿಗಳಿಗೆ ನೀಡಿರುವ ಕಾರಣ ಅವರಿಂದ ಬೇಡಿಕೆ ಬಂದಲ್ಲಿ ನೆಡುತೋಪಿನ ಮೌಲ್ಯ ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

2. ಅರಣ್ಯೀಕರಣ ಮತ್ತು ಅವುಗಳ ಉತ್ಪತ್ತಿ:–

ಈ ವಿಭಾಗದ 3 ವಲಯಗಳಲ್ಲಿ ಈಗಾಗಲೇ ಬೆಳೆಸಿರುವ ನೆಡುತೋಪುಗಳನ್ನು ನಿರ್ವಹಣೆ ಮಾಡಲಾಗಿದೆ. ಹಿಂದಿನ ಸಾಲುಗಳಲ್ಲಿ ಬೆಳೆಸಿದ ನೆಡುತೋಪುಗಳನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. 2017–18ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ 458 ಕಿ.ಮೀ ನೆಡುತೋಪು ನಿರ್ಮಾಣ ಮತ್ತು 229.40ಹೆ/ಕಿ.ಮೀ ನೆಡುತೋಪುಗಳನ್ನು ನಿರ್ವಹಿಸಲಾಗಿದೆ. ಹಾಗೂ 2018ನೇ ಮಳೆಗಾಲದಲ್ಲಿ ನೆಡುತೋಪು ನಿರ್ಮಾಣ ಮಾಡಲು 126ಹೆ/ಕಿ.ಮೀ ಮುಂಗಡ ಕಾಮಗಾರಿಗಳನ್ನು ಮಾಡಲಾಗಿದೆ. ಸಾರ್ವಜನಿಕರ ಜಮೀನುಗಳಲ್ಲಿ 2017ರ ಮಳೆಗಾಲದಲ್ಲಿ ಸಸಿಗಳನ್ನು ನೆಡುವ ಸಲುವಾಗಿ ಆರ್.ಎಸ್.ಪಿ.ಡಿ. ಯೋಜನೆಯಡಿ ರೈತರಿಗೆ 4.44ಲಕ್ಷ ಸಸಿಗಳನ್ನು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗಿರುತ್ತದೆ. ಹಾಗೂ 2018ರ ಮಳೆಗಾಲಕ್ಕೆ ಹಂಚಿಕೆ ಮಾಡಲು ಈಗಾಗಲೇ ಸಸ್ಯಕ್ಷೇತ್ರಗಳಲ್ಲಿ 2.50 ಲಕ್ಷ ವಿವಿದ ಗಾತ್ರದ ಸಸಿಗಳನ್ನು ಬೆಳೆಸಲಾಗಿದೆ.

ಸದರಿ ವರ್ಷದಲ್ಲಿ ಇಲಾಖಾ ವತಿಯಿಂದ 2018ನೇ ಮಳೆಗಾಲದಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ನೆಡುತೋಪು ಬೆಳೆಸಲು 49280 ಸಸಿಗಳನ್ನು ನರ್ಸರಿಯಲ್ಲಿ ಬೆಳೆಸಲಾಗಿದೆ ಹಾಗೂ ಎಂ.ಎನ್.ಆರ್.ಇ.ಜಿ.ಎ. ಯೋಜನೆಯಡಿ ನೆಡುತೋಪು ಬೆಳೆಸಲು ವಿವಿಧ ಅಳತೆಯ 51480 ಸಸಿಗಳನ್ನು ಬೆಳೆಸಲಾಗಿದೆ. ಕೆ.ಐ.ಎ.ಡಿ.ಬಿ. ಅನುದಾನದಿಂದ ನೆಲಮಂಗಲ ತಾಲ್ಲೂಕಿನ ಸೋಂಪುರ ಕೆ.ಐ.ಎ.ಡಿ.ಬಿ. ಪ್ರದೇಶದಲ್ಲಿ 31 ಹೆ/ಕಿ.ಮೀ ನೆಡುತೋಪು ನಿರ್ಮಾಣ ಮಾಡಲಾಗಿದೆ.

4. **ಶಾಶ್ವತ ಸಸ್ಯ ಕ್ಷೇತ್ರಗಳು:–**

ಕ್ರ ಸಂ	ತಾಲ್ಲೂಕು	ಈ ವಿಭಾಗದ ಸಸ್ಯಕ್ಷೇತ್ರಗಳು
1	ದೊಡ್ಡಬಳ್ಳಾಪುರ	ಡಿ ಕ್ರಾಸ್ ಇಲಾಖಾ ಸಸ್ಯಕ್ಷೇತ್ರ
2	ನೆಲಮಂಗಲ	ಅರಿಶಿನಕುಂಟೆ ಸಸ್ಯಕ್ಷೇತ್ರ
3	ಹೊಸಕೋಟೆ	ಜಡಿಗೇನಹಳ್ಳಿ ಮತ್ತು ನಗರೇನಹಳ್ಳಿ ಸಸ್ಯಕ್ಷೇತ್ರ (ಈ ಸಸ್ಯಕ್ಷೇತ್ರಗಳಲ್ಲಿ ನೀರಿನ ಅಲಭ್ಯತೆಯಿಂದ ಸಸಿಗಳನ್ನು ಬೆಳೆಸಲಾಗುತ್ತಿಲ್ಲ.)
4	ದೇವನಹಳ್ಳಿ	ಗುಡುವನಹಳ್ಳಿ ಸಸ್ಯಕ್ಷೇತ್ರ

5. **ಬೀಜಗಳ ಸಂಗ್ರಹಣೆ:–** –––––ಇಲ್ಲ–––––

6. ಗಿಡ ಮರಗಳ ಆರೈಕೆ:–

ಪ್ರತಿ ವರ್ಷ ಯೋಜನೆಯ ಅನುಸಾರ ಸಸಿಗಳನ್ನು ಬೆಳೆಸಿ ಉಳಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ಅರಣ್ಯೀಕರಣದ ನಿಯಮಾನುಸಾರ ಕಳೆ ತೆಗೆಯುವಿಕೆ, ಮಣ್ಣು ಸಡಿಲಿಕೆ, ಗಿಡಗಳ ಸುತ್ತ ಪಾತಿ ಮಾಡುವುದು, ಗೊಬ್ಬರ ಹಾಕಿ ನೀರು ಹಾಕುವುದು, ಕ್ರಿಮಿ ಕೀಟ ನಾಶಕಗಳನ್ನು ಉಪಯೋಗಿಸಿ ರೋಗ ನಿಯಂತ್ರಣ ಮಾಡಿ ಕಾವಲು ಮಾಡುವುದು, ನೆಟ್ಟ ಗಿಡಮರಗಳ ಆರೈಕೆಯಾಗಿದೆ.

ಅಧ್ಯಾಯ – 4

1. ಅರಣ್ಯ ನಿರ್ವಹಣೆಯ ಕ್ರಮ:–

ಸಾಮಾಜಿಕ ಅರಣ್ಯವು ಶಾಲಾ ವನ ಬೆಳೆಸುವುದು, ಸ್ಮಶಾನ ಆವರಣದ ಖಾಲಿ ಜಾಗಗಳಲ್ಲಿ ಗಿಡಗಳನ್ನು ನೆಡುವುದು, ಸಾರ್ವಜನಿಕ ಪ್ರದೇಶದ ಖಾಲಿ ಜಾಗಗಳಲ್ಲಿ ಗಿಡಗಳನ್ನು ನೆಡುವುದು, ಇತರೇ ಸರ್ಕಾರದ ಜಾಗಗಳಲ್ಲಿ ಗಿಡಗಳನ್ನು ನೆಟ್ಟು ನೆಡುತೋಪು ಬೆಳೆಸುವುದು, ರಸ್ತೆ ಬದಿ ನೆಡುತೋಪು ಹಾಗೂ ಕೆರೆ ಅಂಗಳ ನೆಡುತೋಪು ಬೆಳೆಸುವುದು ಮತ್ತು ಸಸ್ಯಕ್ಷೇತ್ರಗಳಲ್ಲಿ ವಿವಿಧ ಜಾತಿಯ ಮತ್ತು ವಿವಿಧ ಗಾತ್ರದ ಪಾಲಿಥಿನ್ ಚೀಲಗಳಲ್ಲಿ ಸಸಿ ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಜನರಿಗಾಗಿ ಮತ್ತು ಜನರ ಸಹಕಾರದಿಂದ ನೆಡುತೋಪು ಬೆಳೆಸುವುದು ಸಾಮಾಜಿಕ ಅರಣ್ಯದ ಉದ್ದೇಶವಾಗಿದೆ. ಇಂದಿನ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅರಣ್ಯದ ಮೇಲೆ ಬೀಳುತ್ತಿರುವ ಒತ್ತಡವನ್ನು ತಡೆಯಲು, ಜನರಿಗೆ ಬೇಕಾಗುವ ದೈನಂದಿನ ಉರುವಲು, ಮರಮುಟ್ಟು, ಉತ್ತಮ ವಾತಾವರಣ, ತಂಪಾದ ಗಾಳಿ, ಮಳೆ ಬರಲು ಸಹಾಯಕವಾಗುವುದರಿಂದ, ಫಲಪುಷ್ಪಗಳನ್ನು ನೀಡುವ, ಶೀಘ್ರವಾಗಿ ಬೆಳೆದು ಹೆಚ್ಚು ಫಲ ನೀಡುವ ಮತ್ತು ಪಶು ಪಕ್ಷಿಗಳಿಗೆ ಹಣ್ಣು, ಮೇವು, ಕೃಷಿಗೆ ಹಸಿರು ಗೊಬ್ಬರ ನೀಡುವಂತಹ ಲಾಭದಾಯಕ ಸಸಿಗಳನ್ನು ಬೆಳೆಸಲಾಗುವುದು. ಜನರಿಗೆ ಅರಣ್ಯದ ಬಗ್ಗೆ ಅರಿವು ಮೂಡಿಸಿ ಜನರಿಗೋಸ್ಕರ ಜನರ ಸಹಾಯದಿಂದಲೇ ಸಾಮಾಜಿಕ ಅರಣ್ಯವನ್ನು ನಿರ್ವಹಿಸಲಾಗುತ್ತಿದೆ.

2. ಫಲ ತೆಗೆಯುವ ವಿಧಾನಗಳು:–

ಈ ವಿಭಾಗದಲ್ಲಿ ಬೆಳೆಸಿರುವ ನೆಡುತೋಪುಗಳನ್ನು 3 – 4 ವರ್ಷಗಳ ಕಾಲ ನಿರ್ವಹಣೆ ಮಾಡಿದ ನಂತರ ಮುಂದಿನ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಗ್ರಾಮ ಪಂಚಾಯಿತಿಗಳಿಗೆ/ಗ್ರಾಮ ಅರಣ್ಯ ಸಮಿತಿಗಳಿಗೆ ವಹಿಸಿಕೊಡಲಾಗುತ್ತಿದೆ. ಈ ರೀತಿ ವಹಿಸಿಕೊಟ್ಟ ನೆಡುತೋಪುಗಳು ಕಟಾವಿಗೆ ಬಂದ ಮೇಲೆ ಗ್ರಾಮ ಪಂಚಾಯಿತಿ/ಗ್ರಾಮ ಅರಣ್ಯ ಸಮಿತಿಯವರ ತೀರ್ಮಾನದಂತೆ ಈ ನೆಡುತೋಪುಗಳನ್ನು ಕಟಾವು ಮಾಡಿ ಮರು ನೆಡುತೋಪು ಬೆಳೆಸುವ ಕಾರ್ಯಕ್ರಮಗಳಿರುತ್ತವೆ. ಆದಾಯವನ್ನು ಶೇಕಡಾ 50ಭಾಗ ಸರ್ಕಾರಕ್ಕೆ ಮತ್ತು ಉಳಿದ ಶೇಕಡಾ 25 ಭಾಗ ಗ್ರಾಮ ಅರಣ್ಯ ಸಮಿತಿಯ ಫಲಾನುಭವಿಗಳಿಗೆ ಹಾಗೂ ಶೇಕಡಾ 25 ಭಾಗವನ್ನು ಗ್ರಾಮ ಅರಣ್ಯಾಭಿವೃದ್ಧಿ ನಿಧಿಗೆ ಜಮೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಮತ್ತು ಕಟಾವಾದ ನೆಡುತೋಪಿನ ಜಾಗದಲ್ಲಿ ಒತ್ತುವರಿ ತಡೆಯಲು ಬದಲಿ ನೆಡುತೋಪು ಬೆಳೆಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಾಯ – 5

<u>ಆರ್ಥಿಕ ಫಲಿತಾಂಶಗಳು:</u>

1. ಆದಾಯ:–

ಮರಮುಟ್ಟುಗಳು, ಅರಣ್ಯ ಅಪರಾಧ ಪ್ರಕರಣಗಳು, ಟೆಂಡರ್ ಕಂ ಹರಾಜು, ಕಲ್ಲುಗಣಿ ಇತ್ಯಾದಿಗಳು ಸಾಮಾಜಿಕ ಅರಣ್ಯ ವ್ಯಾಪ್ತಿಗೆ ಒಳಪಡದೆ ಇರುವ ಕಾರಣ ಮತ್ತು ಮುಖ್ಯವಾಗಿ ಜನ ಸಾಮಾನ್ಯರ ಅವಶ್ಯಕತೆಗಾಗಿ ಸಾಮಾಜಿಕ ಅರಣ್ಯ ವಿಭಾಗ ಶ್ರಮಿಸುತ್ತಿರುವುದರಿಂದ ಆದಾಯ ನಿರೀಕ್ಷಿಸುವಂತಿಲ್ಲ.

2. ವೆಚ್ಚ:–

ಈ ವಿಭಾಗದ ವಲಯಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2017–18ನೇ ಸಾಲಿನಲ್ಲಿ ನಮೂನೆಯಲ್ಲಿ ತಿಳಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಮಾಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಕೈಗೊಂಡ ಕಲ್ಯಾಣಕಾರಿ ಚಟುವಟಿಕೆಗಳು

2017–18ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ (ತಾಲ್ಲೂಕು ಪಂಚಾಯತ್ ಅನುದಾನ) ಈ ವಿಭಾಗ ವ್ಯಾಪ್ತಿಯ 3 ತಾಲ್ಲೂಕುಗಳಲ್ಲಿ 81 ಜನ ಫಲಾನುಭವಿಗಳಿಗೆ ಸೋಲಾರ್ ಲ್ಯಾಂಪ್ಸ್ ಉಚಿತವಾಗಿ ವಿತರಿಸಿದೆ.

ಗಿರಿಜನ ಉಪಯೋಜನೆಯಡಿ (ತಾಲ್ಲೂಕು ಪಂಚಾಯತ್ ಅನುದಾನ) ಈ ವಿಭಾಗ ವ್ಯಾಪ್ತಿಯ 2 ತಾಲ್ಲೂಕುಗಳಲ್ಲಿ 19 ಜನ ಫಲಾನುಭವಿಗಳಿಗೆ ಸೋಲಾರ್ ಲೈಟ್ ಉಚಿತವಾಗಿ ವಿತರಿಸಿದೆ.

ವನ್ಯ ಪ್ರಾಣಿಗಳ ಸಂರಕ್ಷಣೆ

ವನ್ಯ ಪ್ರಾಣಿಗಳ ಸಂರಕ್ಷಣೆ, ವನ್ಯಧಾಮ ಮತ್ತು ಪಕ್ಷಿಧಾಮಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ವನ್ಯ ಜೀವಿ ವಿಭಾಗವಿದ್ದು, ಸಾಮಾಜಿಕ ಅರಣ್ಯ ವಿಭಾಗವು ಅದರಲ್ಲಿ ಭಾಗಿಯಾಗಿರುವುದಿಲ್ಲ.

ಪ್ರದರ್ಶನ ಮತ್ತು ಪ್ರಚಾರ

2017–18ನೇ ಸಾಲಿನ ಈ ವಿಭಾಗದ ವತಿಯಿಂದ ಲಭ್ಯವಿರುವ ಅರಣ್ಯ ಪ್ರೇರಕರ ಮುಖಾಂತರ ಅರಣ್ಯ ಅಭಿವೃದ್ಧಿ ಮತ್ತು ರಕ್ಷಣೆ ಹಾಗೂ ಅರಣ್ಯದಿಂದ ಸಾರ್ವಜನಿಕರಿಗೆ ಲಭ್ಯವಾಗುವ ಅನುಕೂಲಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆ.

ಅರಣ್ಯ ಕೂಲಿಕಾರರು ಮತ್ತು ಕೂಲಿ

ಕೇಂದ್ರ ಪುರಸ್ಕೃತ ಕಾಮಗಾರಿಗಳಿಗೆ ತೆಗೆದುಕೊಳ್ಳುವ ಕೂಲಿಗಾರರಿಗೆ ದಿನ ಒಂದಕ್ಕೆ ರೂ.239.00ರಂತೆ ನೀಡಲಾಗುತ್ತಿದೆ.

1	ಸಮ್ಮೇಳನ ಸಭೆ	–ಇಲ್ಲ–
2	ಅರಣ್ಯ ಸಲಹಾ ಸಮಿತಿ	–ಇಲ್ಲ–
3	ಉಪ ಸಂಹಾರ	–ಇಲ್ಲ–

ನಮೂನೆ

2017–18ನೇ ಸಾಲಿನ ಅರಣ್ಯೀಕರಣ ಕಾಮಗಾರಿಗಳ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಇಲಾಖೆಯ ಹೆಸರು: ಸಾಮಾಜಿಕ ಅರಣ್ಯ ವಿಭಾಗ ದಿನಾಂಕ:01–04–2017 ರಿಂದ ದಿನಾಂಕ:31–03–2018

ಕ್ರ ಸಂ.	ಯೋಜನೆ/ಯೋಜನೇತರ ಹೆಸರು	2017–18 ವಾರ್ಷಿಕ ಅನುದಾನ	ಮಂಜೂರಾದ ಹಣ	ಬಿಡುಗಡೆಯಾದ ಹಣ	ವೆಚ್ಚವಾದ ಹಣ	ವಿವರ	ಭೌತಿಕ		ಹೆಚ್ಚು ಅಂತರವಿದ್ದಲ್ಲಿ ವ್ಯತ್ಯಾಸಕ್ಕೆ ಕಾರಣಗಳು	
							ಗುರಿ	ಸಾಧನೆ	ಭೌತಿಕ	ಆರ್ಥಿಕ
1	2	3	4	5	6	7	8	9	10	11
1	**2406–00–101–0–27–ಸಾಮಾಜಿಕ ಅರಣ್ಯ**	100.00	100.00	100.00	99.98	4ನೇ ವರ್ಷದ ನೆಡುತೋಪು ನಿರ್ವಹಣೆ	8	8	–	–
						3ನೇ ವರ್ಷದ ನೆಡುತೋಪು ನಿರ್ವಹಣೆ	27.50	27.50	–	–
						2ನೇ ವರ್ಷದ ಕೆರೆಅಂಗಳ ನೆಡುತೋಪು ನಿರ್ವಹಣೆ	127.90	127.90	–	–
						2ನೇ ವರ್ಷದ ರಸ್ತೆಬದಿ ನೆಡುತೋಪು ನಿರ್ವಹಣೆ	10	10	–	–
						2ನೇ ವರ್ಷದ ಶಾಲಾವನ ನೆಡುತೋಪು ನಿರ್ವಹಣೆ	6	6	–	–
						1ನೇ ವರ್ಷದ ರಸ್ತೆಬದಿ ನೆಡುತೋಪು ನಿರ್ವಹಣೆ	6	6		
						ಕೆರೆ ಅಂಗಳ ನೆಡುತೋಪು ನಿರ್ಮಾಣ	148	148	–	–
						ರಸ್ತೆಬದಿ ನೆಡುತೋಪು ನಿರ್ಮಾಣ	18	18	–	–
						ಕೆರೆ ಅಂಗಳ ಮುಂಗಡ ಕಾಮಗಾರಿ	93	93	–	–
						ರಸ್ತೆಬದಿ ಮುಂಗಡ ಕಾಮಗಾರಿ	21	21	–	–
						ಸಸಿಗಳ ನಿರ್ವಹಣೆ 8"x12"	65160	65160	–	–
						ಸಸಿಗಳ ನಿರ್ವಹಣೆ 14"x20"	3960	3960	–	–
						8"x12" ಅಳತೆಯ ಸಸಿಗಳನ್ನು ಬೆಳೆಸುವುದು	40040	40040		
						14"x20" ಅಳತೆಯ ಸಸಿಗಳನ್ನು ಬೆಳೆಸುವುದು	9240	9240		
						ನೆಲಮಂಗಲ ನರ್ಸರಿಗೆ ಹೊಸದಾಗಿ ವಿದ್ಯುತ್ ಲೈನ್ ಅಳವಡಿಸುವುದು	1	1	–	–
2	**2406–00–101–0–28 ಕಟ್ಟಡಗಳು**	20.00	20.00	20.00	20.00	ನೆಲಮಂಗಲ ಸಾಮಾಜಿಕ ಅರಣ್ಯ ವಲಯದ ಅರಿಶಿನಕುಂಟೆ ಸಸ್ಯಕ್ಷೇತ್ರದಲ್ಲಿ	1	1	–	–

						ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ				
						ನೆಲಮಂಗಲ ಸಾಮಾಜಿಕ ಅರಣ್ಯ ವಲಯದ ಅರಿಶಿನಕುಂಟೆ ಸಸ್ಯಕ್ಷೇತ್ರಕ್ಕೆ ಮುಳ್ಳುತಂತಿ ಬೇಲಿ ಮತ್ತು ಗೇಟ್‌ಗಳನ್ನು ಅಳವಡಿಸುವುದು.	1	1		
						ಹೊಸಕೋಟೆ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡದ ಮುಂದುವರೆದ ಕಾಮಗಾರಿಗಳು–ಮೆಟ್ಟಿಲು, ನೀರಿನ ತೊಟ್ಟಿ, ಪಂಪ್	1	1		
3	**ರಸ್ತೆ ಬದಿ ನೆಡುತೋಪು – 139**	17.622	17.622	17.622	17.613	ಮುಂಗಾರು ನೆಡುತೋಪು ನಿರ್ಮಾಣ	3	3	–	–
						3ನೇ ವರ್ಷದ ನೆಡುತೋಪು ನಿರ್ವಹಣೆ	3	3	–	–
						5ನೇ ವರ್ಷದ ನೆಡುತೋಪು ನಿರ್ವಹಣೆ	27	27	–	–
						ಮುಂಗಡ ಕಾಮಗಾರಿ	12	12	–	–
4	**ರಸ್ತೆ ಬದಿ ನೆಡುತೋಪು 422 ಎಸ್.ಪಿ.ಪಿ**	2.762	2.762	2.762	2.758	4ನೇ ವರ್ಷದ ನೆಡುತೋಪು ನಿರ್ವಹಣೆ	6	6	–	
						5ನೇ ವರ್ಷದ ನೆಡುತೋಪು ನಿರ್ವಹಣೆ	5	5	–	
5	**ರಸ್ತೆ ಬದಿ ನೆಡುತೋಪು 423 ಟಿ.ಎಸ್.ಪಿ**	1.145	1.145	1.145	1.145	4ನೇ ವರ್ಷದ ನೆಡುತೋಪು ನಿರ್ವಹಣೆ	3	3	–	–
6	**ಆರ್.ಎಸ್.ಪಿ.ಡಿ.–139 ಪ್ರಕಾ**	37.458	37.458	37.458	37.458	5”x8” ಅಳತೆಯ ಸಸಿಗಳ ನಿರ್ವಹಣೆ	25000	25000	–	–
						6”x9” ಅಳತೆಯ ಸಸಿಗಳ ನಿರ್ವಹಣೆ	269000	269000	–	–
						8”x12” ಅಳತೆಯ ಸಸಿಗಳ ನಿರ್ವಹಣೆ	150000	150000	–	–
						6”x9” ಅಳತೆಯ ಸಸಿಗಳನ್ನು ಬೆಳೆಸುವುದು	150000	150000	–	–
						8”x12” ಅಳತೆಯ ಸಸಿಗಳನ್ನು ಬೆಳೆಸುವುದು	100000	100000	–	–
7	**ಕೆ.ಎಫ್.ಡಿ.ಎಫ್.**	21.733	21.733	21.733	21.731	ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ನೆಡುತೋಪು ನಿರ್ಮಾಣ	105	105		
						ಗೋಮಾಳ ಪ್ರದೇಶದಲ್ಲಿ ನೆಡುತೋಪು ನಿರ್ಮಾಣ	10	10		
						ಕೆರೆ ಅಂಗಳ ಪ್ರದೇಶದಲ್ಲಿ ನೆಡುತೋಪು ನಿರ್ಮಾಣ	10	10		
						10”x16” ಅಳತೆಯ ಸಸಿಗಳ ನಿರ್ವಹಣೆ	12600	12600		
8	**ವಿಶೇಷ ಘಟಕ ಯೋಜನೆ**	3.50	3.50	3.50	3.50	ಸೋಲಾರ್ ಲೈಟ್ಸ್, ಅಡಿಗೆ ಅನಿಲ	81	81	–	–

	(ತಾ.ಪಂ)					ಸಂಪರ್ಕ ವಿತರಿಸಲಾಗಿದೆ.				
9	ಗಿರಿಜನ ಉಪಯೋಜನೆ (ತಾ.ಪಂ)	0.80	0.80	0.80	0.80	ಸೋಲಾರ್ ಲೈಟ್ಸ್, ಅಡಿಗೆ ಅನಿಲ ಸಂಪರ್ಕ ವಿತರಿಸಲಾಗಿದೆ.	19	19	–	–
10	ಎಂ.ಎನ್.ಆರ್.ಇ.ಜಿ.ಎ.	479.398	141.14	141.14	141.14	ಕೆರೆ ಅಂಗಳ ನೆಡುತೋಪು ನಿರ್ಮಾಣ	73	41		
						ರಸ್ತೆಬದಿ ನೆಡುತೋಪು ನಿರ್ಮಾಣ	48	52		
						ಶಾಲಾ ನೆಡುತೋಪು ನಿರ್ಮಾಣ	40	40		
						ರಸ್ತೆ ಬದಿ ನೆಡುತೋಪು ನಿರ್ವಹಣೆ	54	54		
						6"X9" ಅಳತೆಯ ಸಸಿಗಳ ನಿರ್ವಹಣೆ	121000	121000		
						8"X12" ಅಳತೆಯ ಸಸಿಗಳ ನಿರ್ವಹಣೆ	137000	137000		
						10"X16" ಅಳತೆಯ ಸಸಿಗಳ ನಿರ್ವಹಣೆ	40000	40000		
						14"X20" ಅಳತೆಯ ಸಸಿಗಳ ನಿರ್ವಹಣೆ	20000	20000		
	ಎಂ.ಎನ್.ಆರ್. ಇ.ಜಿ.ಎ					6"X9" ಅಳತೆಯ ಸಸಿಗಳನ್ನು ಬೆಳೆಸುವುದು.	125000	125000		
						8"X12" ಅಳತೆಯ ಸಸಿಗಳನ್ನು ಬೆಳೆಸುವುದು.	150000	150000		
						10"X16" ಅಳತೆಯ ಸಸಿಗಳನ್ನು ಬೆಳೆಸುವುದು.	20000	20000		
						14"X20" ಅಳತೆಯ ಸಸಿಗಳನ್ನು ಬೆಳೆಸುವುದು	15000	15000		
11	2406–01–001–2–01 – General establishment-034 Contract & Outsource Motivator Hanourarium	17.28	18.36	18.36	17.173	ಅರಣ್ಯ ಪ್ರೇರಕರ ಗೌರವ ಧನ	17ಸಂಖ್ಯೆ	17ಸಂಖ್ಯೆ	ದಿ.26.12.17ರಂದು ಒಬ್ಬ ಅರಣ್ಯ ಪ್ರೇರಕ ಮರಣಹೊಂದಿರುತ್ತಾನೆ	
12	ವೇತನ	91.00	91.00	67.686	67.686	ಅಧಿಕಾರಿ/ಸಿಬ್ಬಂದಿ ವೇತನ	25ಸಂಖ್ಯೆ	18ಸಂಖ್ಯೆ	–	
13	<u>ವೇತನೇತರ</u>									
	ಕಛೇರಿ ವೆಚ್ಚ	54.57	54.57	54.57	29.124					
	ದಿನಗೂಲಿ ನೌಕರರ ವೇತನ	40.36	40.36	40.36	30.282					
	ಹೊರಗುತ್ತಿಗೆ ನೌಕರರ ವೇತನ	16.62	16.62	16.62	16.60					

ವನ ಮಹೋತ್ಸವ

2017–18ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ವನ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗಿರುತ್ತದೆ. 2017ನೆ ಮಳೆಗಾಲದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ನಿರಿಗಾಗಿ ಅರಣ್ಯ ಕಾರ್ಯಕ್ರಮದಡಿಯಲ್ಲಿ ಮಾಕಳಿ ಬೆಟ್ಟದಲ್ಲಿ 30000 ಬೀಜದ ಉಂಡೆಗಳನ್ನು ಬಿತ್ತನೆ ಮಾಡಲಾಗಿದೆ ಹಾಗೂ ಹೊಸಹಳ್ಳಿ ಅರಣ್ಯ ಪ್ರದೇಶದಲ್ಲಿ 25000 ಬೀಜದ ಉಂಡೆಗಳನ್ನು ಬಿತ್ತನೆ ಮಾಡಲಾಗಿದೆ. ಹೊಸಕೋಟೆ ತಾಲ್ಲೂಕಿನಲ್ಲಿ ಅರಳೆಮಾಕನಹಳ್ಳಿ ಗುಡ್ಡದಲ್ಲಿ 10000 ಬೀಜಗಳ ಉಂಡೆಗಳನ್ನು ನಾಟಿ ಮಾಡಲಾಗಿರುತ್ತದೆ.

ಸಂಸತ್ ಸದಸ್ಯರ ಅಭಿವೃದ್ಧಿ ಯೋಜನೆ

ಸದರಿ ಯೋಜನೆಯಡಿ 2017–18ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ವನಸಂವರ್ಧನ

ಸದರಿ ಯೋಜನೆಯಡಿ 2017–18ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

15. ಸಹಕಾರ ಇಲಾಖೆ

ಕರ್ನಾಟಕ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳಿದ್ದು ಇವುಗಳಲ್ಲಿ ಸಹಕಾರ ಇಲಾಖೆಯು ಒಂದಾಗಿರುತ್ತದೆ. ಸರ್ಕಾರವು ರೂಪಿಸಿರುವ ಹೊಸ ಆರ್ಥಿಕ ನೀತಿಯ ಅನುಷ್ಠಾನದಲ್ಲಿ ಈ ಇಲಾಖೆಯು ಸಹ ಮಹತ್ವದ ಪಾತ್ರವಹಿಸಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಜನರ ಆರ್ಥಿಕ ಸ್ಥಿತಿಯನ್ನು ಬಲಪಡಿಸಲು ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿ ಈ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಿನಾಂಕ 31–3–2018 ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ 1080 ವಿವಿಧ ಸಹಕಾರ ಸಂಘಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

1) ವ್ಯಾಪಾರಾಭಿವೃದ್ಧಿ ಯೋಜನೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 68 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ರೈತರಿಗೆ ಕೃಷಿಗೆ ಸಂಬಂಧಿಸಿದ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ ಹಾಗೂ ಕೃಷಿ ಉತ್ಪನ್ನಗಳು ಇತ್ಯಾದಿಗಳನ್ನು ರೈತರಿಗೆ ಸುಲಭ ದರದಲ್ಲಿ ಹಾಗೂ ಸಕಾಲದಲ್ಲಿ ವಿತರಣೆ ಮಾಡುವ ಜವಾಬ್ದಾರಿಯನ್ನು ಹಮ್ಮಿಕೊಂಡಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಈ ವರ್ಗದ ಜನರಿಗೆ ಹೊಸ ತಂತ್ರಜ್ಞಾನದ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಚೈತನ್ಯವನ್ನು ನೀಡಲು ಕೇಂದ್ರ ಸರ್ಕಾರವು 8 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಲಾಗಿದೆ. ಈ ಜಿಲ್ಲೆಯಲ್ಲಿ 68 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿದ್ದು 2017–18 ನೇ ಸಾಲಿನಲ್ಲಿ 22900.00 ಲಕ್ಷ ಪತ್ತು ಮತ್ತು 1360.00 ಲಕ್ಷ ರೂಗಳ ಪತ್ತೇತರ ವ್ಯವಹಾರ ನಡೆಸಲು ಗುರಿ ನಿಗಧಿ ಪಡಿಸಿಕೊಂಡಿದ್ದು, ಸದರಿ ಸಾಲಿನಲ್ಲಿ ಪತ್ತು ರೂ. 17511.02 ಲಕ್ಷ ಮತ್ತು ಪತ್ತೇತರ ರೂ. 1338.78 ಲಕ್ಷಗಳ ವ್ಯವಹಾರ ನಡೆಸಿರುತ್ತವೆ. ಗ್ರಾಮಾಂತರ ಪ್ರದೇಶದಲ್ಲಿ 1200.00 ಲಕ್ಷ ರೂ.ಗಳ ಠೇವಣಿಯನ್ನು ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಿಕೊಂಡಿದ್ದು, ಸದರಿ ಸಾಲಿನಲ್ಲಿ ರೂ. 1169.50 ಲಕ್ಷಗಳ ಠೇವಣಿ ಸಂಗ್ರಹಣೆ ಮಾಡಲಾಗಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬ್ಯಾಂಕಿಂಗ್ ಕೌಂಟರ್‌ಗಳನ್ನು ಒದಗಿಸಿ ರೈತರಿಗೆ ಬ್ಯಾಂಕಿಂಗ್ ವ್ಯವಹಾರದ ಅವಕಾಶ ದೊರಕಿಸಿಕೊಡಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಠೇವಣಿಯನ್ನು ಸ್ವೀಕರಿಸಿ , ಆಭರಣ ಸಾಲ, ವೇತನ ಸಾಲ, ದಿನ ಬಳಕೆ ಸಾಲ ಇತ್ಯಾದಿ ಸಾಲಗಳನ್ನು ನೀಡಿ ಬ್ಯಾಂಕಿಂಗ್ ವ್ಯವಹಾರವನ್ನು ಉತ್ತಮವಾಗಿ ನಡೆಸುತ್ತಿದ್ದು ಸದಸ್ಯರಿಂದ ಪಿಗ್ಮಿ, ಉಳಿತಾಯ, ಖಾಯಂ ಠೇವಣಿ ಸಂಗ್ರಹಣೆ ಮಾಡುತ್ತಿರುತ್ತವೆ, ಈ ಠೇವಣಿಗಳ ಮೇಲೆ ಸಾಲ ವಿತರಣೆ ಮಾಡುತ್ತಿರುತ್ತವೆ.

2) ಕೃಷಿ ಸಾಲ ವ್ಯವಸ್ಥೆ:–

ಅಲ್ಪಾವಧಿ/ಮಧ್ಯಮಾವಧಿ ಸಾಲಗಳ ವಿತರಣೆ:–

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಬರುವ 68 ಕಾರ್ಯನಿರತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸರ್ಕಾರದಿಂದ ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ಮೂಲಕ ರೈತರಿಗೆ ಈ ಕೆಳಕಂಡಂತೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ವಿತರಣೆ ಮಾಡಲು ಗುರಿ ನಿಗಧಿಪಡಿಸಿಕೊಂಡು ಸಾಧಿಸಿರುವ ಪ್ರಗತಿ ಈ ಕೆಳಕಂಡಂತೆ ಇರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ.	ಸಾಲಗಳ ವಿವರ	ಗುರಿ	ಸಾಧನೆ	ಶೇಕಡವಾರು
		ಆರ್ಥಿಕ	ಆರ್ಥಿಕ	ಆರ್ಥಿಕ
1	ಅಲ್ಪಾವಧಿ ಸಾಲ	12400.00	6223.00	50%
2.	ಮಧ್ಯಮಾವಧಿ ಸಾಲ	150.00	159.30	106%
3.	ಧೀರ್ಘಾವಧಿ ಸಾಲ	1334.53	918.80	69%

3) 2015–16 ನೇ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಗ್ರಾಮೀಣ ಭಾಗಗಳಲ್ಲಿ ಸಹಕಾರ ಸಂಘಗಳ ಮೂಲಕ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಯೋಜನೆ:–

ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರವು 2015–16 ನೇ ಸಾಲಿನಲ್ಲಿ ಸಹಕಾರ ಇಲಾಖೆಯವತಿಯಿಂದ ಸಹಕಾರ ಸಂಘಗಳ ಮೂಲಕ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಯೋಜನೆ ಇರುತ್ತದೆ. ಸದರಿ ಯೋಜನೆಯಡಿ 500 ಐಕೂ /1000 ಐಕೂ ಸಾಮರ್ಥ್ಯದ ಘಟಕಕ್ಕೆ ಸುಮಾರು 5.00 ಲಕ್ಷ ರೂಪಾಯಿಗಳವರೆಗೆ ಸಹಾಯಧನವನ್ನು ಒದಗಿಸಲು ಅವಕಾಶವಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ವ್ಯಾಪ್ತಿಯಲ್ಲಿನ ಗುರುತಿಸಲಾದ 50 ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಗ್ರಾಮಗಳನ್ನು /ಸಂಘಗಳನ್ನು ಗುರುತಿಸಲಾಗಿರುತ್ತದೆ.

ಸಹಕಾರ ಸಂಘಗಳ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಸಂಬಂಧ ಸಂಘದ ಕಟ್ಟಡದಲ್ಲಿ ಅಥವಾ ಸಂಘದಿಂದ ಸ್ವಂತ ಕಟ್ಟಡ ನಿರ್ಮಿಸಿಕೊಂಡು ನೀರು ಮತ್ತು ವಿದ್ಯುತ್‌ಛಕ್ತಿ ಸೌಲಭ್ಯವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದುಕೊಂಡು ಸರ್ಕಾರದಿಂದ ದೊರೆಯುವ ರೂ. 7.50 ಲಕ್ಷಗಳವರೆಗಿನ ಸಹಾಯಧನವನ್ನು ಬಳಸಿಕೊಂಡು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ ಸಾರ್ವಜನಿಕರು 20 ಲೀಟರ್‌ಗೆ ರೂ. 5.00 ನ್ನು ನೀಡಿ ಶುದ್ಧ ಕುಡಿಯುವ ನೀರನ್ನು ಪಡೆಯಲು ಅವಕಾಶವಿರುತ್ತದೆ.

ಪ್ರಸ್ತುತ ಕುಡಿಯುವ ನೀರಿನ ಶುದ್ಧೀಕರಣ 45 ಘಟಕಗಳು ಸ್ಥಾಪನೆಗೊಂಡಿರುತ್ತವೆ. 05 ಘಟಕಗಳ ಪ್ರಗತಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

4) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು

ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಂದರಂತೆ 4 ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. 2017–18 ನೇ ಸಾಲಿನಲ್ಲಿ ರೂ. 3612.20 ಲಕ್ಷಗಳಷ್ಟು ನಿಯಂತ್ರಿತ ಮತ್ತು ರೂ. 6398.40 ಲಕ್ಷಗಳಷ್ಟು ಅನಿಯಂತ್ರಿತ ವ್ಯಾಪಾರ ವಹಿವಾಟು ಮಾಡಲಾಗಿರುತ್ತದೆ. ಇವುಗಳು ರೈತರಿಗೆ ಕೃಷಿ ಪರಿಕರ ಮತ್ತು ರಸಗೊಬ್ಬರ ವಿತರಣೆಯಲ್ಲಿ ಪ್ರಮು ಖ ಪಾತ್ರ ವಹಿಸುತ್ತಿರುತ್ತವೆ.

5) ಹಾಲು ಉತ್ಪಾದಕರ ಸಹಕಾರ ಸಂಘಗಳು:–

ಜಿಲ್ಲೆಯಲ್ಲಿ 792 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಜಿಲ್ಲೆಯಲ್ಲಿ ಕ್ಷೀರ ಆಂದೋಲನಕ್ಕೆ ನಾಂದಿಯಾಗಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಲು ಸಹಾಯಕವಾಗಿರುತ್ತದೆ. ಪ್ರತಿದಿನ ಸರಾಸರಿ 5.90 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದೆ. 2017–18 ನೇ ಸಾಲಿನಲ್ಲಿ 49498 ಜನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ.5/– ರಂತೆ ರೂ. 6875.00 ಲಕ್ಷಗಳಷ್ಟು ಸರ್ಕಾರವು ಪ್ರೋತ್ಸಾಹ ಧನ ಬಿಡುಗಡೆ ಮಾಡಿದೆ.

6) ಯಶಸ್ವಿನಿ ರೈತ ಆರೋಗ್ಯ ರಕ್ಷಣಾ ಯೋಜನೆ:–

ಯಶಸ್ವಿನಿ ರೈತ ಆರೋಗ್ಯ ರಕ್ಷಣಾ ಯೋಜನೆಯನ್ನು ಸಹಕಾರ ಇಲಾಖೆಯ ಮುಖಾಂತರ ಜಾರಿಗೊಳಿಸಲಾಗುತ್ತಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2017–18 ನೇ ಸಾಲಿಗೆ ಗ್ರಾಮೀಣ ಯಶಸ್ವಿನಿ ಯೋಜನೆಯಡಿಯಲ್ಲಿ 1,50,000 ಲಕ್ಷ ಸದಸ್ಯರನ್ನು ನೋಂದಾಯಿಸಲು ಗುರಿ ಇದ್ದು, 88314 ಜನ

ಸದಸ್ಯರುಗಳನ್ನು ನೋಂದಾಯಿಸಿದೆ. ಈ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 4851 ಒಳರೊಗಿ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆಗೆ ರೂ. 680.00 ಲಕ್ಷಗಳಷ್ಟು ವೆಚ್ಚ ಮಾಡಲಾಗಿದೆ. ಈ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಹೊರರೋಗಿಗಳಾಗಿ ಒಟ್ಟು 26841 ಸದಸ್ಯರು ಚಿಕಿತ್ಸಾ ಸೌಲಭ್ಯ ಪಡೆದಿರುತ್ತಾರೆ.

ನಗರ ಯಶಸ್ವಿನಿ ಯೋಜನೆಯಡಿಯಲ್ಲಿ 2017–18ನೇ ಸಾಲಿನಲ್ಲಿ 2154 ಜನ ಸದಸ್ಯರನ್ನು ನೋಂದಾಯಿಸಿದ್ದು, 238 ಜನ ಫಲಾನುಭವಿಗಳು ಶಸ್ತ್ರಚಿಕಿತ್ಸೆ ಸೌಲಭ್ಯ ಪಡೆದಿದ್ದು, ಇದರ ವೆಚ್ಚ ರೂ 42.80 ಲಕ್ಷಗಳಾಗಿರುತ್ತದೆ.

7) 2017–18 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳನ್ನು ಕಾರ್ಯಗತ ಮಾಡಿರುವ ವಿವರಗಳು:–

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ವಿವರ	ನಿಗಧಿಯಾಗಿರುವ ಆಯವ್ಯಯ ಅವಕಾಶ			ಒಟ್ಟು	ಮಂಜೂರು ಮಾಡಲಾದ ಆರ್ಥಿಕ ನೆರವು	ಶೇಕಡ ಸಾಧನೆ
		ಸಾಲ	ಷೇರುಧನ	ಸಹಾಯ ಧನ			
1	ರಾಜ್ಯ ಯೋಜನೆ	0.00	0.00	20.77	20.77	20.77	100%
2	ಜಿಲ್ಲಾ ಪಂಚಾಯತ್	3.00	4.00	2.00	9.00	9.00	100%
3	ತಾಲ್ಲೂಕು ಪಂಚಾಯತ್	0.00	0.00	2.00	2.00	2.00	100%
	ಒಟ್ಟು	3.00	4.00	24.77	31.77	31.77	100%

16. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪನಿರ್ದೇಶಕರ ಕಛೇರಿಯ ವ್ಯಾಪ್ತಿಯಲ್ಲಿ 4 ಶಿಶು ಅಭಿವೃದ್ಧಿ ಯೋಜನೆಗಳು ಹಾಗೂ 1 ಸುಧಾರಣಾ ಸಂಸ್ಥೆ ಕಾರ್ಯನಿರ್ವಹಿಸುತ್ತಿವೆ. 1229 ಅಂಗನವಾಡಿ ಕೇಂದ್ರಗಳ ಮೂಲಕ 0–6 ವರ್ಷದ ಮಕ್ಕಳು, ಗರ್ಭಿಣಿ , ಬಾಣಂತಿಯರಿಗೆ ಪ್ರಾಥಮಿಕ ಶಿಕ್ಷಣ, ಚುಚುಮದ್ದು, ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ, ಮಾಹಿತಿ ಸೇವೆ ಇತ್ಯಾದಿಗಳನ್ನು ಒದಗಿಸಲು ಇಲಾಖೆಯು ಶ್ರಮಿಸುತ್ತಿದೆ. ಹಾಗೂ ದಿನಾಂಕ 02.04.2017 ರಿಂದ ಜಿಲ್ಲೆಯಾದ್ಯಂತ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹಾಗೂ ಮಾನ್ಯ ಪ್ರಧಾನ ಮಂತ್ರಿಗಳು ಪ್ಯಾನ್ ಇಂಡಿಯಾ ಅಡಿಯಲ್ಲಿ ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ಒಚಿಣಜಡಿಟಿಣಥಿ ಃಜಟಿಜಜಿಣ ಕಡಿಠಂಡಿಚಿಟಟಜ ಎಂಬ ಹೊಸ ಯೋಜನೆಯನ್ನು ಘೋಷಿಸಿರುತ್ತಾರೆ. ದಿನಾಂಕ : 01.01.2017 ರ ನಂತರ ಗರ್ಭಿಣಿಯಾಗಿರುವ ಎಲ್ಲಾ ಮಹಿಳೆಯರಿಗೆ ರೂ.5000/–ಗಳನ್ನು ಮೂರು ಕಂತುಗಳಲ್ಲಿ ಸಹಾಯ ಧನವನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. ಸದರಿ ಯೋಜನೆ ಸೌಲಭ್ಯವು ಮೊದಲ ಜೀವಂತ ಹೆರಿಗೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಗರ್ಭಿಣಿ ಎಂದು ನೋಂದಣಿಯಾದಾಗ ರೂ.1000/– ಮೊದಲನೇ ಕಂತು ಕನಿಷ್ಠ ಒಂದು ಆರೋಗ್ಯ ತಪಾಸಣೆ ಆದಾಗ (ಗರ್ಭಿಣಿಯಾಗಿ 6 ತಿಂಗಳಲ್ಲಿ) ರೂ.2000/– ಎರಡನೇ ಕಂತು, ಮಗು ಜನನ ನೋಂದಣಿ ಮೊದಲನೇ ಹಂತದ ಚುಚುಮದ್ದು ಸಮಯದಲ್ಲಿ ರೂ.2000/–ಗಳನ್ನು ಮೂರನೇ ಕಂತಿನ ರೂಪದಲ್ಲಿ ಒಟ್ಟು 5000/–ಗಳನ್ನು ನೇರ ನಗದು ಮೂಲಕ ಗರ್ಭಿಣಿ/ಬಾಣಂತಿಯರ ಖಾತೆಗೆ ಹಣವನ್ನು ನೇರವಾಗಿ ಜಮೆ ಮಾಡಲಾಗುವುದು.

ಭಾಗ್ಯಲಕ್ಷ್ಮಿ ಯೋಜನೆ (ಹೆಣ್ಣೂ ಭ್ರೂಣ ಹತ್ಯೆ ತಡೆಯಲು ಶಿಶುವಿನ ಹೆಸರಿನಲ್ಲಿ ವಿಮಾ ಯೋಜನೆಯಲ್ಲಿ ತೊಡಗಿಸುವುದು) ಇದಲ್ಲದೆ ಈ ಕೆಳಕಂಡ ಸಾಮಾಜಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ. ಸಾಂತ್ವನ ಯೋಜನೆಯಡಿ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ/ಪುನರ್ವಸತಿ ಕಲ್ಪಿಸುವುದು, ನಿಯಮಿತವಾಗಿ ಮಹಿಳೆ/ಮಕ್ಕಳಿಗೆ/ಸಂಸ್ಥೆಗಳಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಪ್ರೋತ್ಸಾಹಿಸುವುದು. (ಉದಾ:ಕಿತ್ತೂರು ರಾಣಿ ಚೆನ್ನಮ್ಮ ಶೌರ್ಯ ಪ್ರಶಸ್ತಿ) ಕೌಟುಂಬಿಕ ದೌರ್ಜನ್ಯ ಕಾಯ್ದೆ ತಡೆಯುವ ಬಗ್ಗೆ ಅರಿವು ಮತ್ತು ನೊಂದವರಿಗೆ ಕಾನೂನು ರೀತ್ಯಾ ನ್ಯಾಯ ದೊರಕಿಸುವುದು, ವಿಧವಾ ಮತ್ತು ದೇವದಾಸಿಯರ ವಿವಾಹ ಪ್ರೋತ್ಸಾಹಕ್ಕೆ ಹಾಗೂ ಪುನರ್ವಸತಿ, ನಿರ್ಗತಿಕ ಮಕ್ಕಳ ಕುಟೀರಗಳಿಗೆ ಅನುದಾನ (ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ನಡೆಸಲಾಗುತ್ತದೆ.) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಡಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ಹಾಗೂ ಕೌಶಲ್ಯ ತರಬೇತಿ ನೀಡುವುದು. ಸ್ತ್ರೀಶಕ್ತಿ ಯೋಜನೆಯಡಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಬಡತನ ರೇಖೆಗಿಂತ ಕೆಳಗಿನ ಮಹಿಳೆಯರಿಗೆ ಗುಂಪುಗಳ ಮೂಲಕ ಆರ್ಥಿಕ ಸಬಲೀಕರಣದತ್ತ ಸ್ವಾವಲಂಬನೆ ಇತ್ಯಾದಿ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿ ಅನುಷ್ಠಾನಗೊಳ್ಳುತ್ತವೆ.

ಯೋಜನಾ ಕಾರ್ಯಕ್ರಮ :

1) ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ (ಲೆಕ್ಕ ಶೀರ್ಷಿಕೆ:2211–00–102–0–22)(ಯೋಜನೆ)

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಅಧಿಕಾರಿ/ಸಿಬ್ಬಂದಿಗಳ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ, ಆಡಳಿತ ವೆಚ್ಚ ಸಂಬಂಧಿಸಿರುವುದಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಗೆ ಬರುವ 04 ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು 85 ಹಾಗೂ 1229 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 1108

ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಯಕರ್ತೆಯರಿಗೆ ಮಾಸಿಕ ರೂ.8000/–, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ರೂ.4750/– ಹಾಗೂ ಸಹಾಯಕಿಯರಿಗೆ ಮಾಸಿಕ ರೂ.4000/–, ಗೌರವಧನ ಪಾವತಿಸಲಾಗುತ್ತಿದೆ. ಹಾಗೂ ಸಿಬ್ಬಂದಿಯವರಿಗೆ ವೇತನ ಹಾಗೂ ಆಡಳಿತ ವೆಚ್ಚ ಭರಿಸುವುದು ಸೇರಿರುತ್ತದೆ.

2017–18ನೇ ಸಾಲಿನಲ್ಲಿ ಬಿಡುಗಡೆ ಸಾಧನೆ

ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
2422	2069.98	2375	1973.37

2) ಶಾಲಾ ಪೂರ್ವ ಮಕ್ಕಳಿಗೆ ಪೌಷ್ಟಿಕಾಂಶ ಕಾರ್ಯಕ್ರಮ: (ಲೆಕ್ಕಶೀರ್ಷಿಕೆ:2235–00–101–0–61) (ಯೋಜನೆ)

ಈ ಯೋಜನಾ ಕಾರ್ಯಕ್ರಮದಡಿಯಲ್ಲಿ 1108 ಅಂಗನವಾಡಿ ಕೇಂದ್ರ ಮತ್ತು 121 ಮಿನಿ ಅಂಗನವಾಡಿ ಕೇಂದ್ರಗಳಲ್ಲಿರುವ ಅಂಗನವಾಡಿ ಫಲಾನುಭವಿಗಳಿಗೆ ಪೌಷ್ಟಿಕಾಂಸ ಕಾರ್ಯಕ್ರಮಕ್ಕೆ ಸಂಬಂಧಿಸಿದ್ದಾಗಿರುತ್ತದೆ.

ಈ ಕಾರ್ಯಕ್ರಮದಡಿ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪ್ರತಿದಿನ ತಲಾರೂ.8/–ರಂತೆ, ಗರ್ಭಿಣಿ–ಬಾಣಂತಿ, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪ್ರತಿದಿನ ತಲಾ ರೂ.21/–ರಂತೆ, ಕಿಶೋರಿಯರಿಗೆ ತಲಾ ರೂ.9.50/–ರಂತೆ, ತೀವ್ರ ಅಪೌಷ್ಟಿಕ ಮಕ್ಕಳಿಗೆ ತಲಾ ರೂ.12/– ರಂತೆ ವರ್ಷದಲ್ಲಿ 300 ದಿನ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಹಾಗೂ ತೀವ್ರ ಅಪೌಷ್ಟಿಕ ಮಕ್ಕಳಿಗೆ 3 ದಿನ ಕೋಳಿ ಮೊಟ್ಟೆ 3 ದಿನ 200ಎಂ.ಎಲ್. ಹಾಲನ್ನು ಪೂರಕ ಪೌಷ್ಟಿಕ ಆಹಾರದ ಜೊತೆಗೆ ನೀಡಲಾಗುತ್ತಿದೆ. ಜೊತೆಗೆ 6 ವರ್ಷದ ಎಲ್ಲಾ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆಯಡಿ 15 ಗ್ರಾಂ ಹಾಲಿನ ಪುಡಿಯಿಂದ ತಯಾರಿಸಿದ 150 ಎಂ.ಎಲ್. ಹಾಲನ್ನು ವಾರದಲ್ಲಿ 5 ದಿನ ವಿತರಿಸಲಾಗುತ್ತದೆ, 6 ದಿನ ಮೊಟ್ಟೆ ವಿತರಿಸಲಾಗುತ್ತದೆ. 3 ರಿಂದ 06 ವರ್ಷದ ಸಾಮಾನ್ಯ ಎಸ್.ಸಿ/ಎಸ್.ಟಿ. ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ವಿತರಿಸಲಾಗುತ್ತದೆ.

3) ಐ.ಸಿ.ಡಿ.ಎಸ್. ಘಟಕ, ಉಪನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಲೆಕ್ಕಶೀರ್ಷಿಕೆ : 2211–00–102–0–61)(ಯೋಜನೆ)

ಈ ಕಾರ್ಯಕ್ರಮದಡಿ ಉಪ ನಿರ್ದೇಶಕರ ಕಛೇರಿಯ ನಿರೂಪಣಾಧಿಕಾರಿ/ಸಿಬ್ಬಂದಿ/ಇತರೆ ಆಡಳಿತ ವೆಚ್ಚ ಒಳಗೊಂಡಿದೆ. ಜಿಲ್ಲಾ ವಲಯ ಕಾರ್ಯಕ್ರಮವಾಗಿದೆ.

4) ಅಂಗನವಾಡಿ ಕಟ್ಟಡಗಳು :(ಲೆಕ್ಕ ಶೀರ್ಷಿಕೆ : 2211–00–102–0–61 (ಯೋಜನೆ)

2017–18 ನೇ ಸಾಲಿಗೆ ರೂ.50.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನವನ್ನು ಇಲಾಖೆಯ ಸ್ವಂತ ಅಂಗನವಾಡಿ ಕಟ್ಟಡಗಳ ನಿರ್ವಹಣೆಗೆ ಸಂಬಂಧಿಸಿರುತ್ತದೆ. ತಲಾ 1 ಅಂಗನವಾಡಿ ಕಟ್ಟಡಕ್ಕೆ ರೂ.50,000/– ದಿಂದ ರೂ.1.00 ಲಕ್ಷ ಮಿತಿ ಒಳಗೆ ದುರಸ್ಥಿ ಕಾರ್ಯವನ್ನು ತಾಲ್ಲೂಕು ಪಂಚಾಯತ್ ನಿಂದ ಕ್ರಿಯಾ ಯೋಜನೆ ಸಿದ್ಧಪಡಿಸಿ ಜಿಲ್ಲಾ ಪಂಚಾಯತ್ ನಿಂದ ಅನುಮೋದನೆ ಪಡೆದು ವೆಚ್ಚ ಭರಿಸಬೇಕಾಗಿದೆ. 2017–18ನೇ ಸಾಲಿನಲ್ಲಿ 65 ಅಂಗನವಾಡಿ ಕಟ್ಟಡಗಳನ್ನು ದುರಸ್ಥಿಗೊಳಿಸಲಾಗಿದೆ. ಈ ಉದ್ದೇಶಕ್ಕೆ ಭರಿಸಲಾದ ವೆಚ್ಚ ರೂ.117.64 ಲಕ್ಷಗಳು. ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದೆ.

ಯೋಜನೇತರ ಕಾರ್ಯಕ್ರಮ

1) **ಸಿಬ್ಬಂದಿ ಮತ್ತು ಆಡಳಿತ (ಲೆಕ್ಕ ಶೀರ್ಷಿಕೆ : 2235–00–101–0–27)**

2017–18ನೇ ಸಾಲಿನಲ್ಲಿ ರೂ.66.30 ಲಕ್ಷ ಆಯವ್ಯಯ ಬಿಡುಗಡೆಯಾಗಿದ್ದು, ರೂ.45.30 ಲಕ್ಷ ವೆಚ್ಚವಾಗಿರುತ್ತದೆ. ಈ ಅನುದಾನವು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು/

ಸಿಬ್ಬಂದಿಯವರ ವೇತನ ಹಾಗೂ ಕಛೇರಿಯ ಆಡಳಿತ ವೆಚ್ಚ ಒಳಗೊಂಡಿರುತ್ತದೆ. ಈ ಕಾರ್ಯಕ್ರಮವು ಜಿಲ್ಲಾ ಪಂಚಾಯತಿಯ ಕಾರ್ಯಕ್ರಮವಾಗಿರುತ್ತದೆ.

2) **ಶಿಶು ಕಲ್ಯಾಣ ನಿರ್ಗತಿಕ ಮಕ್ಕಳ ಪೋಷಣೆ ಮತ್ತು ನಿರ್ವಹಣೆ:(ಲೆಕ್ಕಶೀರ್ಷಿಕೆ:2211–00–102–0–26)**

ಈ ಯೋಜನೆಯು ಅನಾಥ ಮಕ್ಕಳ ಪೋಷಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದ್ದಾಗಿರುತ್ತದೆ. 2017–18ನೇ ಸಾಲಿನಲ್ಲಿ 8 ಕುಟೀರಗಳಿಗೆ ರೂ.16.05 ಲಕ್ಷಗಳು ಅನುದಾನ ನಿಗಧಿಯಾಗಿರುತ್ತದೆ. ಹೊಸಕೋಟೆ ತಾಲ್ಲೂಕಿನ ಅಲ್–ಅಮೀನ್ ಚಾರಿಟಬಲ್ ಟ್ರಸ್ಟ್ 2 ಕುಟೀರ ಮತ್ತು ನೆಲಮಂಗಲ ತಾಲ್ಲೂಕಿನ ಸ್ವರ್ಣಾರ್ಭ ವಿದ್ಯಾ ಗುರುಕುಲದಲ್ಲಿ 2 ಕುಟೀರವಿದ್ದು, ಪ್ರತಿ ಕುಟೀರದಲ್ಲಿ 25 ಫಲಾನುಭವಿಗಳಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ 3 ಕುಟೀರಗಳಿಗೆ ಈ ಬಾಬ್ತಿನಡಿ ರೂ.6.37 ಲಕ್ಷ ವೆಚ್ಚವಾಗಿರುತ್ತದೆ. ಈ ಕಾರ್ಯಕ್ರಮ ಜಿಲ್ಲಾ ವಲಯ ಕಾರ್ಯಕ್ರಮವಾಗಿದೆ.

ರಾಜ್ಯ ವಲಯದ ಕಾರ್ಯಕ್ರಮಗಳು :

3) ಭಾಗ್ಯಲಕ್ಷ್ಮಿ ಯೋಜನೆ:

ಈ ಯೋಜನೆಯು 2006–07ನೇ ಸಾಲಿನಿಂದ ಜಾರಿ ಮಾಡಲಾಗಿದೆ. ಈ ಯೋಜನೆಯಡಿ ದಿನಾಂಕ:01.04.2006ರ ನಂತರ ಜನಿಸಿದ ಹೆಣ್ಣು ಮಗುವಿಗೆ ರೂ.10,000–00 ಠೇವಣಿಯನ್ನು ಸರ್ಕಾರ ಇಡುತ್ತದೆ. ದಿನಾಂಕ:01.08.2008ರ ನಂತರ ಜನಿಸಿದ ಮೊದಲನೆ ಮಗುವಿಗೆ ರೂ.19,300/– ಹಾಗೂ 2ನೇ ಮಗುವಿಗೆ ರೂ.18,350/– ನ್ನು ಮಗುವಿಗೆ 18 ವರ್ಷ ಆಗುವವರೆಗೆ ಆ ಮೊತ್ತ ತೆಗೆಯಲು ಬರುವುದಿಲ್ಲ. ಮಗುವಿಗೆ 18 ವರ್ಷ ತುಂಬಿದ ನಂತರ ಪರಿಪಕ್ವ ಮೊತ್ತ ಲಭ್ಯವಾಗುತ್ತದೆ. ಈ ಕಾರ್ಯಕ್ರಮವು ರಾಜ್ಯ ವಲಯ ಯೋಜನಾ ವ್ಯಾಪ್ತಿಗೆ ಬರುತ್ತದೆ. ಬಿ.ಪಿ.ಎಲ್ ಕುಟುಂಬವನ್ನು ಮಾನದಂಡವನ್ನಾಗಿಸಿ ಆಯ್ಕೆ ಪ್ರಕ್ರಿಯೆ ಅನುಸರಿಸಲಾಗಿದೆ.

1537 1 ನೇ ಫಲಾನುಭವಿಗೆ ರೂ.19,300/– 2ನೇ ಫಲಾನುಭವಿಗೆ ರೂ.18,350/–ಗಳನ್ನು ನಿಶ್ಚಿತ ಠೇವಣಿ ಇರಿಸಲಾಗಿದೆ. 1537 1 ನೇ ಫಲಾನುಭವಿಗೆ ರೂ.19,300/– 2ನೇ ಫಲಾನುಭವಿಗೆ ರೂ.18,350/– ಗಳನ್ನು ನಿಶ್ಚಿತ ಠೇವಣಿ ಇರಿಸಲಾಗಿದೆ.

4) ಸ್ತ್ರೀ ಶಕ್ತಿ ಯೋಜನೆ :

ಈ ಯೋಜನೆಯು 2000–01ನೇ ಸಾಲಿನಲ್ಲಿ ಜಾರಿಗೆ ಬಂದಿರುತ್ತದೆ. ಮಹಿಳೆಯರ ಸಬಲೀಕರಣ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಈ ಯೋಜನೆ ಪೂರಕವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2017–18ನೇ ಸಾಲಿನವರೆಗೆ ರಚನೆಯಾಗಿರುವ ಒಟ್ಟು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ 3872 ಇದ್ದು, ಒಟ್ಟು 60443 ಸದಸ್ಯರಿರುತ್ತಾರೆ. ಈ ಯೋಜನೆಗೆ ಸರ್ಕಾರದಿಂದ ಸುತ್ತುನಿಧಿ, ಆದಾಯೋತ್ಪನ್ನ ಚಟುವಟಿಕೆ ಹಮ್ಮಿಕೊಂಡಿರುವ ಗುಂಪುಗಳಿಗೆ, ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ, 6% ಬಡ್ಡಿ ಸಹಾಯಧನ ಮುಂತಾದ ವಿವಿಧ ಕಾರ್ಯಕ್ರಮಗಳಿಗೆ ಪ್ರಗತಿ ಸಾಧಿಸಲಾಗಿರುತ್ತದೆ.

2017–18ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕು, ಉತ್ತಮ ಸ್ತ್ರೀಶಕ್ತಿ ಒಕ್ಕೂಟ ಪ್ರಶಸ್ತಿ ಹಾಗೂ ಹೊಸಕೋಟೆ ತಾಲ್ಲೂಕಿನ ತೇಜಸ್ವಿನಿ ಮಹಿಳಾ ಸ್ವಸಹಾಯ ಸಂಘ, ತತ್ತನೂರು ಗ್ರಾಮ ಉತ್ತಮ ಗುಂಪು ಪ್ರಶಸ್ತಿ ಪತ್ರವನ್ನು ಪಡೆದುಕೊಂಡಿರುತ್ತವೆ. ನವಚೇತನ ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟದವರು ಮಹಿಳಾ ಅಭಿವೃದ್ಧಿ ನಿಗಮದಿಂದ ರೂ.1,00,000–00 ಲಕ್ಷ ಸಾಲ ಪಡೆದು, ಸವಿರುಚಿ ಸಂಚಾರಿ ಕ್ಯಾಂಟೀನ್ ನ್ನು ಪ್ರಾರಂಭಿಸಿರುತ್ತಾರೆ.

5) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳ ವಿವರ:

ಎ) ಉದ್ಯೋಗಿನಿ ಯೋಜನೆ :

1997–98ನೇ ಸಾಲಿನಿಂದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 18–45 ವರ್ಷದೊಳಗಿನ ವಾರ್ಷಿಕ ಕೌಟುಂಬಿಕ ಆದಾಯ 40,000.00 ಕ್ಕಿಂತ ಒಳಗಿರುವಂತಹ ಮಹಿಳೆಯರು ಈ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. 2017–18ನೇ ಸಾಲಿನಲ್ಲಿ ಯೋಜನೆಯಡಿ 62 ಜನರಿಗೆ 23.58 ಲಕ್ಷಗಳ ಸಹಾಯಧನವನ್ನು ನಿಗಧಿಪಡಿಸಲಾಗಿದೆ.

ಬಿ) ಮಾರುಕಟ್ಟೆ ಯೋಜನೆ :

ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ, ನಿಗಮ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿಸುವ ಕಾರ್ಯ ಹಮ್ಮಿಕೊಳ್ಳುತ್ತಿದೆ. 2017–18ನೇ ಸಾಲಿಗೆ ಆರ್ಥಿಕ 21.60 ಲಕ್ಷಗಳ ಅನುದಾನವನ್ನು 60 ಮಳಿಗೆಗಳಿಗೆ ಒದಗಿಸಲಾಗಿದೆ.

6) ಕೌಟುಂಬಿಕ ದೌರ್ಜನ್ಯ ಕಾಯ್ದೆ 2005 ನಿಯಮ 2006 :

ಲೆಕ್ಕಶೀರ್ಷಿಕೆ:2235–02–103–0–52 (ಯೋಜನೆ) ಕೌಟುಂಬಿಕ ದೌರ್ಜನ್ಯ ಕಾಯ್ದೆ 2005 ನಿಯಮ 2006 ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 4 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು /ಸಂರಕ್ಷಣಾಧಿಕಾರಿಗಳಾಗಿ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2017–18ನೇ ಸಾಲಿಗೆ ರೂ.7.25 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಭರಿಸಲಾದ ವೆಚ್ಚ ರೂ.6.84 ಲಕ್ಷಗಳು. ಈ ಯೋಜನೆ ರಾಜ್ಯ ಯೋಜನಾ ವ್ಯಾಪ್ತಿಗೆ ಬರುತ್ತದೆ.

7) ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಪ್ರಶಸ್ತಿ :

ಲೆಕ್ಕಶೀರ್ಷಿಕೆ : 2235–02–102–0–27(117) ಯೋಜನೆಯಡಿಯಲ್ಲಿ 2017–18ನೇ ಸಾಲಿಗೆ ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಕಾರ್ಯಕ್ರಮಕ್ಕೆ ರೂ.1.40 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು, ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ 14 ಮಕ್ಕಳಿಗೆ ಪ್ರತಿ ಮಕ್ಕಳಿಗೆ ರೂ.10,000/– ದಂತೆ ನಗದು ಹಾಗೂ ಪ್ರಮಾಣ ಪತ್ರ ವಿತರಿಸಲಾಗಿದೆ.

8) ಸಾಂತ್ವನ ಯೋಜನೆ :

2017–18ನೇ ಸಾಲಿನಲ್ಲಿ 05 ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯು ರಾಜ್ಯ ಯೋಜನಾ ವ್ಯಾಪ್ತಿಗೆ ಬರುತ್ತದೆ.

9) ಬಾಲ್ಯವಿವಾಹ :ಲೆಕ್ಕ ಶೀರ್ಷಿಕೆ :2235–02–001–0–01–051 (ಯೋಜನೆ)

ಬಾಲ್ಯವಿವಾಹ ತಡೆಯು ಸಲುವಾಗಿ ಸರ್ಕಾರವು ಈ ಕೆಳಕಂಡ ಇಲಾಖೆಗಳ ಅಧಿಕಾರಿಗಳನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿ ನೇಮಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಪೋಲೀಸ್ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ ಇಲಾಖೆಯ ಅಧಿಕಾರಿಗಳು ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿರುತ್ತಾರೆ.

10) ಮಹಿಳೆಯರ ಮತ್ತು ಮಕ್ಕಳ ಸಾಗಾಣೆ : ಲೆಕ್ಕ ಶೀರ್ಷಿಕೆ :2235–02–102–0–24–100 (ಯೋಜನೆ)

ಇತ್ತೀಚಿನ ದಿನಗಳಲ್ಲಿ ಬಲವಾಗಿ ಮತ್ತು ಹೆಚ್ಚಾಗಿ ನಡೆಯುತ್ತಿರುವ ಮಾನವ ಸಾಗಾಣಿಕೆಯನ್ನು ತಡೆಯಲು ಮತ್ತು ನಿರ್ಮೂಲನೆ ಮಾಡಲು ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ಅನುದಾನದ ನೆರವು ನೀಡಲಾಗುತ್ತದೆ.

11) ಮಹಿಳಾ ವಿಶೇಷ ಚಿಕಿತ್ಸಾ ಘಟಕ :

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ವೈದ್ಯಕೀಯ ಚಿಕಿತ್ಸೆ, ಪೋಲೀಸ್ ನೆರವು, ಕಾನೂನು ನೆರವು, ಆಪ್ತ ಸಮಾಲೋಚನೆ ಮತ್ತಿತರ ಸೌಲಭ್ಯಗಳನ್ನು ಒಂದೇ ಸೂರಿನಡಿ ಒದಗಿಸುವ ಸಲುವಾಗಿ ಮಹಿಳಾ ವಿಶೇಷ ಚಿಕಿತ್ಸಾ ಘಟಕ ಸ್ಥಾಪಿಸಲಾಗಿದೆ. ಈ ಯೋಜನೆಗೆ ಲೆಕ್ಕ ಶೀರ್ಷಿಕೆ 2235–02–103–0–052 (ಯೋಜನೆ) 2017–18ನೇ ಸಾಲಿಗೆ ರೂ.7.87 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.6.79 ಲಕ್ಷ ವೆಚ್ಚವಾಗಿರುತ್ತದೆ.

ಪ್ರತಿ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ವಿಶೇಷ ಚಿಕಿತ್ಸಾಘಟಕಗಳನ್ನು ದಿನಾಂಕ:19.03.2018 ರಂದು ತೆರೆಯಲಾಗಿದೆ.

1) ಸ್ಥೈರ್ಯ ನಿಧಿ ಯೋಜನೆ : ಲೆಕ್ಕ ಶೀರ್ಷಿಕೆ :2235–02–103–0–52 (059)

ಈ ಯೋಜನೆಯು ದಿನಾಂಕ : 01.07.2015 ರಿಂದ ಜಾರಿಗೆ ಬಂದಿರುತ್ತದೆ. ಸ್ಥೈರ್ಯನಿಧಿ ಯೋಜನೆಯಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರಕ್ಕಾಗಿ ರೂ.5.00 ಲಕ್ಷ ಅನುದಾನ 2015ನೇ ಸಾಲಿನಲ್ಲಿ ಬಿಡುಗಡೆಯಾಗಿದ್ದು, ರೂ.1.98 ಲಕ್ಷ ವೆಚ್ಚವಾಗಿರುತ್ತದೆ.

17. ಜಿಲ್ಲಾ ಯುವಜನ ಸೇವಾ ಇಲಾಖೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ ಮತ್ತು ಯುವತಿಯರಿಗೆ ವಿವಿಧ ಯುವಜನ ಸೇವೆ ಮತ್ತು ಕ್ರೀಡಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಬರತಕ್ಕ ಇಲಾಖೆಯ ವಿವಿಧ ಯೋಜನೇತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಕಾರ್ಯಗತಗೊಳಿಸಲಾಗಿದೆ.

ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಾಯಕ ನಿರ್ದೇಶಕರು ಜವಾಬ್ದಾರಿಯಾಗಿದ್ದು, ಇವರಿಗೆ ಸಹಕರಿಸಲು ದ್ವಿತೀಯ ದರ್ಜೆ ಸಹಾಯಕರು, ಗುಂಪು–ಡಿ ನೌಕರರು ಅಲ್ಲದೇ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಹೊಸಕೋಟೆ ತಾಲ್ಲೂಕಿಗೆ ತರಬೇತುದಾರರ ಸೇವೆಯನ್ನು ಒದಗಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 2017–18ನೇ ಸಾಲಿನಲ್ಲಿ ಯೋಜನೇತರ ಅಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಅಯವ್ಯಯದಡಿ ಒದಗಿಸಲಾಗಿದೆ.

1) ಬಿಡುಗಡೆಯಾದ ಅನುದಾನ	–	ರೂ. 1,67,94,400–00
2) ವೆಚ್ಚವಾದ ಅನುದಾನ	–	ರೂ. 1,43,83,600–00
3) ಸರ್ಕಾರಕ್ಕೆ ಅಧ್ಯರ್ಪಿಸಿದ ಅನುದಾನ	–	ರೂ. 24,10,800–00

2017–18ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

1) ಲೆಕ್ಕಶೀರ್ಷಿಕೆ:2205–00–104–0–26 ಕ್ರೀಡಾಕೂಟ ಮತ್ತು ರ್ಯಾಲಿಗಳ ಸಂಘಟನೆ ಮತ್ತು ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ

1. ದಸರಾ ಕ್ರೀಡಾಕೂಟ:–

ಕರ್ನಾಟಕ ದಸರಾ ಉತ್ಸವದಲ್ಲಿ ಕ್ರೀಡಾ ಪ್ರತಿಭೆಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಇಲಾಖೆಯಿಂದ ಪ್ರತಿ ವರ್ಷ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳನ್ನು ಸಂಘಟಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ವಿಜೇತರಾದವರು ವಿಭಾಗ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವರು. ವಿಭಾಗ ಮಟ್ಟದಲ್ಲಿ ವಿಜೇತರಾದವರು ಮೈಸೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವರು.

2017–18ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಈ ಕೆಳಕಂಡಂತೆ ಆಯೋಜಿಸಲಾಗಿರುತ್ತದೆ.

ಕ್ರ.ಸಂ	ತಾಲ್ಲೂಕು	ದಿನಾಂಕ	ಪುರುಷರು,	ಮಹಿಳೆಯರು	ಒಟ್ಟು	ವೆಚ್ಚವಾದ ಅನುದಾನ
1	ನೆಲಮಂಗಲ	28.08.2017	409	85	517	50,000/–
2	ದೇವನಹಳ್ಳಿ	30.08.2017	409	143	552	50,000/–
3	ದೊಡ್ಡಬಳ್ಳಾಪುರ	04.09.2017	493	211	704	50,000/–
4	ಹೊಸಕೋಟೆ	07.09.2017	445	136	581	50,000/–

ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಸಂಘಟಿಸಲು (ಮೈದಾನ ಸಿದ್ದತೆ, ತೀರ್ಪುಗಾರರ ಸಂಭಾವನೆ, ಶಾಮಿಯಾನ, ಸೌಂಡ್ಸ್, ಮಾರ್ಕಿಂಗ್ ಪೌಡರ್, ಫೋಟೋ, ವೀಡಿಯೋ, ಸ್ವಯಂಸೇವಕರ ಸಂಭಾವನೆ, ಲಘು ಉಪಾಹಾರ, ಬ್ಯಾನರ್, ಲೇಖನ ಸಾಮಗ್ರಿ, ಪ್ರೆಸ್ ನೋಟ್, ಕರಪತ್ರ ಹಂಚಿಕೆ ಇತ್ಯಾದಿ) ಪ್ರತೀ ತಾಲ್ಲೂಕಿಗೆ ರೂ.50,000/– ಗಳಂತೆ ಒಟ್ಟು ರೂ.2,00,000/– ಗಳ ವೆಚ್ಚವನ್ನು ಭರಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ದಿನಾಂಕ:11.09.2017 ಮತ್ತು 12.09.2017 ರಂದು 16 ಕ್ರೀಡೆಗಳನ್ನು (ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ವಾಲಿಬಾಲ್, ಕಬಡ್ಡಿ, ಖೋಖೋ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಟೇಬಲ್ ಟೆನ್ನೀಸ್, ಬ್ಯಾಡ್ಮಿಂಟನ್, ಹಾಕಿ. ಹ್ಯಾಂಡ್‌ಬಾಲ್ ಟೆನ್ನಿಸ್, ಥ್ರೋಬಾಲ್ ಮತ್ತು ನೆಟ್‌ಬಾಲ್, ಫುಟ್ಬಾಲ್, ಬಾಲ್ (ಪುರುಷರಿಗೆ ಮಾತ್ರ)) ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ನಡೆಸಲಾಗಿದ್ದು, ಈ ಕ್ರೀಡಾಕೂಟದಲ್ಲಿ 4 ತಾಲ್ಲೂಕುಗಳಿಂದ ವಿವಿಧ ಸ್ಪರ್ದೆಗಳಲ್ಲಿ ಭಾಗವಹಿಸಲಾದ 1,050 ಸ್ಪರ್ಧಾಳುಗಳಿಗೆ (585 ಪುರುಷರು ಹಾಗೂ 465 ಮಹಿಳೆಯರು) ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಕ್ರೀಡಾಕೂಟ ಸಂಘಟನೆಗಾಗಿ ಒಟ್ಟು ರೂ. 7,31,000/– ಗಳ ವೆಚ್ಚವನ್ನು ಭರಿಸಲಾಗಿದೆ.

2017–18ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಜೇತರಾಗಿ ವಿವಿಧ ಸ್ಥಳಗಳಲ್ಲಿ ನಡೆದ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲಾದ ಕ್ರೀಡಾಪಟುಗಳು/ತಂಡದ ವ್ಯವಸ್ಥಾಪಕರಿಗೆ ಪ್ರಯಾಣಭತ್ಯೆ/ದಿನಭತ್ಯೆಯನ್ನು ನೀಡಲು ಈ ಕೆಳಕಂಡಂತೆ ವೆಚ್ಚವನ್ನು ಭರಿಸಲಾಗಿದೆ.

ಕ್ರ ಸಂ	ಜಿಲ್ಲೆ	ಕ್ರೀಡೆಗಳು	ಸ್ಥಳ	ದಿನಾಂಕ	ಪುರುಷರು	ಮಹಿಳೆಯರು	ಒಟ್ಟು	ವೆಚ್ಚವಾದ ಅನುದಾನ
1	ಬೆಂಗಳೂರು ಗ್ರಾಮಾಂತರ	ಹಾಕಿ, ಬ್ಯಾಸ್ಕೇಟ್‌ಬಾಲ್, ಬಾಲ್ ಬ್ಯಾಡ್ಮಿಂಟನ್, ಲಾನ್ ಟೆನ್ನೀಸ್, ಜಿಮ್ನಾಸ್ಟಿಕ್	ಶ್ರೀ ಕಂಠೀರವ ಕ್ರೀಡಾಂಗಣ	15.09.2017 ರಿಂದ 17.09.2017 ರವರೆಗೆ	38	42	80	23,600/– (ದಿನಭತ್ಯೆ/ ಪ್ರಯಾಣಭತ್ಯೆ) 3,35,552/– (ಸಂಘಟನೆಗೆ)
2	ಚಿಕ್ಕಬಳ್ಳಾಪುರ	ಫುಟ್‌ಬಾಲ್	ಸರ್.ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣ	16.09.2017 ರಿಂದ 17.09.2017 ರವರೆಗೆ	17	–	17	4,726/–
3	ರಾಮನಗರ	ಥ್ರೋಬಾಲ್	ಜಿಲ್ಲಾ ಕ್ರೀಡಾಂಗಣ	16.09.2017 ರಿಂದ 17.09.2017 ರವರೆಗೆ	13	13	26	7,280/–
4	ದಾವಣಗೆರೆ	ಕಬಡ್ಡಿ, ಖೋ–ಖೋ	ಜಿಲ್ಲಾ ಕ್ರೀಡಾಂಗಣ	17.09.2017ರಿಂದ 18.09.2017	26	26	52	40,820/–
5	ತುಮಕೂರು	ವಾಲಿಬಾಲ್	ಜಿಲ್ಲಾ ಕ್ರೀಡಾಂಗಣ	15.09.2017 ರಿಂದ 16.09.2017 ರವರೆಗೆ	26	26	52	15,288/–
6	ಕೋಲಾರ	ಹ್ಯಾಂಡ್‌ಬಾಲ್	ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣ	16.09.2017 ರಿಂದ 17.09.2017 ರವರೆಗೆ	13	13	26	8,320/–
7	ಶಿವಮೊಗ್ಗ	ಅಥ್ಲೆಟಿಕ್ಸ್		15.09.2017 ರಿಂದ 16.09.2017	23	22	45	37,125/–

				ರವರೆಗೆ				
8	ಚಿತ್ರದುರ್ಗ	ಟೇಬಲ್ ಟೆನ್ನೀಸ್, ಶಟಲ್ ಬ್ಯಾಡ್ಮಿಂಟನ್ ಹಾಗೂ ಈಜು	ಒನಕೆ ಓಬವ್ವ ಕ್ರೀಡಾಂಗಣ	15.09.2017 ರಿಂದ 16.09.2017 ರವರೆಗೆ	17	13	30	17,700/–

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ 8 ಜಿಲ್ಲೆಗಳಿಂದ ವಿಜೇತರಾದ ಕ್ರೀಡಾಪಟುಗಳು ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿರುತ್ತಾರೆ. ಬೆಂಗಳೂರು ಗ್ರಾಮಾಂತರ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕ್ರೀಡಾಪಟುಗಳಿಗೆ ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಪ್ರಯಾಣಭತ್ಯೆ ಹಾಗೂ ದಿನಭತ್ಯೆಗಾಗಿ ರೂ.35,310/– ಗಳ ವೆಚ್ಚವನ್ನು ಭರಿಸಲಾಗಿದೆ.

2) ಸರ್ಕಾರಿ ನೌಕರರ ಕ್ರೀಡಾಕೂಟ:

ದಿನಾಂಕ:17.01.2018 ಹಾಗೂ 18.01.2018ರಂದು 2017–18ನೇ ಸಾಲಿನ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯನ್ನು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಹಾಗೂ ಇತರೆ ಸ್ಥಳಗಳಲ್ಲಿ ಸಂಘಟಿಸಲಾಗಿರುತ್ತದೆ. ಸದರಿ ಕ್ರೀಡಾಕೂಟದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಿಂದ 804 (555 ಪುರುಷರು, 249 ಮಹಿಳೆಯರು) ಸ್ಪರ್ಧಿಗಳು ಭಾಗವಹಿಸಿರುತ್ತಾರೆ. ಸಂಘಟನೆಗಾಗಿ ವಿವಿಧ ಅಂಕಣಗಳಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಸಂಘಟನಾ ವೆಚ್ಚವನ್ನು ಭರಿಸಲಾಗಿದೆ.

2017–18ನೇ ಸಾಲಿನಲ್ಲಿ ನಡೆಸಲಾದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದವರನ್ನು ದಿನಾಂಕ:10.02.2018 ರಿಂದ 11.02.2018 ರವರೆಗೆ ಬಳ್ಳಾರಿಯಲ್ಲಿ ನಡೆದ ರಾಜ್ಯ ಮಟ್ಟಕ್ಕೆ ಮೇಲ್ವಿಚಾರಕರಾಗಿ ನಿಯೋಜಿಸಲಾದವರಿಗೆ ಪ್ರಯಾಣಭತ್ಯೆ/ದಿನಭತ್ಯೆ ಹಾಗೂ ಹಲವು ವಿಜೇತ ಕ್ರೀಡಾಪಟುಗಳಿಗೆ ಟ್ರಾಕ್‌ಸೂಟ್‌ಗಳನ್ನು ನೀಡಲು ಸಾರಿಗೆ ವೆಚ್ಚವನ್ನು ಭರಿಸಲಾಗಿದೆ. ಅದರಂತೆ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟನೆ ಹಾಗೂ ರಾಜ್ಯ ಮಟ್ಟದಲ್ಲಿ ಟ್ರಾಕ್‌ಸೂಟ್ ವಿತರಣೆ ಸೇರಿದಂತೆ ಒಟ್ಟು ರೂ.5,60,000/–ಗಳ ವೆಚ್ಚವನ್ನು ಭರಿಸಲಾಗಿರುತ್ತದೆ.

3) ಯುವಜನ ಮೇಳ :–

ಯುವಜನರಲ್ಲಿರುವ ಸಾಹಿತ್ಯ ಸಾಂಸ್ಕೃತಿಕ ಪ್ರತಿಭೆಯನ್ನು ಹೊರಗೆಳೆಯಲು ಹಾಗೂ ನಾಡಿನ ಪರಂಪರೆಯನ್ನು ಸಾರುವ ಕಲಾ ಪ್ರತಿಭೆ ತೋರಲು ಜಿಲ್ಲಾ ಯುವಜನ ಮೇಳಗಳನ್ನು ಸಂಘಟಿಸಿ, ವಿಭಾಗ ಮತ್ತು ರಾಜ್ಯ ಮಟ್ಟಕ್ಕೆ ಪ್ರಯಾಣ/ದಿನಭತ್ಯೆ ನೀಡಿ ಕಳುಹಿಸಲಾಗುವುದು. ಯುವಜನರು ಜಾನಪದ ಪ್ರಾಕಾರಗಳಾದ ಗೀಗಿ ಪದ, ಲಾವಣಿ, ಜಾನಪದ ಗೀತೆ, ಜಾನಪದ ನೃತ್ಯ, ಸೋಬಾನೆ ಪದ, ಬೀಸುವ ಪದ, ವೀರಗಾಸೆ ಕುಣಿತ, ಕೋಲಾಟ, ಡೊಳ್ಳುಕುಣಿತ, ಭಾವಗೀತೆ ಮುಂತಾದವುಗಳಲ್ಲಿ ತಮ್ಮ ಪ್ರಾವೀಣ್ಯವನ್ನು ಪ್ರದರ್ಶಿಸುವರು. ಜಿಲ್ಲಾ ಮಟ್ಟದ ಯುವಜನ ಮೇಳ ಕಾರ್ಯಕ್ರವವನ್ನು ದಿನಾಂಕ:29.01.2018 ರಂದು ದೇವನಹಳ್ಳಿ ತಾಲ್ಲೂಕು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದು, 300 (207 ಬಾಲಕರು, 93 ಬಾಲಕಿಯರು) ಸ್ಪರ್ಧಾಳುಗಳು ಭಾಗವಹಿಸಿದ್ದು ಸಂಘಟನೆ, ತೀರ್ಪುಗಾರರ ಸಂಭಾವನೆ, ಬಹುಮಾನ, ಪ್ರಮಾಣಪತ್ರ, ಪ್ರಯಾಣಭತ್ಯೆ/ದಿನಭತ್ಯೆ ಸೇರಿದಂತೆ ಒಟ್ಟು ರೂ. 1,32,000/– ಗಳನ್ನು ಭರಿಸಲಾಗಿರುತ್ತದೆ.

ದಿನಾಂಕ:01.02.2018 ರಿಂದ 04.02.2018ರವರೆಗೆ ಪುತ್ತೂರಿನಲ್ಲಿ ನಡೆದ ರಾಜ್ಯ ಮಟ್ಟದ ಯುವಜನಮೇಳ ಕಾರ್ಯಕ್ರಮದಲ್ಲಿ 71 ಸ್ಪರ್ಧಿಗಳು (41 ಬಾಲಕರು, 30 ಬಾಲಕಿಯರು) ಭಾಗವಹಿಸಿದ್ದು, ಸ್ಪರ್ಧಾಳುಗಳ ಪ್ರಯಾಣಭತ್ಯೆ/ದಿನಭತ್ಯೆ ಹಾಗೂ ಕಾರ್ಯಕ್ರಮದ ಸಂಘಟನಾ ಜಿಲ್ಲೆಗೆ ರೂ.5,000/–ಗಳ ವಂತಿಕೆ

ಸೇರಿ ರೂ.1,05,110/–ಗಳ ವೆಚ್ಚವನ್ನು ಭರಿಸಲಾಗಿರುತ್ತದೆ. ಅಧಿಕೃತ ಜ್ಞಾಪನ ವಿಳಂಭವಾಗಿ ನೀಡಿದ ಪ್ರಯುಕ್ತ ಖಜಾನೆಯಲ್ಲಿ ಬಿಲ್ಲು ಪಾಸಾಗಿರುವುದಿಲ್ಲ. ಸದರಿ ವೆಚ್ಚವನ್ನು 2018–19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅನುಮೋದನೆ ಪಡೆದು ವೆಚ್ಚವನ್ನು ಭರಿಸಬೇಕಾಗಿರುತ್ತದೆ.

4) ಯುವಜನೋತ್ಸವ:–

ಯುವಜನರಲ್ಲಿ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಪ್ರತೀ ವರ್ಷ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಯುವಜನೋತ್ಸವಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ ಯುವಜನರಿಗಾಗಿ ಶಾಸ್ತ್ರೀಯ ಸಂಗೀತ (ಕರ್ನಾಟಕ ಹಾಗೂ ಹಿಂದುಸ್ಥಾನಿ) ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಲಘುವಾದ್ಯ, ಲಘುವಾದ್ಯ, ಜಾನಪದ ಗೀತೆ, ಜಾನಪದ ನೃತ್ಯ, ಏಕಾಂತ ನಾಟಕ ಸ್ಪರ್ಧೆಗಳು ಒಳಗೊಂಡಿರುತ್ತದೆ. ದಿನಾಂಕ:09.11.2017 ರಂದು ದೇವನಹಳ್ಳಿ ತಾಲ್ಲೂಕು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ 230 (136 ಬಾಲಕರು, 94 ಬಾಲಕಿಯರು) ಸ್ಪರ್ಧಿಗಳಲ್ಲಿ ವಿಜೇತರಾದ 50 (42 ಬಾಲಕರು, 08 ಬಾಲಕಿಯರು) ಸ್ಪರ್ಧಿಗಳನ್ನು ಉಡುಪಿಯಲ್ಲಿ ನಡೆಸಲಾದ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮಕ್ಕೆ ಕಳುಹಿಸಲಾಗಿದೆ ಹಾಗೂ ಪ್ರಯಾಣಭತ್ಯೆ/ದಿನಭತ್ಯೆ ವೆಚ್ಚಕ್ಕಾಗಿ ರೂ.65,000/–ಗಳನ್ನು ಭರಿಸಲಾಗಿದೆ. ಜಿಲ್ಲಾ ಮಟ್ಟದ ಯುವಜನೋತ್ಸವ ಸಂಘಟಿಸಲು ರಾಜ್ಯ ವಲಯದಿಂದ ರೂ.50,000/–ಗಳ ಅನುದಾನ ಬಿಡುಗಡೆಯಾಗಿರುತ್ತದೆ ಆದರೆ ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಕಾರ್ಯಕ್ರಮ ಸಂಘಟನೆಗಾಗಿ ಅನುದಾನವು ಸಾಲದೇ ಇರುವುದರಿಂದ ರೂ.25,000/–ಗಳ ಅನುದಾನವನ್ನು ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ:2205–00–104–0–26 ಕ್ರೀಡಾಕೂಟ ಮತ್ತು ರ್ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ ಅಡಿಯಲ್ಲಿ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಲಾಗಿರುತ್ತದೆ. ಆದರೆ ಕ್ರಿಯಾಯೋಜನೆಯ ಮಾರ್ಪಾಡು ಅಧಿಕೃತ ಜ್ಞಾಪನ ಪತ್ರ ದೊರೆಯದೇ ಸದರಿ ಅನುದಾನವನ್ನು 2018–19ನೇ ಸಾಲಿನಲ್ಲಿ ಭರಿಸಬೇಕಾಗಿದ್ದು, ಕ್ರಿಯಾಯೋಜನೆಯ ಅನುಮೋದನೆಗಾಗಿ ಮಂಡಿಸಲಾಗುವುದು.

5) ಸಾಹಸ ತರಬೇತಿ ಶಿಬಿರ

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕಿನ ಯುವಜನರಿಗೆ ಸಾಹಸ ತರಬೇತಿ ಶಿಬಿರಗಳನ್ನು ಈ ಕೆಳಕಂಡಂತೆ ಆಯೋಜಿಸಲಾಗಿರುತ್ತದೆ.

ಕ್ರ ಸಂ	ತಾಲ್ಲೂಕು	ಸ್ಥಳ	ದಿನಾಂಕ	ಭಾಗವಹಿಸಿದವರ ಸಂಖ್ಯೆ	ವೆಚ್ಚ
1	ಹೊಸಕೋಟೆ	ಜೇತನಾ ಸಹಕಾರದೊಂದಿಗೆ ರಾಮನಗರ ಜಿಲ್ಲೆಯ ಬಸವನಪುರ	14.07.2017 ರಿಂದ 16.07.2017	57	1,20,000/–
2	ದೇವನಹಳ್ಳಿ		28.07.2017 ರಿಂದ 30.07.2017	54	1,20,000/–
3	ದೊಡ್ಡಬಳ್ಳಾಪುರ		16.08.2017 ರಿಂದ 18.08.2017	64	1,20,000/–
4	ನೆಲಮಂಗಲ	ದಿ ಟೆಂಟ್ ಹೈಡ್ ಔಟ್ ಸಾಹಸ ಕೇಂದ್ರ, ಕ್ಯಾತಸಂದ್ರ,	22.03.2018 ರಿಂದ 204.03.2018	65	1,20,000/–

- ಅಂಗವಿಕಲ ಕಲ್ಯಾಣ ಇಲಾಖೆಯಿಂದ ದಿನಾಂಕ:03.12.2017 ರಂದು ನೆಲಮಂಗಲ ತಾಲ್ಲೂಕಿನಲ್ಲಿ ನಡೆಸಿದ ಜಿಲ್ಲಾ ಮಟ್ಟದ ವಿಶ್ವ ವಿಕಲಚೇತನರ ಕ್ರೀಡಾ ಕೂಟಕ್ಕೆ ಶೇಕಡ 3 ರಷ್ಟು ಅನುದಾನವಾಗಿ 60 ಕ್ರೀಡಾಪಟುಗಳಿಗೆ ಬಹುಮಾನ, ಪ್ರಮಾಣ ಪತ್ರ, ಮತ್ತು ಮೆಡಲ್ಸ್ ಗಳಿಗೆ ರೂ.90,000–00 ವೆಚ್ಚ ಭರಿಸಲಾಗಿದೆ.

- ಇಲಾಖೆಯು ನಡೆಸುತ್ತಿರುವ ಹಿರಿಯ ಮತ್ತು ಕಿರಿಯ ಕ್ರೀಡಾಶಾಲೆ/ನಿಲಯಗಳಿಗೆ ಆಯ್ಕೆ ಪ್ರಕ್ರಿಯೆಯನ್ನು 4 ತಾಲ್ಲೂಕುಗಳ ಎರಡು ಕೇಂದ್ರಗಳಲ್ಲಿ ನಡೆಸಿದ್ದು, ಅತ್ಯುತ್ತಮ ಕ್ರೀಡಾಪಟುಗಳು 7ನೇ ತರಗತಿಯಲ್ಲಿ ಹಾಗೂ 10ನೇ ತರಗತಿಯಲ್ಲಿ ಓದುತ್ತಿರುವವರನ್ನು ಆಯ್ಕೆ ಮಾಡಿ ಮುಂದಿನ ಸಾಲಿಗೆ ಸೇರ್ಪಡೆ ಮಾಡಿಕೊಳ್ಳಲಾಗುವುದು. ಜಿಲ್ಲೆಯಿಂದ ಬೆಂಗಳೂರು ವಿಭಾಗದಲ್ಲಿ ನಡೆಸಲಾಗುವ ಆಯ್ಕೆ ಪ್ರಕಕ್ರಿಯೆಯಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ/ದಿನಭತ್ಯೆ ನೀಡಲಾಗುವುದು. ಈ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮಕ್ಕೆ ರೂ.60,000/–ಗಳ ವೆಚ್ಚವನ್ನು ಭರಿಸಲಾಗಿದೆ.

ಮೇಲ್ಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಒದಗಿಸಲಾದ ಅನುದಾನ ರೂ.41,64,000/–ಗಳಲ್ಲಿ ಒಟ್ಟು ರೂ.41,63,000/–ಗಳು ಬಿಡುಗಡೆಯಾಗಿದ್ದು, ರೂ.34,50,526/–ಗಳು ವೆಚ್ಚವಾಗಿರುತ್ತದೆ.

ಸದರಿ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.4,75,000/–ಗಳನ್ನು ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಟ್ರಾಕ್‌ಸೂಟ್ ನೀಡುವ ವೆಚ್ಚವನ್ನು ಭರಿಸಲು ಕ್ರಿಯಾಯೋಜನೆಯಲ್ಲಿ ಅನುಮೋದನೆಯಾಗಿರುತ್ತದೆ. ಆದರಿ ಪ್ರಸ್ತುತ ಸಾಲಿನಲ್ಲಿ ಖೇಲೋ ಇಂಡಿಯಾ ಕ್ರೀಡಾಕೂಟ ಸಂಘಟಿಸುವ ಜವಾಬ್ದಾರಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಿದ್ದು, ಸದರಿ ಅನುದಾನವನ್ನು 2017–18ನೇ ಸಾಲಿನ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಟ್ರಾಕ್‌ಸೂಟ್ ಹಾಗೂ ಜಿಲ್ಲಾ ಮಟ್ಟದ ಯುವಜನೋತ್ಸವ/ಯುವಜನಮೇಳದಲ್ಲಿ ವಿಜೇತರಾದವರಿಗೆ ಅವಶ್ಯಕ ಜಾನಪದ ಉಡುಪುಗಳನ್ನು ಹಾಗೂ ಪರಿಕರಗಳನ್ನು ನೀಡಲು ವಿನಿಯೋಗಿಸಲು ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟನಾ ಸಮಿತಿಯಲ್ಲಿ ಅನುಮೋದನೆಯನ್ನು ಪಡೆಯಲಾಗಿತ್ತು. ಆದರೆ ತುರ್ತಾಗಿ ರಾಜ್ಯ ಮಟ್ಟದ ಸರ್ಕಾರಿ ಕ್ರೀಡಾಕೂಟವನ್ನು ಆಯೋಜಿಸಿದ್ದರಿಂದ ಟ್ರಾಕ್‌ಸೂಟ್ ಖರೀದಿಸಿ ಒದಗಿಸಲು ಟೆಂಡರ್ ಪ್ರಕ್ರಿಯೆ ಮಾಡಲು ಸಾಧ್ಯವಾಗಿರುವುದಿಲ್ಲ. ಈ ವಿಷಯವನ್ನು ಮಾನ್ಯ ಅಧ್ಯಕ್ಷರು ಜಿಲ್ಲಾ ಪಂಚಾಯತ್ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ತಾಲ್ಲೂಕುವಾರು ವಿಜೇತರಿಗೆ ಟ್ರಾಕ್‌ಸೂಟ್ ಒದಗಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದ್ದರು. ಅದರಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಆಡಳಿತಾತ್ಮಕ ಅನುಮೋದನೆಯನ್ನು ನೀರೀಕ್ಷಿಸಿ ದಿನಾಂಕ:09.02.2018 ರಿಂದ 12.02.2018ರವರೆಗೆ ಬಳ್ಳಾರಿಯಲ್ಲಿ ನಡೆಸಲಾದ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಭಾಗವಹಿಸಿದ ಸ್ಪರ್ಧಿಗಳಿಗೆ ಟ್ರಾಕ್‌ಸೂಟ್ ಒದಗಿಸಲಾಗಿರುತ್ತದೆ. ಆದರೆ ಟ್ರಾಕ್‌ಸೂಟ್ ಖರೀದಿಸಿದ ವೆಚ್ಚವನ್ನು ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಸಂದರ್ಭದಲ್ಲಿ ಒಟ್ಟಾರೆ ವೆಚ್ಚ ರೂ.2,55,937/–ಗಳಿಗೆ ನೀಡಿದ ಪ್ರಯುಕ್ತ ಒಂದೇ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.2,55,937/–ಗಳಿಗೆ ಅನುಮೋದನೆ ನೀಡಿರುವುದರಿಂದ ಟೆಂಡರ್ ಪ್ರಕ್ರಿಯೆ ಮಾಡಲು ಸಮಯಾವಕಾಶ ಲಭ್ಯವಿಲ್ಲದಿರುವುದರಿಂದ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಜಿಲ್ಲಾ ಮಟ್ಟದಲ್ಲಿ ವಿಜೇತರಾದ ತಾಲ್ಲೂಕಿನ ಸರ್ಕಾರಿ ನೌಕರರುಗಳಿಗೆ ನೀಡಲಾದ ಟ್ರಾಕ್‌ಸೂಟ್‌ಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಬಿಲ್ಲು ಪಾಸು ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು ಅಭಿಪ್ರಾಯಿಸಿದರು. ಆದರೆ ಕಾರ್ಯನಿರ್ವಾಹಕ ಅಧಿಕಾರಿಗೆ ಬಿಡುಗಡೆ ಮಾಡಲು ಹೊಸದಾಗಿ ಕಾರ್ಯಭಾರ ವಹಿಸಿಕೊಂಡ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡಲು ದಿನಾಂಕ:31.03.2018ರೊಳಗಾಗಿ ಸಾಧ್ಯವಾಗದೇ ಇರುವ ಪ್ರಯುಕ್ತ ಟ್ರಾಕ್‌ಸೂಟ್ ಒದಗಿಸಲು ಭರಿಸಲಾದ ಬಿಲ್ಲಿನ ಮೊತ್ತವನ್ನು ಸೆಳೆಯಲು ಸಾಧ್ಯವಾಗಿರುವುದಿಲ್ಲ. ಅದೇ ರೀತಿ 2017–18ನೇ ಸಾಲಿನ ಜಿಲ್ಲಾ ಮಟ್ಟದ ಯುವಜನಮೇಳ/ಯುವಜನೋತ್ಸವ ಕಾರ್ಯಕ್ರಮದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಜನಪದ ಉಡುಪು/ಸಾಂಸ್ಕೃತಿಕ ಪರಿಕರಗಳನ್ನು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳಿಗೆ ಜಾನಪದ ಉಡುಪು/ಪರಿಕರಗಳನ್ನು ಒದಗಿಸುವ ವೆಚ್ಚವನ್ನು ಭರಿಸಲು ರೂ.2,19,063/– ಗಳನ್ನು ಮೀಸಲಿರಿಸಿಕೊಂಡಿದ್ದು, ವಿವಿಧ ಜನಪದ ಪರಿಕರಗಳಿಗೆ ವಿವಿಧ ಸಂಸ್ಥೆಗಳಿಂದ ದರಪಟ್ಟಿ ಮುಖಾಂತರ ಖರೀದಿಸುವ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ಗೆ

ಸಲ್ಲಿಸಿದ್ದರೂ ಸಹ ಒಂದೇ ಲೆಕ್ಕ ಲೆಕ್ಕಶೀರ್ಷಿಕೆಯಡಿಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಮೀಸಲಿರಿಸಿಕೊಂಡಿರುವುದರಿಂದ ಟೆಂಡರ್ ಪ್ರಕ್ರಿಯೆ ಮಾಡದ ಪ್ರಯುಕ್ತ ವೆಚ್ಚದ ಭರಿಸಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಆದುದರಿಂದ ಒಟ್ಟಾರೆ ರೂ.4,75,000/–ಗಳನ್ನು ಸೆಳೆಯಲು ಸಾಧ್ಯವಾಗಿರುವುದಿಲ್ಲ. ಜನಪದ ಪರಿಕರಗಳನ್ನು ವಿಜೇತರಿಗೆ ನೀಡಲು 2018–19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಸೇರ್ಪಡೆ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ. ಆದುದರಿಂದ ಸದರಿ ಲೆಕ್ಕಶೀರ್ಷಿಕೆಗಳಡಿಯಲ್ಲಿ ರೂ.7,12,474/– ಉಳಿಕೆಯಾಗಿದ್ದು, ಸರ್ಕಾರಕ್ಕೆ ಅದ್ಯರ್ಪಿಸಲಾಗಿದೆ.

2) ಲೆಕ್ಕಶೀರ್ಷಿಕೆ:2205–00–104–0–28 ಕ್ರೀಡಾಂಗಣ ನಿರ್ಮಾಣ ಮತ್ತು ನಿರ್ವಹಣೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ ಹೊಸಕೋಟೆ ಹಾಗೂ ನೆಲಮಂಗಲಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳಿದ್ದು, ಹಿಂದಿನಿಂದ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿದ್ದ ಭದ್ರತಾ ಸಿಬ್ಬಂದಿಗಳಿಗೆ ಮಾರ್ಚ್–2017 ರಿಂದ ಫೆಬ್ರುವರಿ–2017ರ ಮಾಹೆಯವರೆಗೂ ಈ–ಟೆಂಡರ್ ಮೂಲಕ ಅನುಮೋದನೆಯಾಗಿರುವಂತೆ ರೂ. 16,204/– ರಂತೆ 12 ಭದ್ರತಾ ಸಿಬ್ಬಂದಿಗಳಿಗೆ ವೆಚ್ಚವನ್ನು ಭರಿಸಲಾಗಿದೆ. ಹಾಗೂ ನಾಲ್ಕು ಕ್ರೀಡಾಂಗಣಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಪ್ರಸ್ತುತ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿ ಒದಗಿಸಲಾದ ರೂ. 67,00,000/–ಗಳಲ್ಲಿ ರೂ.26,94,000/–ಗಳನ್ನು ಸಹಾಯಕ ನಿರ್ದೇಶಕರಿಗೆ, ರೂ.28,00,000/–ಗಳನ್ನು ನಿರ್ಮಿತಿ ಕೇಂದ್ರದವರಿಗೆ ಹಾಗೂ ರೂ.11,17,000/–ಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ರೂ.1,48,400/– ಉಳಿಕೆಯಾಗಿದ್ದು, ಸರ್ಕಾರಕ್ಕೆ ಅದ್ಯರ್ಪಿಸಲಾಗಿದೆ.

3) ಲೆಕ್ಕಶೀರ್ಷಿಕೆ:2205–00–104–0–30 ಸಂಕಷ್ಟದಲ್ಲಿರುವ ಕ್ರೀಡಾ ಪಟುಗಳಿಗೆ ನೆರವು:–

ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಹಾಗೂ ಅಂತರರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಶೇಷ ಸಾಧನೆಗೈದ ಪ್ರಸ್ತುತ ಸಂಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿಪಟುಗಳಿಗೆ ಹಾಗೂ ಕ್ರೀಡಾ ಪಟುಗಳಿಗೆ ಇಲಾಖೆಯಿಂದ ಈ ಕೆಳಕಂಡಂತೆ ಮಾಸಾಶನವನ್ನು ನೀಡಲಾಗುತ್ತಿದೆ.

ಕ್ರ.ಸಂ	ವಿವರ	ರಾಜ್ಯ	ರಾಷ್ಟ್ರ	ಅಂತರಾಷ್ಟ್ರ
1	ಕುಸ್ತಿ	2,500/–	3,000/–	4,000/–
2	ಇತರೆ ಕ್ರೀಡೆ	1,000/–	1,500/–	2,000/–

ಮಾಜಿ ಕುಸ್ತಿ ಫೈಲ್ವಾನರು/ಕ್ರೀಡಾಪಟುಗಳು ಮಾಸಾಶನನಕ್ಕಾಗಿ ಅರ್ಜಿ ಸಲ್ಲಿಸಲು ಈ ಕೆಳಕಂಡ ದಾಖಲಾತಿಯನ್ನು ಸಲ್ಲಿಸಬೇಕಾಗಿರುತ್ತದೆ.

- ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ನೀಡಬೇಕು.
- ಅರ್ಜಿದಾರರು ರಾಜ್ಯ/ರಾಷ್ಟ್ರ/ಅಂತರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿರಬೇಕು.
- ಅರ್ಜಿದಾರರು 50 ವರ್ಷ ಮೇಲ್ಪಟ್ಟವರಾಗಿರಬೇಕು ಹಾಗೂ ಆರ್ಥಿಕವಾಗಿ ಹಿಂದುಳಿದವರಾಗಿರಬೇಕು.
- ಅರ್ಜಿದಾರರ ವಾರ್ಷಿಕ ಆದಾಯ 40,000/– ಮಿತಿಯೊಳಗಿರಬೇಕು.
- ಅರ್ಜಿದಾರರು ಕರ್ನಾಟಕದಲ್ಲಿ 20 ವರ್ಷಗಳಿಗಳಿಗಿಂತರ ಮೇಲ್ಪಟ್ಟು ವಾಸಿಸುತ್ತಿರಬೇಕು.
- ಅರ್ಜಿದಾರರು ಆಧಾರ್ ಕಾರ್ಡ್ ಪ್ರತಿ ಹಾಗೂ ಬ್ಯಾಂಕ್ ಜೆರಾಕ್ಸ್ ಪ್ರತಿ ನೀಡಬೇಕು.
- ಅರ್ಜಿದಾರರು ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಹಾಗೂ ವಾಸಸ್ಥಳ ದೃಢೀಕರಣ ಪತ್ರವನ್ನು ತಹಶೀಲ್ದಾರರಿಂದ ದೃಢೀಕರಿಸಬೇಕು.

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.4,59,000/–ಗಳು ಬಿಡುಗಡೆಯಾಗಿದ್ದು, ಹಿಂದಿನ ಸಾಲಿನಿಂದ ಮಾಸಾಶನ ಪಡೆಯುತ್ತಿರುವ ದೊಡ್ಡಬಳ್ಳಾಪುರ ತಾಲ್ಲೂಕು 7 ಕುಸ್ತಿ ಪೈಲ್ವಾನರುಗಳಿಗೆ ಮಾಹೆಯಾನ ರೂ.2,500/–ಗಳಂತೆ 12 ಮಾಹೆಗಳಿಗೆ ರೂ.2,10,000/–ಗಳು ವೆಚ್ಚವಾಗಿದ್ದು, ಮಾಸಾಶನಕ್ಕಾಗಿ ಯಾವುದೇ ಪ್ರಸ್ತಾವನೆಗಳು ಬಾರದ ಪ್ರಯುಕ್ತ ರೂ.2,49,000/–ಗಳು ಉಳಿಕೆಯಾಗಿದ್ದು, ಸರ್ಕಾರಕ್ಕೆ ಆಧ್ಯರ್ಪಿಸಿದೆ.

4) ಲೆಕ್ಕಶೀರ್ಷಿಕೆ:2205–00–104–0–31 ಗ್ರಾಮೀಣ ಕ್ರೀಡಾ ಕೇಂದ್ರಗಳು

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.10.00 ಲಕ್ಷಗಳು ಬಿಡುಗಡೆಯಾಗಿದ್ದು, 2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳಲ್ಲಿರುವ ಆಟದ ಮೈದಾನ ಇರುವ ಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿಗಳನ್ನು ಸರಬರಾಜು ಮಾಡಬಹುದಾಗಿರುತ್ತದೆ. ಅಕ್ಟೋಬರ್–2017ರಲ್ಲಿ ಟೆಂಡರ್ ಕರೆಯಬೇಕಾಗಿದ್ದು, ಸಹಾಯಕ ನಿರ್ದೇಶಕರು ವರ್ಗಾವಣೆಯಾದ ಪ್ರಯುಕ್ತ ಟೆಂಡರ್ ಪ್ರಕ್ರಿಯೆ ಸಾಧ್ಯವಾಗಿರುವುದಿಲ್ಲ. ಪುನ: ಡಿಸೆಂಬರ್–11 ರಂದು ಮರು ಪೋಸ್ಟಿಂಗ್ ಆಗಿ ವರದಿ ಮಾಡಿಕೊಂಡಿದ್ದು ಹೊಸ ಟೆಂಡರ್ ಕೀ ಪಡೆದು ದಿನಾಂಕ:23.01.2018ರಂದು ಇ–ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು ದಿನಾಂಕ:28.02.218 ರಂದು ಸರಬರಾಜು ಆದೇಶ ನೀಡುವ ಸಂದರ್ಭದಲ್ಲಿ ಹಣಕಾಸು ಸಮಿತಿಯು ಹಲವು ತಾಂತ್ರಿಕ ತೊಂದರೆಯಿಂದ ಸರಬರತಾಜು ಆದೇಶ ನೀಡಲು ಸಾಧ್ಯವಾಗದೆ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದಿದ್ದು ಟೆಂಡರ್ ಖರೀದಿ ಆದೇಶ ನೀಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ರೂ.10.00 ಲಕ್ಷಗಳನ್ನು ಸರ್ಕಾರಕ್ಕೆ ಅದ್ಯರ್ಪಿಸಿದೆ.

5) ಲೆಕ್ಕಶೀರ್ಷಿಕೆ:2205–00–104–0–32 ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ

ಇಲಾಖೆಯಿಂದ ಆಯೋಜಿಸಲಾಗುವ ಯುವಜನಮೇಳ ಹಾಗೂ ಯುವಜನೋತ್ಸವ ಕಾರ್ಯಕ್ರಮದಲ್ಲಿ ಜನಪದ ಪ್ರಾಕಾರಗಳಾದ ಜನಪದ ಗೀತೆ,ಜನಪದ ನೃತ್ಯ, ಕಂಸಾಳೆ ನೃತ್ಯ,ಕೋಲಾಟ, ಇತ್ಯಾದಿ ಸ್ಪರ್ಧೆಗಳಿದ್ದು, ಈ ಸ್ಪರ್ಧೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಲು ಪ್ರೋತ್ಸಾಹಿಸುವ ದೃಷ್ಟಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕುಗಳ ಯುವಜನರಿಗೆ 5 ರಿಂದ 7 ಜನಪದ ಪ್ರಾಕಾರಗಳಲ್ಲಿ ತರಬೇತಿ ಶಿಬಿರವನ್ನು ಈ ಕೆಳಕಂಡಂತೆ ಆಯೋಜಿಸಲಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ದಿನಾಂಕ ಮತ್ತು ಸ್ಥಳ	ಸಹಕಾರ	ವೆಚ್ಚ
1	ನೆಲಮಂಗಲ	05.08.2017 ರಿಂದ 11.08.2017ರವರೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜು, ತ್ಯಾಮಗೊಂಡ್ಲು,	ಜ್ಞಾನಭಾರತಿ ಚಾರಿಟೇಬಲ್ ಟ್ರಸ್ಟ್, ಜ್ಯೋತಿನಗರ,	53,500/–
2	ದೊಡ್ಡಬಳ್ಳಾಪುರ	12.09.2017 ರಿಂದ 17.09.2017ರವರೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಡ್ಡಬೆಳವಂಗಲ	ಉದಯ ಜಾನಪದ ಕಲಾ ಸಂಘ (ರಿ) ದೊಡ್ಡಕುಕ್ಕನಹಳ್ಳಿ,	53,500/–
3	ದೇವನಹಳ್ಳಿ	11.10.2017 ರಿಂದ 19.10.2017ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣ,	ಸುಗ್ಗಿ ಸಾಂಸ್ಕೃತಿಕ ಟ್ರಸ್ಟ್,	53,500/–
4	ಹೊಸಕೋಟೆ	23.02.2018 ರಿಂದ 28.02.2018 ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣ,	ಸ್ಫೂರ್ತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಇಟ್ಟಸಂದ್ರ,	53,500/–

ಸದರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಪ್ರತೀ ತಾಲ್ಲೂಕಿಗೆ ರೂ.53,500/–ಗಳಂತೆ ರೂ.2,14,000/–ಗಳ ವೆಚ್ಚವನ್ನು ಭರಿಸಲಾಗಿದೆ.

6) ಲೆಕ್ಕಶೀರ್ಷಿಕೆ:2205–00–104–0–33 ಕ್ರೀಡಾ ಸಾಮಗ್ರಿ ಕೊಳ್ಳಲು ಮತ್ತು ಕ್ರೀಡಾ ಬಯಲು ಅಭಿವೃದ್ಧಿಗೆ ವಿದ್ಯಾ ಇತರೇ ಸಂಸ್ಥೆಗಳಿಗೆ

ಈ ಲೆಕ್ಕಶಿರ್ಷಿಕೆಯಡಿಯಲ್ಲಿ ಜಿ.ಪಂ.ವತಿಯಿಂದ ದೇವನಹಳ್ಳಿ ತಾಲ್ಲೂಕು ಕನ್ನಮಂಗಲದಲ್ಲಿ ವಸ್ತು ಪ್ರದರ್ಶನ ಮಳಿಗೆಯನ್ನು ಹಾಕಿರುವುದಕ್ಕೆ ರೂ.50,000/–ಗಳನ್ನು ಹಾಗೂ ದಿನಾಂಕ:31.01.2018 ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ಶ್ರೀ ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ಕುಸ್ತಿ ಪಂಧ್ಯಾವಳಿಯನ್ನು ಆಯೋಜಿಸಲು ರೂ.1,64,000/– ಗಳ ವೆಚ್ಚವನ್ನು ಭರಿಸಲಾಗಿದೆ.

7) ಲೆಕ್ಕಶೀರ್ಷಿಕೆ:2205–00–104–0–34 ಬಯಲು ರಂಗಮಂದಿರ ನಿರ್ಮಾಣ

ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಈ ಕೆಳಕಂಡ ಬಯಲು ರಂಗಮಂದಿರ ನಿರ್ಮಾಣ ಕಾಮಗಾರಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರವರಿಗೆ ಅನುದಾನ ಬಿಡುಗಡೆಯಾಗಿರುತ್ತದೆ.

ಕ್ರ.ಸಂ	ತಾಲ್ಲೂಕು	ಸ್ಥಳ	ವೆಚ್ಚ
1	ನೆಲಮಂಗಲ	ಸರ್ಕಾರಿ ಪ್ರೌಢಶಾಲೆ, ದೊಡ್ಡಬೆಲೆ	5,00,000/–
2	ದೊಡ್ಡಬಳ್ಳಾಪುರ	ಸರ್ಕಾರಿ ಪ್ರೌಢಶಾಲೆ, ತೂಬಗೆರೆ	5,00,000/–
3	ದೇವನಹಳ್ಳಿ	ಸರ್ಕಾರಿ ಪ್ರೌಢಶಾಲೆ, ಜಾಲಿಗೆ	5,00,000/–

8) ಲೆಕ್ಕಶೀರ್ಷಿಕೆ:2205–00–104–0–35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳಲ್ಲಿರುವ ಯುವಕ/ಶೈಕ್ಷಣಿಕ ಸಂಸ್ಥೆಗಳ ಸಹಕಾರದೊಂದಿಗೆ ಕ್ರೀಡಾ ಸಾಮಾಗ್ರಿಗಳನ್ನು ತಾಲ್ಲೂಕು ಕ್ರೀಡಾಂಗಣಗಳಿಗೆ ಸರಬರಾಜು ಮಾಡಲು ಜನವರಿ–18 ಮಾಹೆಯಲ್ಲಿ ಇ–ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು ಹಣಕಾಸು ಬಿಡ್ ತೆರೆದು ಸಮಿತಿ ಸರಬರಾಜು ಆದೇಶ ನೀಡಲು ಮಾರ್ಚ್–2018ರ ಮಾಹೆಯಲ್ಲಿ ಸರಬರಾಜು ಆದೇಶ ನೀಡುವ ಸಂದರ್ಭದಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದಿದ್ದು ಟೆಂಡರ್ ಆದೇಶ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ರೂ.1.07 ಲಕ್ಷಗಳನ್ನು ಸರ್ಕಾರಕ್ಕೆ ಅದ್ಯರ್ಪಿಸಿದೆ.

9) ಲೆಕ್ಕಶೀರ್ಷಿಕೆ:2205–00–104–0–36 ಕ್ರೀಡಾ ಸಾಮಗ್ರಿ ಖರೀದಿ

2017–18ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳಲ್ಲಿರುವ ಯುವಕ/ಶೈಕ್ಷಣಿಕ ಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಜನವರಿ–18 ಮಾಹೆಯಲ್ಲಿ ಇ–ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು ಹಣಕಾಸು ಬಿಡ್ ತೆರೆದು ಸರಬರಾಜು ಆದೇಶ ನೀಡಬೇಕಾಗಿದ್ದು, ಸಮಿತಿ ಹಣಕಾಸು ಬಿಡ್ ತೆರೆದು ಸರಬರಾಜು ಆದೇಶ ನೀಡಬೇಕಾಗಿದ್ದು, ಸಮಿತಿ ಹಣಕಾಸು ಬಿಡ್‌ನ್ನು ಒಪ್ಪಿಕೊಳ್ಳಲು ಹಲವು ಭಿನ್ನಾಭಿಪ್ರಾಯವಿದ್ದು, ಸರಿಪಡಿಸಲು ಮಾರ್ಚ್–2018ರ ಮಾಹೆಯಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದಿದ್ದು ಟೆಂಡರ್ ಆದೇಶ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ರೂ.1.07 ಲಕ್ಷಗಳನ್ನು ಸರ್ಕಾರಕ್ಕೆ ಅದ್ಯರ್ಪಿಸಿದೆ. ಆದುದರಿಂದ ರೂ.1.07 ಲಕ್ಷಗಳನ್ನು ಸರ್ಕಾರಕ್ಕೆ ಅದ್ಯರ್ಪಿಸಿದೆ.

ರಾಜ್ಯ ವಲಯದ ಯೋಜನೆಗಳು:

ಗ್ರಾಮೀಣ ಕ್ರೀಡೋತ್ಸವ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಗ್ರಾಮೀಣ ಕ್ರೀಡೋತ್ಸವವನ್ನು ಸಂಘಟಿಸಲಾಯಿತು. ಪ್ರತೀ ಗ್ರಾಮೀಣ ಕ್ರೀಡೋತ್ಸವ ಕಾರ್ಯಕ್ರಮಕ್ಕೆ ರೂ.50,000/– ಗಳಂತೆ ವೆಚ್ಚವನ್ನು ಭರಿಸಲಾಗಿದ್ದು, ಈ ಕೆಳಕಂಡ ಸ್ಥಳ ಹಾಗೂ ದಿನಾಂಕಗಳಂದು ಆಯೋಜಿಸಲಾಗಿರುತ್ತದೆ.

ಕ್ರ.ಸಂ	ತಾಲ್ಲೂಕು	ಸ್ಥಳ	ದಿನಾಂಕ	ಸಹಕಾರ	ವೆಚ್ಚ
1	ದೇವನಹಳ್ಳಿ	ವಿಜಯಪುರ ಹೋಬಳಿ ನಾರಾಯಣಪುರ ಸರ್ಕಾರಿ ಪ್ರೌಢಶಾಲೆ ಆವರಣ	22.09.2017	ಅರುಂಧತಿ ಸೇವಾ ಸಂಸ್ಥೆ (ರಿ)	50,000/–
2		ಬಿದಲೂರು ಸರ್ಕಾರಿ ಪ್ರೌಢಶಾಲೆ ಆವರಣ	24.09.2017	ದೇವನಹಳ್ಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ)	50,000/–
3		ಚನ್ನರಾಯಪಟ್ಟಣ ಹೋಬಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಆವರಣ	06.03.2018	ಸುಗ್ಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ (ರಿ)	50,000/–
4	ದೊಡ್ಡಬಳ್ಳಾಪುರ	ದೊಡ್ಡಬೆಳವಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ	06.10.2017	ಉದಯ ಜಾನಪದ ಕಲಾ ಸಂಘ (ರಿ)	50,000/–
5		ಕನಸವಾಡಿ	27.01.2018 ಹಾಗೂ 28.01.2018	ವ್ಯಕ್ತಿ ವಿಕಸನ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ)	50,000/–
6	ನೆಲಮಂಗಲ	ಆತ್ಮರಾಮ ಪ್ರೌಢಶಾಲೆ ಆವರಣ	07.01.2018	ತನು ಜನಪದ ನೃತ್ಯ ಮಹಿಳಾ ಸಂಘ (ರಿ)	50,000/–
7		ಶಿವಗಂಗಾ ಪ್ರೌಢಶಾಲೆ ಆವರಣ	08.01.2018	ಅಂಬೇಡ್ಕರ್ ಯುವಜನ ಮಹಿಳಾ ಸಂಘ (ರಿ)	50,000/–
8		ಅರಿಶಿನಕುಂಟೆ	30.01.2018	ಸಂಚಲನ ಮಹಿಳಾ ಸಮಾಜ (ರಿ)	50,000/–
9	ಹೊಸಕೋಟೆ	ಸೂಲಿಬೆಲೆ ಹೋಬಳಿ ಉರ್ದು ಪ್ರೌಢಶಾಲೆ ಆವರಣ	07.01.2018	ವಿವೇಕಾನಂದ ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಘ (ರಿ	50,000/–

ಜಿಲ್ಲಾ ಮಟ್ಟದ ಯುವ ಸಮ್ಮೇಳನ/ಕಾರ್ಯಾಗಾರ/ಯುವ ಸಪ್ತಾಹ ಕಾರ್ಯಕ್ರಮ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕಿನ ವಿವಿಧ ಸ್ಥಳಗಳಲ್ಲಿ ಯುವ ಸಬಲೀಕರಣ ಇಲಾಖೆ ಹಾಗೂ ಇತರೆ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಸ್ವಾಮಿ ವಿವಯುವ ಸಮ್ಮೇಳನ/ ಕಾರ್ಯಾಗಾರ/ ಯುವ ಸಪ್ತಾಹ ಕಾರ್ಯಕ್ರಮವನ್ನು ಈ ಕೆಳಕಂಡ ಸ್ಥಳ ಹಾಗೂ ದಿನಾಂಕಗಳಂದು ಆಯೋಜಿಸಲಾಗಿದ್ದು ಒಟ್ಟು ರೂ.1.00 ಲಕ್ಷಗಳ ವೆಚ್ಚವನ್ನು ಭರಿಸಲಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ಸ್ಥಳ	ದಿನಾಂಕ	ಕಾರ್ಯಕ್ರಮ
1	ದೊಡ್ಡಬಳ್ಳಾಪುರ	ಸರ್ಕಾರಿ ಪದವಿಪೂರ್ವ ಕಾಲೇಜು	12.01.2018	ಯುವ ದಿನ ಆಚರಣೆ
2	ದೊಡ್ಡಬಳ್ಳಾಪುರ	ಸರ್ಕಾರಿ ಶಾಲೆ	24.01.2018	ವ್ಯಕ್ತಿ ವಿಕಸನ ಎಜುಕೇಷನ್ ಮತ್ತು ಚಾರಿಟೇಬಲ್ ಟ್ರಸ್ಟ್, ಇವರ ಸಹಯೋಗದೊಂದಿಗೆ ಪ್ರಬಂಧ ಸ್ಪರ್ಧೆ/ಚರ್ಚಾ ಸ್ಪರ್ಧೆ
3	ದೇವನಹಳ್ಳಿ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	24.01.2018	ಸ್ವಾಮೀಜಿಯವರಿಂದ ಭಾಷಣ
4	ಹೊಸಕೋಟೆ	ಸೂಲಿಬೆಲೆ ಹೋಬಳಿ	26.01.2018	ಶ್ರೀ ಮಾಧವ ಎಜುಕೇಷನ್ ಟ್ರಸ್ಟ್ (ರಿ) ಇವರ ಸಹಯೋಗದೊಂದಿಗೆ ಯೂಥ್ ಸೆಮಿನಾರ್
5	ನೆಲಮಂಗಲ	ತ್ಯಾಮಗೊಂಡ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜು	01.02.2018	ಪೋಸ್ಟರ್ ಮೇಕಿಂಗ್, ಪೈಂಟಿಂಗ್, ಡ್ರಾಯಿಂಗ್ ಸ್ಪರ್ಧೆ

ನಮ್ಮೂರ ಶಾಲೆಗೆ ನಮ್ಮ ಯುವಜನರು

ನಮ್ಮೂರ ಶಾಲೆಗೆ ನಮ್ಮ ಯುವಜನರು ಯೋಜನೆಯಡಿ ಹೆಚ್ಚು ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದ ಶಾಲೆಗಳಿಗೆ ಪ್ರೋತ್ಸಾಹಧನವಾಗಿ ರೂ.90,000/–ಗಳನ್ನು ಹಾಗೂ ಪ್ರೋತ್ಸಾಹಿಸಿದ ದೈಹಿಕ ಶಿಕ್ಷಣ ಶಿಕ್ಷಕರಿಗೆ ರೂ.10,000/–ಗಳ ಗೌರವಧನ ನೀಡುವ ಯೋಜನೆಯಾಗಿರುತ್ತದೆ. ಅದರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಈ ಕೆಳಕಂಡ ಶಾಲೆಗಳಿಗೆ ತಲಾ ರೂ.90,000/–ಗಳ ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರೋತ್ಸಾಹಧನವಾಗಿ ರೂ.10,000/–ಗಳಂತೆ ಒಟ್ಟು ರೂ.1,00,000/–ಗಳಂತೆ 4.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ಶಾಲೆಗಳ ಹೆಸರು
1	ದೇವನಹಳ್ಳಿ	ಸರ್ಕಾರಿ ಪ್ರೌಢಶಾಲೆ, ಚನ್ನಹಳ್ಳಿ
2	ದೊಡ್ಡಬಳ್ಳಾಪುರ	ಸರ್ಕಾರಿ ಪ್ರೌಢಶಾಲೆ, ಹುಲಿಕುಂಟೆ
3	ಹೊಸಕೋಟೆ	ಸರ್ಕಾರಿ ಬಾಲಕಿಯರ ಪ್ರೌಢಶಾಲೆ,
4	ನೆಲಮಂಗಲ	ಸರ್ಕಾರಿ ಪ್ರೌಢಶಾಲೆ, ದೊಡ್ಡಬೆಲೆ

ಸುತ್ತುನಿಧಿ

ಯುವ ಶಕ್ತಿ ಸಂಘಗಳ ಯೋಜನೆಯನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯುವ ಸದಸ್ಯರು ಒಟ್ಟುಗೂಡಿ ಸಂಘವನ್ನು ರಚಿಸಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ ಹಾಗೂ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಯುವಜನರ ಅಭಿವೃದ್ಧಿಗಾಗಿ ಯುವಜನ ಸಂಘಗಳಿಗೆ ತಲಾ ರೂ.5.00 ಲಕ್ಷಗಳನ್ನು ಸುತ್ತುನಿಧಿಯಾಗಿ ಬಿಡುಗಡೆ ಮಾಡಲಾಗುವುದು. ಸಂಘದ ಸದಸ್ಯರು ತಮ್ಮ ಉಳಿತಾಯ ಹಾಗೂ ಇತರೆ ಮೂಲ ಮತ್ತು ಸುತ್ತುನಿಧಿಯನ್ನು ಬಳಸಿಕೊಂಡು ವಿವಿಧ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಯೋಜನೆ ಮುಗಿದ ನಂತರ ಸುತ್ತುನಿಧಿಯಿಂದ ಪಡೆದುಕೊಂಡ ಹಣವನ್ನು ಬ್ಯಾಂಕಿಗೆ ಮರುಪಾವತಿ ಮಾಡತಕ್ಕದ್ದು.

ಅದರಂತೆ ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲ ತಾಲ್ಲೂಕಿನ ಈ ಕೆಳಕಂಡ ಯುವಜನ ಸಂಘಗಳಿಗೆ ರೂ.5.00 ಲಕ್ಷಗಳಂತೆ ಒಟ್ಟು ಮೂರು ಸಂಘಗಳಿಗೆ 15.00 ಲಕ್ಷಗಳ ಸುತ್ತುನಿಧಿ ಅನುದಾನವನ್ನು ಮರುಪಾವತಿ ಷರತ್ತಿನ ಮೇಲೆ ಬಿಡುಗಡೆ ಮಾಡಿ ಸಂಘದಲ್ಲಿರುವ ಸದಸ್ಯರುಗಳು ಪ್ರಗತಿಯನ್ನು ಸಾಧಿಸಿ ಸುಸ್ಥಿತಿಯಲ್ಲಿರುವುದನ್ನು ಪರಿಶೀಲಿಸಿ ಸಾಲವನ್ನು ಮಂಜೂರು ಮಾಡಲಾಗಿದೆ.

ಕ್ರ. ಸಂ	ತಾಲ್ಲೂಕು	ಸಂಸ್ಥೆಗಳ ಹೆಸರು
1	ದೊಡ್ಡಬಳ್ಳಾಪುರ	ಉದಯ ಜಾನಪದ ಕಲಾ ಸಂಘ (ರಿ)
2	ಹೊಸಕೋಟೆ	ಸ್ಫೂರ್ತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ(ರಿ) ಇಟ್ಟಸಂದ್ರ
3	ನೆಲಮಂಗಲ	ಅಂಬೇಡ್ಕರ್ ಯುವಜನ ಮಹಿಳಾ ಸಂಘ (ರಿ)

ಮರುಪಾವತಿ ಷರತ್ತಿನ ಮೇಲೆ ಸಾಲವನ್ನು ಪಡೆದ ಸಂಘ ಸಂಸ್ಥೆಯು ಗಳಿಸಿದ ಆದಾಯದಿಂದ 3ನೇ ವರ್ಷದಲ್ಲಿ ರೂ.1.50 ಲಕ್ಷ, 4ನೇ ವರ್ಷದಲ್ಲಿ ರೂ.1.50 ಲಕ್ಷ ಹಾಗೂ 5ನೇ ವರ್ಷದಲ್ಲಿ ರೂ.2.00 ಲಕ್ಷಗಳನ್ನು ಇಲಾಖೆಗೆ ಮರುಪಾವತಿಸಬೇಕಾಗಿರುತ್ತದೆ.

ಕೌಶಲ್ಯ ತರಬೇತಿ ಕಾರ್ಯಕ್ರಮ

ಉದ್ಯಮ ಶೀಲತೆ ಮತ್ತು ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮವಮ್ನು ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ದಿನಾಂಕ:09.02.2018 ರಿಂದ 27.02.2018ರವರೆಗೆ ಆಯೋಜಿಸಿದ್ದು, ಸುಮಾರು 50 ಯುವಜನರು ಭಾಗವಹಿಸಿದ್ದು, ರೂ.1.25 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

ದಿನಾಂಕ:14.02.2018 ರಿಂದ 24.02.2018ರವರೆಗೆ ದೇವನಹಳ್ಳಿ ತಾಲ್ಲೂಕು ಸರ್ಕಾರಿ ಪ್ರಥಮದರ್ಜೆ ಕಾಲೇಜು ಆವರಣದಲ್ಲಿ ಆಯೋಜಿಸಿದ್ದು, ಸುಮಾರು 50 ಯುವಜನರು ಭಾಗವಹಿಸಿದ್ದು, ರೂ.1.25 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

ಯುವ ಚೈತನ್ಯ ಯೋಜನೆ

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರು 2017–18ನೇ ಸಾಲಿನ ಆಯವ್ಯಯ ಭಾಷಣದಕಂಡಿಕೆ 277ರಲ್ಲಿ ಯುವಚೈತನ್ಯ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಘೋಷಿಸಿರುತ್ತಾರೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯುವಚೈತನ್ಯ ಯೋಜನೆಯಡಿ ಯುವಜನರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢರಾಗಲು, ಕ್ರೀಡಾಚಟುವಟಿಕೆ ಆಯೋಜಿಸಲು ಮತ್ತು ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಯುವ/ಕ್ರೀಡಾ ಸಂಘಗಳಿಗೆ ಒದಗಿಸಲು ಉತ್ತಮ ಗುಣಮಟ್ಟದ ಹಾಗೂ ಉಪಯುಕ್ತ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿರುತ್ತದೆ.

ಆದ್ದರಿಂದ ಪ್ರತೀ ಗ್ರಾಮದಲ್ಲಿ ಬರುವ ಯುವ/ಕ್ರೀಡಾ ಸಂಘಗಳು ಇಲಾಖೆಯಿಂದ ಮಾನ್ಯತೆ ಪಡೆಯಲು ಸರಳ ರೀತಿಯಲ್ಲಿ ಕನಿಷ್ಠ 25 ಯುವಕ/ಯುವತಿಯರ ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ, ಸಂಘದ ಉದ್ದೇಶವನ್ನು ತಿಳಿಸುವ ಸಭಾ ನಡವಳಿ ಪ್ರತಿ, ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ, ಸರ್ವ ಸದಸ್ಯರ ಪಟ್ಟಿ ಹಾಗೂ ರೂ.100/–ಗಳ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಇಲಾಖೆಯಿಂದ ಮಾನ್ಯತೆ ಪಡೆದಂತಹ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕಿನ 153 ಯುವ/ಕ್ರೀಡಾ ಸಂಘಗಳಿಗೆ ಮಾನ್ಯ ಉಸ್ತುವಾರಿ ಸಚಿವರ ಹಾಗೂ ಮಾನ್ಯ ಆಯಾ ತಾಲ್ಲೂಕಿನ ಮಾನ್ಯ ವಿಧಾನ ಸಭಾ ಸದಸ್ಯರ

ಶಿಫಾರಸ್ಸಿನಂತೆ ರೂ.40,000/–ಗಳ ಕ್ರೀಡಾ ಸಾಮಗ್ರಿಗಳ ಕಿಟ್‌ಗಳನ್ನು ಪಡೆಯಲು ಸಂಘಗಳ ಪಟ್ಟಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸಲಾಗಿತ್ತು.

ಅದರಂತೆ ದಿನಾಂಕ:10.03.2018 ರಂದು ಮಾನ್ಯ ದೊಡ್ಡಬಳ್ಳಾಪುರ ವಿಧಾನಸಭಾ ಸದಸ್ಯರ ಉಪಸ್ಥಿತಿಯಲ್ಲಿ ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕಿನ ಅರ್ಹ ಯುವಜನ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಲಾಯಿತು.

ದಿನಾಂಕ:11.03.2018 ರಂದು ಮಾನ್ಯ ದೇವನಹಳ್ಳಿ ವಿಧಾನಸಭಾ ಸದಸ್ಯರ ಉಪಸ್ಥಿತಿಯಲ್ಲಿ ದೇವನಹಳ್ಳಿ ಹಾಗೂ ಹೊಸಕೋಟೆ ತಾಲ್ಲೂಕಿನ ಅರ್ಹ ಯುವಜನ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಲಾಯಿತು.

2017–18ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ವಿವಿಧ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆಯಾದ, ಖರ್ಚಾದ ಹಾಗೂ ಉಳಿಕೆ ಅನುದಾನದ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲಾ ಪಂಚಾಯತ್ ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ನಿಗಧಿಗೊಳಿಸಿದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿಕೆ
	ಜಿಲ್ಲಾ ಪಂಚಾಯತ್ ಕಾರ್ಯಕ್ರಮ				
1	2205–00–104–0–26 ಕ್ರೀಡಾಕೂಟ ಮತ್ತು ರ್ಯಾಲಿಗಳ ಸಂಘಟನೆ ಮತ್ತು ಭಾಗವಹಿಸಿದವರಿಗೆ ಪ್ರಯಾಣ ಭತ್ಯೆ/ದಿನಭತ್ಯೆ	41.640	41.630	34.505	7.125
2	2205–00–104–0–27 (001) ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು	19.000	20.094	19.751	0.343
3	2205–00–104–0–27 (050) ಕಚೇರಿ ವೆಚ್ಚ	3.210	3.210	2.734	0.476
4	2205–00–104–0–28 ಕ್ರೀಡಾಂಗಣ ಮತ್ತು ಇತರೆ ನಿರ್ಮಾಣ ಹಾಗೂ ನಿರ್ವಹಣೆ	67.000	67.000	65.516	1.484
5	2205–00–104–0–30 ಆರ್ಥಿಕ ಸಂಕಷ್ಟದಲ್ಲಿರುವ ಕ್ರೀಡಾಪಟುಗಳಿಗೆ ಮಾಸಾಶನ	4.590	4.590	2.100	2.490
6	2205–00–104–0–31 ಗ್ರಾಮೀಣ ಕ್ರೀಡಾಕೇಂದ್ರಗಳು	10.000	10.000	0.000	10.000
7	2205–00–104–0–32 ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ	2.140	2.140	2.140	0.000
8	2205–00–104–0–33 ಕ್ರೀಡಾ ಸಾಮಗ್ರಿ ಕೊಳ್ಳಲು ಮತ್ತು ಕ್ರೀಡಾ ಬಯಲು ಅಭಿವೃದ್ಧಿಗೆ ವಿದ್ಯಾ ಮತ್ತು ಇತರೇ	2.140	2.140	2.140	0.000

	ಸಂಸ್ಥೆಗಳಿಗೆ ಸಹಾಯ				
9	2205–00–104–0–34 ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ	15.000	15.000	14.950	0.050
10	2205–00–104–0–35 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ	1.070	1.070	0.000	1.070
11	2205–00–104–0–36 ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಮಂಡಳಿಗಳಿಗೆ ಸಹಾಯ	1.070	1.070	0.000	1.070
	ಒಟ್ಟು	**166.860**	**167.944**	**143.836**	**24.108**

18. ಮೀನುಗಾರಿಕೆ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳು ಸೇರಿದಂತೆ ಅಂದಾಜು ಒಟ್ಟು 7000 ಹೆಕ್ಟೇರ್ ಜಲಾವೃತ್ತ ಪ್ರದೇಶವಿದ್ದು ಮೀನುಗಾರಿಕೆ ಇಲಾಖೆ ಹಾಗು ಗ್ರಾಮಪಂಚಾಯಿತಿಗೆ ಸೇರಿದ ಒಟ್ಟು 586 ಕೆರೆಗಳು ಮೀನು ಸಾಕಾಣಿಗೆ ಲಭ್ಯವಿರುತ್ತವೆ. ಇವುಗಳಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶ ಹೊಂದಿರುವ ಕೆರೆಗಳು ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, 101 ಕೆರೆಗಳು ಇರುತ್ತವೆ. ಹಾಗು 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶ ಹೊಂದಿರುವ 485 ಗ್ರಾಮಪಂಚಾಯಿತಿಯ ಕೆರೆಗಳನ್ನು ಜಿಲ್ಲೆಯಲ್ಲಿರುತ್ತವೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣವು 790 ಮೀಲಿ ಮೀಟರ್‌ಗಳಾಗಿದ್ದು 2017–18ನೇ ಸಾಲಿನಲ್ಲಿ ಮಳೆಯ ಪ್ರಮಾಣವು 913ಮೀಲಿ ಮೀಟರ್ ಆಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 27,764 ಮೀನುಗಾರರಿದ್ದು ಮೀನುಗಾರಿಕೆ ವೃತ್ತಿಯಲ್ಲಿ ನಿರತರಾಗಿರುತ್ತಾರೆ. ಜಿಲ್ಲೆಯಲ್ಲಿ ಒಂದು ಮೀನುಗಾರರ ಸಹಕಾರ ಸಂಘ ಹೊಸಕೋಟೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಮೀನುಗಾರರು ಕೆರೆಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದು ಮೀನುಕೃಷಿ ಕೈಗೊಂಡು ಸ್ಥಳೀಯರಿಗೆ ಪೌಷ್ಟಿಕ ಆಹಾರ ಒದಗಿಸುವುದಲ್ಲದೆ ಮೀನುಗಾರರಿಗೆ ಉದ್ಯೋಗವಕಾಶ ಕಲ್ಪಿಸಿ ಆರ್ಥಿಕ ಪ್ರಗತಿಗೆ ಸಹಾಯಕವಾಗಿದೆ.

2017–18ನೇ ಸಾಲಿನಲ್ಲಿ 79 ಇಲಾಖಾ ವ್ಯಾಪ್ತಿಯ ದೊಡ್ಡಕೆರೆಗಳು, ಗ್ರಾಮ ಪಂಚಾಯಿತಿ ವ್ಯಾಪ್ತಿಯ 187 ಸಣ್ಣ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇಲಾಖಾ ಕೆರೆಗಳಿಗೆ 42.89ಲಕ್ಷ ಬಿತ್ತನೆ ಮೀನುಮರಿಗಳನ್ನು ಹಾಗು ಗ್ರಾಮಾ ಪಂಚಾಯಿತಿ ಕೆರೆಗಳಿಗೆ 17.51ಲಕ್ಷ ಬಿತ್ತನೆ ಮಿನುಮರಿಗಳನ್ನು ಒಟ್ಟು 60.40ಲಕ್ಷ ಬಿತ್ತನೆ ಮರಿಗಳನ್ನು ದಾಸ್ತಾನು ಮಾಡಿ ಮೀನು ಕೃಷಿ ಕೈಗೊಳ್ಳಲಾಗಿದೆ. ರಾಜ್ಯದ ಒಳನಾಡು ಮೀನು ಉತ್ಪಾದನೆಯು 1.69 ಲಕ್ಷ ಮೆ.ಟನ್‌ಗಳಾಗಿದ್ದು, ಜಿಲ್ಲೆಯ ಮೀನು ಉತ್ಪಾದನೆಯು 2531.38 ಮೆ.ಟನ್‌ಗಳಾಗಿದ್ದು, ಇದರ ಮೌಲ್ಯವು ರೂ.2278 ಲಕ್ಷಗಳಾಗಿರುತ್ತವೆ.

ಜಿಲ್ಲಾಪಂಚಾಯತ್ ಕಾರ್ಯಕ್ರಮಗಳಿಗೆ ರೂ.17.60ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.17.20 ಲಕ್ಷ ವೆಚ್ಚವಾಗಿರುತ್ತದೆ. ಯೋಜನೇತರ ಅಡಿಯಲ್ಲಿ 71.87ಲಕ್ಷ ಹಣ ಬಿಡುಗಡೆಯಾಗಿದೆ, ಇದರಲ್ಲಿ ಸಿಬ್ಬಂದಿ ವೆಚ್ಚ, ಕಛೇರಿ ವೆಚ್ಚ, ಬಾಡಿಗೆ ಇತ್ಯಾದಿಗಳನ್ನು ಭರಿಸಲಾಗಿದೆ. ಜಿಲ್ಲೆಯಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಸೇರಿದಂತೆ ಒಟ್ಟು 5 ಅಧಿಕಾರಿಗಳು ಮತ್ತು 17 ಸಿಬ್ಬಂದಿವರ್ಗ ಒಟ್ಟು 22 ಹುದ್ದೆಗಳು ಮಂಜೂರಾಗಿದ್ದು, 13 ಹುದ್ದೆಗಳು ಭರ್ತಿಯಾಗಿ 9 ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 7 'ಸಿ' ಗುಂಪಿನ ಸಿಬ್ಬಂದಿ, 2 ಹುದ್ದೆ 'ಡಿ' ವರ್ಗದ ಹುದ್ದೆಗಳಾಗಿವೆ. ಜಿಲ್ಲಾ ಪಂಚಾಯತ್ ಮತ್ತು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗಿದೆ. ಯೋಜನೇತರ ಅಡಿಯಲ್ಲಿ ರೂ.65.89ಲಕ್ಷ ಖರ್ಚಾಗಿರುತ್ತದೆ.

2017–18ನೇ ಸಾಲಿನಲ್ಲಿ ದೊಡ್ಡ ಕೆರೆಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ಮತ್ತು ಟೆಂಡರ್ ಕಂ ಹರಾಜಿನ ಮೂಲಕ ವಿಲೇವಾರಿ ಮತ್ತು ಮೀನುಮರಿ ಮಾರಾಟದಿಂದ ಸರ್ಕಾರಕ್ಕೆ ರೂ.28,49,354/–ಲಕ್ಷ ಆದಾಯ ಬಂದಿರುತ್ತದೆ.

ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳು

1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ 2405–00–101–0–27

ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.4.00ಲಕ್ಷ ಅನುದಾನ ಒದಗಿಸಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ–2) ಕಛೇರಿಯ ಆವರಣದಲ್ಲಿ ಮೀನುಮರಿ ಪಾಲನಾ ಕೇಂದ್ರಕ್ಕೆ ಕೊಳವೆ ಬಾವಿ ಕೊರೆಸಲು ಹಾಗೂ ವಿದ್ಯುತ್ ಮೋಟಾರ್ ಅಳವಡಿಸುವ ಕಾಮಗಾರಿಗಾಗಿ ಬಳಸಲಾಗಿದೆ.

2) ಒಳನಾಡು ಮೀನುಗಾರಿಕೆ ಅಭಿವೃದ್ದಿಗೆ ಸಹಾಯ:2405–00–101–0–28

ಸದರಿ ಯೋಜನೆಯಡಿಯಲ್ಲಿ ರೂ.11.00ಲಕ್ಷ ಅನುದಾನ ಒದಗಿಸಲಾಗಿದೆ. ಹೊರಗುತ್ತಿಗೆ ಆಧಾರದ ಮೂವರು ನೌಕರರನ್ನು, 3 ತಾಲ್ಲೂಕು ಅದೀನ ಕಛೇರಿಗಳಿಗೆ ಕಛೇರಿ ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲಾ ಕಛೇರಿಗೆ ಹೊರಗುತ್ತಿಗೆ ಮೂಲಕ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರವರಿಗೆ ಬಾಡಿಗೆ ವಾಹನಕ್ಕಾಗಿ ಭರಿಸಿದ ವೆಚ್ಚ ಸೇರಿ ಹಾಗೂ ಮೀನುಮರಿ ಪಾಲನಾ ವೆಚ್ಚ ವಿಶೇಷ ಘಟಕ ಯೋಜನೆಯಡಿ ರೂ.4.00ಲಕ್ಷ ಹಾಗೂ ಗಿರಿಜನ ಉಪಯೋಜನೆಯಡಿ ರೂ.3.00ಲಕ್ಷ ಅನುದಾನ ವಿನಿಯೋಗಿಸಿ ಒಟ್ಟು ರೂ.10.60ಲಕ್ಷ ಹಣ ವೆಚ್ಚ ಮಾಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 40 ಪರಿಶಿಷ್ಟ ಜಾತಿ ಮೀನುಗಾರರಿಗೆ ತಲಾ ರೂ.10,000/–ದಂತೆ ಹಾಗು 30 ಪರಿಶಿಷ್ಟ ಪಂಗಡದ ಮೀನುಗಾರರಿಗೆ ತಲಾ ರೂ.10,000/–ದಂತೆ ಮೀನು ಹಿಡಿಯುವ ಸಲಕರಣೆಗಳನ್ನು ಉಚಿತವಾಗಿ ವಿತರಿಸಲಾಗಿದೆ.

3) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ 2405–00–101–0–30

ಸದರಿ ಯೋಜನೆಯಡಿಯಲ್ಲಿ ರೂ.2.10ಲಕ್ಷ ಅನುದಾನ ಬಿಡುಗಡೆಯಾಗಿದ್ದು, ನಾಲ್ಕು ತಾಲ್ಲೂಕಿನಿಂದ 21 ಸಂಖ್ಯೆ ವೃತ್ತಿಪರ ಮೀನುಗಾರರನ್ನು ಗುರುತಿಸಿಕೊಂಡು ಮೀನು ಮಾರಾಟ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚ ರೂ.40,000/–ಗಳಲ್ಲಿ ಶೇ.25ರ ಸಹಾಯಧನ ರೂಪದಲ್ಲಿ ದ್ವಿಚಕ್ರ ವಾಹನ ಮತ್ತು ಶಾಖನಿರೋಧಕ ಪೆಟ್ಟಿಗೆ ಖರೀದಿಸಿರುವ ಪ್ರತಿ ಫಲಾನುಭವಿಗೆ ಸಹಾಯಧನ ರೂ.10,000/–ಗಳನ್ನು ವಿತರಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸಲಾಗಿದೆ.

4) ಪ್ರದರ್ಶನಗಳು ಮತ್ತು ತರಬೇತಿ:2405–00–101–0–32

ಸದರಿ ಯೋಜನೆಯಡಿಯಲ್ಲಿ ರೂ.50,000/–ಅನುದಾನ ಬಿಡುಗಡೆಯಾಗಿದ್ದು, ಈ ಮೊತ್ತವನ್ನು 2017–18ನೇ ಸಾಲಿನಲ್ಲಿ ವಸ್ತು ಪ್ರದರ್ಶನಕ್ಕಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರೂ.5,000/– ಮತ್ತು ಜಿಲ್ಲಾಪಂಚಾಯತ್ ವತಿಯಿಂದ ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿಯಲ್ಲಿ ಇಲಾಖೆಯಿಂದ ಏರ್ಪಡಿಸಿದ ವಸ್ತು ಪ್ರದರ್ಶನಕ್ಕಾಗಿ ರೂ.45,000/– ಒಟ್ಟು ರೂ. 50,000/–ಗಳನ್ನು ವೆಚ್ಚ ಮಾಡಲಾಗಿದೆ.

1) "ಮೀನುಮರಿ ಖರೀದಿಗೆ ಸಹಾಯ" 2405–00–101–0–28 ಮೀನು ಮೊಟ್ಟೆ(ಮರಿ) 422 ಮತ್ತು 106 ಸಹಾಯಧನ

ಸದರಿ ಯೋಜನೆಯಡಿ ಬಿತ್ತನೆ ಮೀನುಮರಿಗಳ ಖರೀದಿಗೆ ಸಹಾಯಧನಕ್ಕಾಗಿ ಜಿಲ್ಲೆಗೆ ರೂ.25,000/– ಅನುದಾನ ನಿಗದಿಪಡಿಸಲಾಗಿದ್ದು, 10 ಫಲಾನುಭವಿಗಳಿಗೆ ಒಟ್ಟು ರೂ.25,000/– ಸಹಾಯಧನವನ್ನು ಫಲಾನುಭವಿಗಳು ಖರೀದಿಸಿದ ಬಿತ್ತನೆ ಮೀನುಮರಿಗಳ ಮೊತ್ತದ ಶೇಕಡ 50ರಷ್ಟು ಗರಿಷ್ಟ ಪ್ರತಿ ಫಲಾನುಭವಿಗೆ ರೂ.5,000/–ರಂತೆ ಸಹಾಯಧನ ವಿತರಿಸಿದೆ.

2) ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆಗಾಗಿ ಸಹಾಯಧನ 2405–00–110–0–02

ಸದರಿ ಯೋಜನೆಯಡಿಯಲ್ಲಿ ಒಟ್ಟು ರೂ.1,40,000/–ಅನುದಾನ ಬಿಡುಗಡೆಯಾಗಿದ್ದು, ಘಟಕ ವೆಚ್ಚವು ರೂ.10,000/–ಗಳಾಗಿದ್ದು, ಯೋಜನೆಯಂತೆ 14 ವೃತ್ತಿಪರ ಮೀನುಗಾರ ಫಲಾನುಭವಿಗಳಿಗೆ ಒಟ್ಟು ರೂ.1,40,000/– ಮೌಲ್ಯದ ಶೇಕಡ 100ರಷ್ಟು ಸಹಾಯಧನ ರೂಪದಲ್ಲಿ ಮೀನುಗಾರಿಕೆ ಸಲಕರಣೆ ಮೀನು ಹಿಡಿಯುವ ನೈಲನ್ ಬಲೆಗಳನ್ನು ವಿತರಿಸಿದೆ.

3) ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ(2405–00–101–0–56)

ಸದರಿ ಯೋಜನೆಯಡಿಯಲ್ಲಿ ಒಟ್ಟು ರೂ.1.00ಲಕ್ಷ ಅನುದಾನ ಬಿಡುಗಡೆಯಾಗಿದ್ದು ಘಟಕ ವೆಚ್ಚವು ರೂ.10**,000/–ಗಳಾಗಿದ್ದು, ಯೋಜನೆಯಂತೆ 10** ವೃತ್ತಿಪರ ಮೀನುಗಾರ ಫಲಾನುಭವಿಗಳಿಗೆ ಒಟ್ಟು ರೂ.1.00 ಲಕ್ಷ ಮೌಲ್ಯದ ಶೇಕಡ 100ರಷ್ಟು ಸಹಾಯಧನ ರೂಪದಲ್ಲಿ ಫೈಬರ್ ಗ್ಲಾಸ್, ಹರಿಗೋಲುಗಳನ್ನು ವಿತರಿಸಿದೆ.

4) ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ(2405–00–101–0–66) (422) ಮತ್ತು (423)

(i) ಒಳನಾಡು ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲು ಮತ್ತು ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ

ಸದರಿ ಯೋಜನೆಯಡಿಯಲ್ಲಿ ಒಟ್ಟು ರೂ.6,60,000/–ಅನುದಾನ ಬಿಡುಗಡೆಯಾಗಿದ್ದು 4 ತಾಲ್ಲೂಕಿನಿಂದ ಪರಿಶಿಷ್ಟ ಜಾತಿಯ **20** ಫಲಾನುಭವಿಗಳಿಗೆ ಮತ್ತು ಪರಿಶಿಷ್ಟ ಪಂಗಡದ **13** ಫಲಾನುಭವಿಗಳಿಗೆ ಒಟ್ಟು 33 ಫಲಾನುಭವಿಗಳಿಗೆ ತಲಾ ರೂ.20,000/–ರಂತೆ ಫೈಬರ್ ಗ್ಲಾಸ್ ಹರಿಗೋಲು ಮತ್ತು ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ಇಲಾಖೆಯು ಅನುಮೋದಿಸಿರುವ ಸಂಸ್ಥೆಗಳಿಂದ ಖರೀದಿಸಿ ವಿತರಿಸಿದೆ.

(ii) ನಾಲ್ಕು ಚಕ್ರದ ವಾಹನ ಮೀನು ಸಾಗಾಣಿಕೆಗೆ ವಾಹನ ಖರೀದಿಗಾಗಿ ಸಹಾಯಧನ

ಸದರಿ ಯೋಜನೆಯಡಿಯಲ್ಲಿ ಮೀನುಗಾರರಿಗೆ ಮೀನು ಮಾರಾಟ ಮತ್ತು ಸಾಗಾಣಿಕೆಗಾಗಿ ನಾಲ್ಕು ಚಕ್ರದ ವಾಹನ ಖರೀದಿಗೆ ಘಟಕ ವೆಚ್ಚದ ರೂ.5.50ಲಕ್ಷಗಳಲ್ಲಿ ಶೇಕಡ 80ರಷ್ಟು ಸಹಾಯಧನ ರೂ.4,40,000/–ಗಳಂತೆ ಎರಡು ಫಲಾನುಭವಿಗಳಿಗೆ ಒಟ್ಟು ರೂ.8,80,000/–ಅನುದಾನ ಬಿಡುಗಡೆಯಾಗಿದೆ.
ಹೊಸಕೋಟೆ ತಾಲ್ಲೂಕಿನಿಂದ ಪರಿಶಿಷ್ಟ ಜಾತಿಯ ಒಬ್ಬ ಫಲಾನುಭವಿಗೆ ಮತ್ತು ದೇವನಹಳ್ಳಿ ತಾಲ್ಲೂಕಿನ ಪರಿಶಿಷ್ಟ ಪಂಗಡದ ಒಬ್ಬ ಫಲಾನುಭವಿಗೆ ನಾಲ್ಕು ಚಕ್ರ ವಾಹನ ಮೀನು ಸಾಗಾಣಿಕೆಗೆ ಖರೀದಿಸಿರುವುದಕ್ಕೆ ತಲಾ ರೂ.4,40,000/–ಗಳಂತೆ ಇಬ್ಬರು ಫಲಾನುಭವಿಗಳಿಗೆ ಒಟ್ಟು ರೂ.8,80,000/–ಗಳ ಸಹಾಯಧನವನ್ನು ವಿತರಿಸಿದೆ.

5) **<u>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ(2401–00–800–1–57) (106), (422) ಮತ್ತು (423)</u>**

(i) **<u>ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ</u>**

ಸದರಿ ಯೋಜನೆಯಡಿ ಮೀನುಗಾರಿಕೆ ಬಲೆ ಸಲಕರಣೆ ಕಿಟ್ಟು ವಿತರಣೆಗಾಗಿ ರೂ.3.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, 4 ತಾಲ್ಲೂಕಿನಿಂದ ತಲಾ ರೂ. 10,000/–ರಂತೆ 30 ಫಲಾನುಭವಿಗಳಿಗೆ ಸಾಮಾನ್ಯ ವರ್ಗದ**–23,** ಪರಿಶಿಷ್ಟ ಜಾತಿ– **0**5 ಮತ್ತು ಪರಿಶಿಷ್ಟ ಪಂಗಡ–02 ಫಲಾನುಭವಿಗಳಿಗೆ ಮೀನುಗಾರಿಕೆ ಬಲೆ ಸಲಕರಣೆ ಕಿಟ್ಟು ವಿತರಿಸಿದೆ.

(ii) **ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ**

ಸದರಿ ಯೋಜನೆಯಡಿ ಜಿಲ್ಲೆಗೆ ರೂ.3.00ಲಕ್ಷ ಅನುದಾನ ಬಿಡುಗಡೆಯಾಗಿದ್ದು 30 ಭೌತಿಕ ಗುರಿಯಿದ್ದು, ಘಟಕ ವೆಚ್ಚು ರೂ.10,000/–ಗಳಾಗಿದ್ದು, ಯೋಜನೆಯಡಿ ಸಾಮಾನ್ಯ ವರ್ಗದ 23, ಮತ್ತು ಪರಿಶಿಷ್ಟ ಜಾತಿ 05 ಮತ್ತು ಪರಿಶಿಷ್ಟ ಪಂಗಡ 02 ಒಟ್ಟು 30 ಫಲಾನುಭವಿಗಳಿಗೆ ಮೀನುಗಾರಿಕೆ ಫೈಬರ್‌ಗ್ಲಾಸ್ ಹರಿಗೋಲನ್ನು ವಿತರಿಸಿದೆ.

(iii) **ತರಬೇತಿ ಮತ್ತು ಶೈಕ್ಷಣಿಕ ಪ್ರವಾಸಕ್ಕಾಗಿ (2405–00–101–0–66)(422)**

ಸದರಿ ಯೋಜನೆಯಡಿಯಲ್ಲಿ ತರಬೇತಿ ಮತ್ತು ಶೈಕ್ಷಣಿಕ ಪ್ರವಾಸಕ್ಕಾಗಿ ಪರಿಶಿಷ್ಟ ಜಾತಿಯ ಮೀನುಗಾರರಿಗೆ ರೂ. ಒಟ್ಟು ರೂ.1,30 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಭೌತಿಕ 30 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ 0.83ಲಕ್ಷ ಅನುದಾನ ಹಾಗೂ ಭೌತಿಕ 20 ಫಲಾನುಭವಿಗಳಿಗೆ ತರಬೇತಿ ಕಾರ್ಯಕ್ರಮಕ್ಕಾಗಿ ನೀಡಲಾಗಿದೆ. ಒಟ್ಟು 50 ಫಲಾನುಭವಿಗಳಿಗೆ 3 ದಿನಗಳ ರಾಜ್ಯ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮಕ್ಕಾಗಿ ಒಟ್ಟು ರೂ.2.13ಲಕ್ಷ ಗಳನ್ನು ಉಪಯೋಗಿಸಲಾಗಿದೆ.

6) **<u>ಪ್ರದಶನ ಮತ್ತು ತರಬೇತಿ (2405–00–109–0–01)</u>**

ಸದರಿ ಯೋಜನೆಯಡಿಯಲ್ಲಿ ಒಟ್ಟು ರೂ.20,000/–ಅನುದಾನ ಬಿಡುಗಡೆಯಾಗಿದ್ದು ಮೀನುಗಾರಿಕೆ ವಸ್ತು ಪ್ರದರ್ಶನ ಮತ್ತು ತರಬೇತಿಗಾಗಿ 4 ತಾಲ್ಲೂಕುಗಳಿಗೆ ತಲಾ ರೂ.5,000/–ಗಳಂತೆ ನೀಡಲಾಗಿತ್ತು. ಸದರಿ ಯೋಜನೆ ಯಡಿ ಅಕ್ವೇರಿಯಂ ಖರೀದಿ, ಕೃಷಿ ಅಭಿಯಾನ, ವಸ್ತು ಪ್ರದರ್ಶನ ಹಾಗೂ ಇತರೆ ಕಾರ್ಯಕ್ರಮಕ್ಕಾಗಿ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಒಟ್ಟುರೂ.20,000/–ಗಳನ್ನು ಉಪಯೋಗಿಸಲಾಗಿದೆ.

7) **ಮತ್ಸ್ಯಕೃಷಿ ಆಶಾ ಕಿರಣ ಯೋಜನೆ (2405–00–101–0–03)**

ಸದರಿ ಯೋಜನೆಯಡಿ ಗುರಿ 2.00ಲಕ್ಷ ಅನುದಾನ ಒದಿಗಿಸಿದ್ದು ನೆಲಮಂಗಲ ತಾಲ್ಲೂಕಿನ ಒಬ್ಬ ಫಲಾನುಭವಿಗೆ ಈ ಯೋಜನೆಯಡಿ 0.77ಲಕ್ಷ ಮತ್ತು ಹೊಸಕೋಟೆ ತಾಲ್ಲೂಕಿನ ಒಬ್ಬ ಫಲಾನುಭವಿಗೆ ರೂ.0.93ಲಕ್ಷ ಒಟ್ಟು 1.70ಲಕ್ಷ ಅನುದಾನವನ್ನು ಉಪಯೋಗಿಸಲಾಗಿದೆ.

8) **ಮತ್ಸ್ಯಾಶ್ರಯ ಯೋಜನೆ**

ಸದರಿ ಯೋಜನೆಯಡಿ ಬೆಂಗಳೂರು (ಗ್ರಾ) ಜಿಲ್ಲೆಗೆ ಒಟ್ಟು 40 ಮನೆಗಳನ್ನು ಮಂಜೂರು ಮಾಡಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಮಂಜೂರಾದ ಮನೆಗಳು	ಸಾಮಾನ್ಯ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1)	ದೊಡ್ಡಬಳ್ಳಾಪುರ	10	8	1	1
2)	ಹೊಸಕೋಟೆ	10	7	2	1
3)	ನೆಲಮಂಗಲ	10	7	2	1
4)	ದೇವನಹಳ್ಳಿ	10	7	2	1
ಒಟ್ಟು		40	29	7	4

ಸದರಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳೀಗೆ ಘಟಕ ವೆಚ್ಚವು ರೂ.1.20ಲಕ್ಷ, ಪರಿಶಿಷ್ಟ ಜಾತಿ/ಪಂಗಡದ ಗ್ರಾಮೀಣಾ ಪ್ರದೇಶದ ಫಲಾನುಭವಿಗೆ ರೂ.1.75ಲಕ್ಷ, ಪರಿಶಿಷ್ಟ ಜಾತಿ/ಪಂಗಡದ ನಗರ ವ್ಯಾಪ್ತಿಯ ಫಲಾನುಭವಿಗೆ ರೂ2.00 ಲಕ್ಷಗಳಾಗಿರುತ್ತದೆ. ಫಲಾನುಭವಿಗಳನ್ನು ಸ್ಥಳೀಯ ಶಾಸಕರಿಂದ ಅನುಮೋದನೆ ಪಡೆದು ಯೋಜನೆ ಅನುಷ್ಟಾನಗೊಳಿಸಲಾಗಿದೆ.

5) ತಾಲ್ಲೂಕು ಪಂಚಾಯತ್ ಕಾರ್ಯಕ್ರಮ
ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ (2225–00–101–0–64)

ಸದರಿ ಯೋಜನೆಯಡಿಯಲ್ಲಿ ದೇವನಹಳ್ಳಿ ತಾಲ್ಲೂಕಿಗೆ ರೂ.95,000/–ಹೊಸಕೋಟೆ ತಾಲ್ಲೂಕಿಗೆ ರೂ.1,05,000/– ಮತ್ತು ನೆಲಮಂಗಲ ತಾಲ್ಲೂಕಿಗೆ ರೂ.90,000/–ಅನುದಾನ ಒಟ್ಟು ರೂ.2.75ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಪ್ರತಿ ಫಲಾನುಭವಿಗೆ ರೂ.5,000/–ರಂತೆ ಒಟ್ಟು 3 ತಾಲ್ಲೂಕುಗಳ ಪರಿಶಿಷ್ಟ ಜಾತಿಯ 55 ಫಲಾನುಭವಿಗಳಿಗೆ ಮೀನು ವ್ಯಾಪಾರಕ್ಕಾಗಿ ಸೈಕಲ್ ಮತ್ತು ಪ್ಲಾಸ್ಟಿಕ್ ಕ್ರೇಟ್ಸುಗಳನ್ನು ವಿತರಿಸಲಾಗಿದೆ. ಹೊಸಕೋಟೆ ತಾಲ್ಲೂಕಿನಲ್ಲಿ ಗಿರಿಜನ ಉಪಯೋಜನೆಯಡಿ ರೂ.15,000/– ಅನುದಾನ ಒದಗಿಸಿದ್ದು ಪ್ರತಿ ಫಲಾನುಭವಿಗೆ ರೂ.5,000/–ರಂತೆ ಮೀನು ಮಾರಾಟಕ್ಕಾಗಿ ಸೈಕಲ್ ಮತ್ತು ಪ್ಲಾಸ್ಟಿಕ್ ಕ್ರೇಟ್ಸುಗಳನ್ನು ಶೇಕಡ 100% ಸಹಾಯಧನದಲ್ಲಿ ವಿತರಿಸಿದೆ.

I. ಕೆ.ಡಿ.ಪಿ. ಕಾರ್ಯಕ್ರಮಗಳ ಪ್ರಗತಿ ವಿವರ

ಕ್ರ. ಸಂ.	ಕಾರ್ಯಕ್ರಮಗಳ ಹೆಸರು	ವಾರ್ಷಿಕ ಗುರಿ	ಸಾಧನೆ
1)	ಮೀನುಗಾರಿಕೆಗರ ಅಳವಡಿಸಿದ ದೊಡ್ಡಕೆರೆಗಳು (ಸಂಖ್ಯೆಗಳಲ್ಲಿ)	85	79
2)	ದೊಡ್ಡ ಕೆರೆಗಳಿಗೆ ಬಿತ್ತನೆ ಮಾಡಲಾದ ಮೀನುಮರಿಗಳು (ಲಕ್ಷಗಳಲ್ಲಿ)	61.00	42.89
3)	ಮತ್ಸ್ಯಪಾಲನೆಗೆ ಅಳವಡಿಸಿರುವ ಗ್ರಾಮ ಪಂಚಾಯಿತಿ ಕೆರೆಗಳು (ಸಂಖ್ಯೆಗಳಲ್ಲಿ)	55	1.87
4)	ಗ್ರಾಮ ಪಂಚಾಯಿತಿ ಕೆರೆಗಳಿಗೆ ಬಿತ್ತನೆ ಮಾಡುವ ಮೀನುಮರಿಗಳು (ಲಕ್ಷಗಳಲ್ಲಿ)	13.00	17.51
5)	ಮೀನುಮರಿ ಪಾಲನೆ (ಲಕ್ಷಗಳಲ್ಲಿ)	2.00	1.34
6)	ಖಾಸಗಿ ಕೊಳಗಳ ಅಭಿವೃದ್ದಿ (ಸಂಖ್ಯೆಗಳಲ್ಲಿ)	10	0.50
7)	ಖಾಸಗಿ ಕೊಳಗಳಲ್ಲಿ ಮೀನುಮರಿ ಬಿತ್ತನೆ (ಲಕ್ಷಗಳಲ್ಲಿ)	1.00	0.325

II. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು
(ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1)	ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–101–0–27)	4.00	2	4.00	2
2)	ಒಳನಾಡು ಮೀನುಗಾರಿಕೆ ಸಹಾಯ (2405–00–101–0–28)	11.00	70	10.60	70
	(ಎ) ಒಳನಾಡು ಮೀನುಗಾರಿಕೆಗೆ ಸಹಾಯಧನ (2405–00–101–0–28)(422) (ಖಲಕ) (**422**)	4.00	40	4.00	40
	(ಬಿ) ಒಳನಾಡು ಮೀನುಗಾರಿಕೆಗೆ ಸಹಾಯಧನ (2405–00–101–0–28) (ಖಿಖಕ) (**423**)	3.00	30	3.00	30
3)	ಮತ್ಸ್ಯವಾಹಿನಿ ಯೋಜನೆ (2405–00–101–0–30)	2.10	21	2.10	21
4)	ಪ್ರದರ್ಶನಗಳು ಮತ್ತು ತರಬೇತಿ (2405–00–101–0–32)	0.50	2	0.50	2
	ಒಟ್ಟು	**24.60**	**165**	**24.60**	**165**

ಕ್ರ. ಸಂ.	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ	
III. ರಾಜ್ಯವಲಯ ಕಾರ್ಯಕ್ರಮಗಳು		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1)	ಮೀನು ಮೊಟ್ಟೆ (ಮರಿ) ಖರೀದಿಸಲು ನೆರವು (2405–00–101–0–28)(106)	0.25	10	0.25	10
2)	ಸಲಕರಣೆ ಕಿಟ್ಟುಗಳ ಖರೀದಿಗೆ ಸಹಾಯಧನ (2405–00–110–0–02) (106)	1.40	14	1.40	14
3)	ಒಳನಾಡು ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ (2405–00–101–0–56) (106)	1.00	10	1.00	10
4)	ಪ್ರದರ್ಶನ ಮತ್ತು ತರಬೇತಿ (2405–00–109–0–01)	0.20	4	0.20	4
5)	ಮತ್ಸ್ಯ ಆಶಾ ಕಿರಣಾ ಯೋಜನೆ (2405–00–101–0–03)	2.00	2	1.70	2
6)	**ವಿಶೇಷ ಘಟಕ ಯೋಜನೆ** (2405–00–101–0–66–422)				
(i)	ಮೀನುಗಾರಿಕೆ ಸಲಕರಣೆ ಕಿಟ್ಟು ಮತ್ತು ಫೈಬರ್ ಗ್ಲಾಸ್ ಹರಿಗೋಲು ಖರೀದಿಗೆ ಸಹಾಯಧನ ಘಟಕ ವೆಚ್ಚ ರೂ.20,000/–	4.00	20	4.00	20
ii)	ತರಬೇತಿ ಮತ್ತು ಶೈಕ್ಷಣಿಕ ಪ್ರವಾಸ	1.30	30	1.30	30

(iii)	ನಾಲ್ಕು ಚಕ್ರ ವಾಹನ ಮೀನು ಸಾಗಾಣಿಕೆ ವಾಹನ ಖರೀದಿಗಾಗಿ ಸಹಾಯಧನ			4.40	1	4.40	1
7)	**ಗಿರಿಜನ ಉಪಯೋಜನೆ** (2405–00–101–0–66–423)						
(i)	ಮೀನುಗಾರಿಕೆ ಸಲಕರಣೆ ಕಿಟ್ಟು ಮತ್ತು ಫೈಬರ್ ಗ್ಲಾಸ್ ಹರಿಗೋಲು ಖರೀದಿಗೆ ಸಹಾಯಧನ			2.60	13	2.60	13
(ii)	ತರಬೇತಿ ಮತ್ತು ಶೈಕ್ಷಣಿಕ ಪ್ರವಾಸ			0.83	20	0.83	20
(iii)	ನಾಲ್ಕು ಚಕ್ರ ವಾಹನ ಮೀನು ಸಾಗಾಣಿಕೆ ವಾಹನ ಖರೀದಿಗಾಗಿ ಸಹಾಯಧನ			4.40	1	4.40	1
8)	**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** (2401–00–800–1–57)						
	(i) ಮೀನುಗಾರಿಕೆ ಸಲಕರಣೆ ಕಿಟ್ಸ್ ವಿತರಣೆ		**ಆರ್ಥಿಕ**	**ಭೌತಿಕ**	3.00	30	3.00	30
		106	**2.30**	**23**				
		422	**0.50**	**5**				
		423	**0.20**	**2**				
		ಒಟ್ಟು	**3.00**	**30**				
	ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ	**106**	**2.30**	**23**	3.00	30	3.00	30
		422	**0.50**	**5**				
		423	**0.20**	**2**				
		ಒಟ್ಟು	**3.00**	**30**				
ಒಟ್ಟು					**28.38**		**28.08**	

ಕ್ರ. ಸಂ.	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ	
IV.	**ತಾಲ್ಲೂಕು ಪಂಚಾಯಿತಿ ಯೋಜನೆಗಳು (2225–00–101–0–64)**	**ಆರ್ಥಿಕ**	**ಭೌತಿಕ**	**ಆರ್ಥಿಕ**	**ಭೌತಿಕ**
1)	(i) **ವಿಶೇಷ ಘಟಕ ಯೋಜನೆ** ಸೈಕಲ್ ಮತ್ತು ಪ್ಲಾಸ್ಟಿಕ್ ಕ್ರೇಟ್ಸುಗಳನ್ನು ಮೀನು ವ್ಯಾಪಾರಕ್ಕಾಗಿ ಶೇಕಡ 100%ರಷ್ಟು	2.75	55	2.75	55
	(ii) **ಗಿರಿಜನ ಉಪ ಯೋಜನೆ** ಸೈಕಲ್ ಮತ್ತು ಪ್ಲಾಸ್ಟಿಕ್ ಕ್ರೇಟ್ಸುಗಳನ್ನು ಮೀನು ವ್ಯಾಪಾರಕ್ಕಾಗಿ ಶೇಕಡ 100%ರಷ್ಟು ಸಹಾಯಧನ	0.15	3	0.15	3
ಒಟ್ಟು		**2.90**		**2.90**	

19. ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯು ಜಿಲ್ಲೆಯ ಕೈಮಗ್ಗ, ವಿದ್ಯುತ್‌ಮಗ್ಗ ಹಾಗೂ ಸಿದ್ದಉಡುಪು ಘಟಕಗಳ ಸ್ಥಾಪನೆ/ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾ/ರಾಜ್ಯ/ಕೇಂದ್ರ ವಲಯದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಕಾರ್ಯನಿರ್ವಹಿಸುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 20,000ಕ್ಕೂ ಹೆಚ್ಚು ವಿದ್ಯುತ್‌ಮಗ್ಗಗಳು ಹಾಗೂ 280 ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿದೆ. ಹಾಗೂ ಜಿಲ್ಲೆಯಲ್ಲಿ 07 ಕೈಮಗ್ಗ ಹಾಗೂ 15 ವಿದ್ಯುತ್‌ಮಗ್ಗ ನೇಕಾರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದೆ. ಈ ಭಾಗದಲ್ಲಿ ಪ್ರಮುಖವಾಗಿ ಶುದ್ಧ ರೇಷ್ಮೆ ಸೀರೆ, ಪಾಲಿಯಸ್ಟರ್ ಸೀರೆ, ಡ್ರೆಸ್‌ಮೆಟೀರಿಯಲ್ಸ್, ಟವಲ್, ಬೆಡ್‌ಶೀಟ್, ಇತ್ಯಾದಿ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ.

2017–18ನೇ ಸಾಲಿಗೆ ಅನುಷ್ಠಾನ ಮಾಡಲಾದ ಜಿಲ್ಲಾ ವಲಯ ಕಾರ್ಯಕ್ರಮಗಳ ವಿವರ ಈ ರೀತಿ ಇದೆ.

1. ಕೈಮಗ್ಗ ಉದ್ದಿಮೆಗಳಿಗೆ ಸಹಾಯ: 2851–00–107–0–31.

ಈ ಯೋಜನೆಯಲ್ಲಿ ಒಟ್ಟು ರೂ.18.00ಲಕ್ಷ ಅನುದಾನ ನಿಗದಿಯಾಗಿರುತ್ತದೆ. ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಕೈಮಗ್ಗ ಆಧುನೀಕರಣ ಮತ್ತು ದುಡಿಮೆ ಬಂಡವಾಳ ಸಹಾಯಧನವಾಗಿ ವೆಚ್ಚಮಾಡಲಾಗಿದೆ.

ಅ) <u>ದುಡಿಮೆ ಬಂಡವಾಳ ಸಹಾಯಧನ:</u>

ಈ ಯೋಜನೆಯಲ್ಲಿ ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ನೇಕಾರಿಕೆ ವೃತ್ತಿಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ದುಡಿಮೆ ಬಂಡವಾಳ ಸಹಾಯಧನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ.

ಕ್ರ ಸಂ	ತಾಲ್ಲೂಕಿನ ಹೆಸರು	ಸಹಕಾರ ಸಂಘದ ಹೆಸರು & ವಿಳಾಸ		ಮೊತ್ತ ರೂ.ಲಕ್ಷಗಳಲ್ಲಿ		
				ದುಡಿಮೆ ಬಂಡವಾಳ		
				ಆರ್ಥಿಕ		
			ಸಾ	ಪ.ಜಾ	ಪ.ಪಂ	ಒಟ್ಟು
1	ಹೊಸಕೋಟೆ	ನೆಲವಾಗಿಲು ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ನೆಲವಾಗಿಲು, ಹೊಸಕೋಟೆ ತಾ॥	1.00	–	–	1.00
2	ನೆಲಮಂಗಲ	ಹರಿಜನ ಗಿರಿಜನ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ಗಾಂಧಿ ಗ್ರಾಮ, ನೆಲಮಂಗಲ ತಾ॥	–	1.00	0.50	1.50
3		ಬಿನ್ನಮಂಗಲ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿ., ಬಿನ್ನಮಂಗಲ, ನೆಲಮಂಗಲ ತಾಲ್ಲೂಕು	1.00	–	–	1.00
4	ದೊಡ್ಡಬಳ್ಳಾಪುರ	ಮಹಿಳಾ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಡಿ. ಕ್ರಾಸ್ ರಸ್ತೆ, ದೊಡ್ಡಬಳ್ಳಾಪುರ.	1.00	–	–	1.00
5		ಜನಶ್ರೀ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಮಹಿಳಾ ನೇಕಾರರ ವಿವಿದೋದ್ದೇಶ ಸಹಕಾರ ಸಂಘ ನಿ., ಟ್ಯಾಂಕ್ ರಸ್ತೆ, ದೊಡ್ಡಬಳ್ಳಾಪುರ	1.50	–	–	1.50
6	ದೇವನಹಳ್ಳಿ	ಶ್ರೀ ಚೌಡೇಶ್ವರಿ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಮಾರುತಿ ನಗರ, ಶಿಡ್ಲಘಟ್ಟ ಕ್ರಾಸ್, ವಿಜಯಪುರ, ದೇವನಹಳ್ಳಿ ತಾ॥	1.00	–	–	1.00
		ಒಟ್ಟು	**5.50**	**1.00**	**0.50**	**7.00**

ಆ) ಕೈಮಗ್ಗಗಳ ಆಧುನೀಕರಣ:–

2017–18ನೇ ಸಾಲಿನಲ್ಲಿ ಕೈಮಗ್ಗ ನೇಕಾರರು ಹೊಂದಿರುವ ಹಳೆಯ ವಿಧಾನದ ಮಗ್ಗಗಳನ್ನು ಆಧುನೀಕರಿಸಲು ಅನುಕೂಲವಾಗುವಂತೆ ನೇಕಾರರ ಸಂಘಗಳ ಮೂಲಕ ಆಧುನೀಕರಣ ಸಾಧನೆಗಳಾದ ಡಾಬಿ, ಜಕಾರ್ಡ್, ಡೋಲಿ ಇತ್ಯಾದಿ ಉಪಕರಣಗಳನ್ನು ನೇಕಾರ ಸಂಘದ ಮೂಲಕ ಕೈಮಗ್ಗ ನೇಕಾರರಿಗೆ ಸಹಾಯಧನ ರೂಪದಲ್ಲಿ ನೀಡಲಾಗಿದೆ.

ಕ್ರ ಸಂ	ಸಹಕಾರ ಸಂಘದ ಹೆಸರು & ವಿಳಾಸ	ರೂ. ಲಕ್ಷಗಳಲ್ಲಿ
1	ನೆಲವಾಗಿಲು ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ನೆಲವಾಗಿಲು, ಹೊಸಕೋಟೆ ತಾ॥	2.00
2	ಬಿನ್ನಮಂಗಲ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿ., ಬಿನ್ನಮಂಗಲ, ನೆಲಮಂಗಲ ತಾಲ್ಲೂಕು	2.50
3	ಹರಿಜನ ಗಿರಿಜನ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ಗಾಂಧಿ ಗ್ರಾಮ, ನೆಲಮಂಗಲ ತಾ॥	3.00
4	ಮಹಿಳಾ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಡಿ. ಕ್ರಾಸ್ ರಸ್ತೆ, ದೊಡ್ಡಬಳ್ಳಾಪುರ.	2.00
5	ಜನಶ್ರೀ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಮಹಿಳಾ ನೇಕಾರರ ವಿವಿದೋದ್ದೇಶ ಸಹಕಾರ ಸಂಘ ನಿ., ಟ್ಯಾಂಕ್ ರಸ್ತೆ, ದೊಡ್ಡಬಳ್ಳಾಪುರ	3.00
6	ಶ್ರೀ ಚೌಡೇಶ್ವರಿ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಮಾರುತಿ ನಗರ, ಶಿಡ್ಲಘಟ್ಟ ಕ್ರಾಸ್, ವಿಜಯಪುರ, ದೇವನಹಳ್ಳಿ ತಾ॥	2.50
	ಒಟ್ಟು	**15.00**

–: ಘೋಷ್ವಾರೆ :–

2017–18ನೇ ಸಾಲಿನಲ್ಲಿ "ಕೈಮಗ್ಗ ಉದ್ದಿಮೆಗಳಿಗೆ ಸಹಾಯ ಮತ್ತು ಸರ್ಕಾರದ ದುಡಿಮೆ ಬಂಡವಾಳ" ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ.

ಕ್ರ ಸಂ	ಯೋಜನೆ/ಕಾರ್ಯಕ್ರಮ	ಸಾಮಾನ್ಯ		ಪ.ಜಾ/ಪ.ಪಂ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	**ಕೈಮಗ್ಗ ಉದ್ದಿಮೆಗಳಿಗೆ ಸಹಾಯ**						
	ದುಡಿಮೆ ಬಂಡವಾಳ	05	5.50	01	1.50	06	7.00
	ಕೈಮಗ್ಗ ಆಧುನೀಕರಣ	04	11.50	02	3.50	06	15.00
	ಒಟ್ಟು	**09**	**17.00**	**03**	**5.00**	**12**	**22.00**

20. ಜಿಲ್ಲಾ ಸಾಕ್ಷರತಾ ಸಮಿತಿ, ಜಿಲ್ಲಾ ವಯಸ್ಕರ ಶಿಕ್ಷಣ ಹಾಗೂ ಸಾಕ್ಷರತಾ ಸಮಿತಿ ಜಿಲ್ಲಾ ಲೋಕ ಶಿಕ್ಷಣ ಸಮಿತಿ,

7ನೇ ಆಗಸ್ಟ್ 2010ರಲ್ಲಿ ಕರ್ನಾಟಕ ರಾಜ್ಯದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮವೂ ಪ್ರಪ್ರಥಮವಾಗಿ ಅದ್ಧೂರಿಯ ಸ್ವಾಗತದೊಂದಿಗೆ ಪ್ರಾರಂಭಿಸಲ್ಪಟ್ಟಿತು. ಕಾರ್ಯಕ್ರಮದ ಪ್ರಾರಂಭೋತ್ಸವವು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನರವೇರಿತು.

2011ರ ಜನಗಣತಿಯ ನಂಜುಂಡಪ್ಪ ವರದಿಯ ಪ್ರಕಾರ ಅಂಕಿಅಂಶಗಳನ್ನಾಧರಿಸಿ ಸಾಕ್ಷರ ಭಾರತ್ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕುಟುಂಬ ಸಮೀಕ್ಷೆ ಮೂಲಕ ಗುರುತಿಸಲ್ಪಟ್ಟಿರುವ 15+ವಯೋಮಾನದ ಅನಕ್ಷರಸ್ಥರಿಗೆ ಸಾಕ್ಷರತೆ ನೀಡುವ ಸದುದ್ದೇಶದಿಂದ ದೇಶಾದ್ಯಂತ ಕೇಂದ್ರ ಸರ್ಕಾರದ ಸಹಯೋಗ ಮತ್ತು ಮಾರ್ಗಸೂಚಿಯಂತೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಈ ಹಿನ್ನೆಲೆಯಲ್ಲಿ ಅಕ್ಷರ ಬೆಳಕು ಇಲಾಖೆಯ ಸಾಕ್ಷರ ಭಾರತ್ ಕಾರ್ಯಕ್ರಮವು ಮೊದಲು ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲಿ ಪ್ರಾರಂಭವಾಯಿತು. ಒಂದು ವರ್ಷದ ನಂತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಯಿತು.

ಅನಕ್ಷರಸ್ಥರಿಗೆ ಮೂಲ ಸಾಕ್ಷರತೆ ಒದಗಿಸುವುದು ಮತ್ತು ಅಕ್ಷರಸ್ಥರಾದವರಿಗೆ ಮುಂದುವರಿಕೆ ಶಿಕ್ಷಣವನ್ನು ನೀಡುವುದು, ಸಮಾಜದಲ್ಲಿ ಅವರನ್ನು ಮುಖ್ಯವಾಹಿನಿಗೆ ತರುವುದು, ತಮ್ಮ ವ್ಯವಹಾರಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿವುದು ಜಿಲ್ಲಾ ಲೋಕ ಶೀಕ್ಷಣ ಸಮಿತಿ ಕಾರ್ಯಕ್ರಮದ ಗುರಿಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ನಾಲ್ಕೂ ತಾಲ್ಲೂಕುಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಕುಟುಂಬ ಸಂಮೀಕ್ಷೆ ಮೂಲಕ ಗುರುತಿಸಿರುವ 15+ವಯೋಮಾನದ ಅನಕ್ಷರಸ್ಥರ ಸಂಖ್ಯೆ ಒಟ್ಟು 135527. ಇದರಲ್ಲಿ 2016–17ರ ಅಂತ್ಯಕ್ಕೆ ಒಟ್ಟು ಕಲಿಕೆ ಪೂರ್ಣಗೊಳಿಸಿದವರು 85224. ಉಳಿಕೆ ಅನಕ್ಷರಸ್ಥರು ಒಟ್ಟು 50303. ಈ ಕಾರ್ಯಕ್ರಮವು ಕೇಂದ್ರ ಸರ್ಕಾರದ ಅನುದಾನದಡಿಯಲ್ಲಿ 2016–17ರ ಮಾರ್ಚ್ ತಿಂಗಳ ಅಂತ್ಯಕ್ಕೆ ಪೂರ್ಣಗೊಂಡಿದೆ.

ಉದ್ದೇಶಗಳು ಮತ್ತು ದೃಷ್ಟಿಕೋನ:

- 15+ ಮೇಲ್ಪಟ್ಟ ವಯೋಮಾನದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವುದು.
- ಜಿಲ್ಲೆಯಲ್ಲಿ ಕಾರ್ಯಕ್ರಮಗಳ ಮೂಲಕ ಮತ್ತು ಯೋಜನೆಗಳಡಿಯಲ್ಲಿ ಶೇಕಡಾವಾರು ಅಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸುವುದು. ವಯಸ್ಕ ಅನಕ್ಷರಸ್ಥರಿಗೆ ಕ್ರಿಯಾತ್ಮಕ ಸಾಕ್ಷರತೆ ಮತ್ತು ಆರ್ಥಿಕ ಸಾಕ್ಷರತೆಯನ್ನು ನೀಡುವುದು.
- ನವ ಸಾಕ್ಷರರಿಗೆ ಮುಂದುವರಿಕೆ ಶಿಕ್ಷಣ ನೀಡುವುದು, ಮೂಲ ಸಾಕ್ಷರತೆಯಿಂದ ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಸಾಮಾನ್ಯ ಶಿಕ್ಷಣ ಪದ್ಧತಿಗೆ ಹೊಂದಿಕೊಳ್ಳುವಂತೆ ಮಾಡುವುದು. ಅದರೊಂದಿಗೆ ಅಕ್ಷರಸ್ಥರಿಗೆ ಮತ್ತು ಅನಕ್ಷರಸ್ಥರಿಗೆ ಸಂಬಂಧಿತ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬದುಕಲು ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಅವರ ಜೀವನ ಗುಣಮಟ್ಟವನ್ನು ಸುಧಾರಿಸುವುದು.

- ವಯಸ್ಕ ನವಸಾಕ್ಷರರಿಗೆ ಅವಕಾಶಗಳನ್ನು ಒದಗಿಸಿ ಸಮಾಜಮುಖಿ ಕಲಿಕೆಯನ್ನು ಉತ್ತೇಜಿಸುವುದರ ಮೂಲಕ ಮುಂದುವರಿಕೆ ಶಿಕ್ಷಣ ನೀಡುವುದು.

ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ :

ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು ನೋಂದಾಯಿತ ಸ್ವಾಯತ್ತತೆಯನ್ನು ಹೊಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಪ್ರಾಧಿಕಾರದ ಜನರಲ್ ಬಾಡಿಯ ಅಧ್ಯಕ್ಷರಾಗಿರುತ್ತಾರೆ. ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕಾರ್ಯನಿರ್ವಾಹಕ

ಸಮಿತಿಯ ಅಧ್ಯಕ್ಷರು ಮತ್ತು ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಉಪಾಧ್ಯಕ್ಷರಾಗಿರುತ್ತಾರೆ.



ರಾಜ್ಯ ಮಟ್ಟದ ಕಛೇರಿ:

ನಿರ್ದೇಶಕರು, ನಿರ್ದೇಶಕರ ಕಛೇರಿ, ಲೋಕ ಶಿಕ್ಷಣ ನಿರ್ದೇಶನಾಲಯ, ಮಲ್ಲೇಶ್ವರಂ, ಬೆಂಗಳೂರು. ರವರು ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮ ನಿಧಿ ಮತ್ತು ಮೇಲ್ವಿಚಾರಣೆ ಈ ಎರಡೂ ಕಮೀಟಿಗಳ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.



ಜಿಲ್ಲಾ ಹಂತದ ಕಛೇರಿ:

ಜಿಲ್ಲಾ ಲೋಕ ಶಿಕ್ಷಣ ಸಮಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು. ಜಿಲ್ಲಾ ಕೇಂದ್ರ ಕಛೇರಿಯಾಗಿರುತ್ತದೆ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಜಿಲ್ಲಾ ಹಂತದ ಅಧಿಕಾರಿಗಳಾಗಿರುತ್ತಾರೆ ಮತ್ತು ಜಿಲ್ಲಾ ಲೋಕ ಶಿಕ್ಷಣ ಸಮೀತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಇವರು ಜಿಲ್ಲಾ ಸಾಕ್ಷರತಾ ಕಾರ್ಯಕ್ರಮಗಳ ಸಂಯೋಜಕರು ಮತ್ತು ನಿರ್ವಹಣೇಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಲೋಕ ಶಿಕ್ಷಣ ಸಮಿತಿ ಉಪಾಧ್ಯಕ್ಷರಾಗಿರುತ್ತಾರೆ. ಜಿಲ್ಲೆಯಲ್ಲಿ ಗುರುತಿಸಲ್ಪಟ್ಟಿರುವ ಅನಕ್ಷರಸ್ಥರಿಗೆ ಸಾಕ್ಷರತೆ ನೀಡುವುದು ಮತ್ತು ಮುಂದುವರಿಕೆ ಶಿಕ್ಷಣವನ್ನು ನೀಡುವುದು, ಸಮಾಜದಲ್ಲಿ ಅವರನ್ನು ಮುಖ್ಯವಾಹಿನಿಗೆ ತರುವುದು, ತಮ್ಮ ವ್ಯವಹಾರಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿವುದು ಜಿಲ್ಲಾ ಲೋಕ ಶೀಕ್ಷಣ ಸಮಿತಿ ಕಾರ್ಯಕ್ರಮದ ಗುರಿಯಾಗಿದೆ.

ತಾಲ್ಲೂಕು ಹಂತದ ಕಛೇರಿ:

ತಾಲ್ಲೂಕು ಲೋಕ ಶಿಕ್ಷಣ ಸಮಿತಿ, ತಾಲ್ಲೂಕು ಹಂತದ ಕಛೇರಿ 2016–17ರ ವರೆಗೆ ಸಾಕ್ಷರ ಭಾರತ್ ಕಾರ್ಯಕ್ರಮವು ಜಾರಿಯಲ್ಲಿರುವಾಗ ಸರ್ಕಾರಿ ತಾಲ್ಲೂಕು ಸಂಯೋಜಕರು ಮತ್ತು ಸ್ಥಳೀಯ ಸರ್ಕಾರೇತರ ತಾಲ್ಲೂಕು ಸಂಯೋಜಕರು ತಾಲ್ಲೂಕು ಹಂತದ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪರಿವೀಕ್ಷಣೆಯ ಜವಾಬ್ದಾರಿಯನ್ನು ಹೊಂದಿದ್ದರು. 2017ರ ಮಾರ್ಚ್ ಅಂತ್ಯಕ್ಕೆ ಕಾರ್ಯಕ್ರಮವು ಪೂರ್ಣಗೊಂಡ ಹಿನ್ನೆಲೆಯಲ್ಲಿ ತಾಲ್ಲೂಕು ಸಂಯೋಜಕರನ್ನು ಬಿಡುಗಡೆಗೊಳಿಸಲಾಗಿದೆ. ಆದರೆ ತಾಲ್ಲೂಕು ಲೋಕ ಶಿಕ್ಷಣ ಕಛೇರಿಯ ಪ್ರಭಾರವನ್ನು ಮುಖ್ಯ ಕಾರ್ಯನಿರ್ವಾಹಕರು, ಜಿಲ್ಲಾ ಪಂಚಾಯತ್, ಬೆಂ.ಗ್ರಾ.ಜಿಲ್ಲೆ. ರವರ ಅನುಮೋದನೆಯಂತೆ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ತಾಲ್ಲೂಕು ಪಂಚಾಯಿತಿ ರವರಿಗೆ ವಹಿಸಲಾಗಿದೆ.

ಗ್ರಾಮ ಲೋಕ ಶೀಕ್ಷಣ ಕೇಂದ್ರಗಳು:

ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಒಂದೊಂದು ಗ್ರಾಮ ಲೋಕ ಶಿಕ್ಷಣ ಕೇಂದ್ರಗಳಿವೆ. ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಮೂಲ ಸಾಕ್ಷರತೆಗೆ ಸಂಬಂಧಿತ ಕಾರ್ಯಕ್ರಮಗಳು ಮತ್ತು ತರಬೇತಿಗಳನ್ನು ನಡೆಸಲಾಗುವುದು. ಇಲ್ಲಿ ಅಲ್ಲಿನ ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಂಬಂಧಿತ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಸಾಕ್ಷರ ಭಾರತ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸಿದ ಪ್ರೇರಕರು ಈ ಕೇಂದ್ರಗಳಲ್ಲಿ ಸಕ್ರೀಯವಾಗಿ ಭಾಗವಸುತ್ತಾರೆ. ಇವರನ್ನು ಈಗ ಇಲಾಖೆಯಿಂದ ಯಾವುದೇ ಸಂಭಾವನೆ ನೀಡುತ್ತಿಲ್ಲ. ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಸಂಪರ್ಕ/ಕಾರ್ಯಕ್ರಮ ಸಂಯೋಜಕರಾಗಿ ಸ್ವಯಂ ಸೇವಕರಂತೆ ಬಳಸಿಕೊಳ್ಳಲಾಗುತ್ತಿದೆ.



ಮಾದರಿ ಲೋಕ ಶೀಕ್ಷಣ ಕೇಂದ್ರಗಳು:

ಜಿಲ್ಲೆಯಲ್ಲಿ 3 ಮಾದರಿ ಲೋಕ ಶೀಕ್ಷಣ ಕೇಂದ್ರಗಳಿವೆ. ಸ್ಥಳೀಯ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯರು ಉಸ್ತುವಾರಿಯನ್ನು ಹೊಂದಿರುತ್ತಾರೆ. ಇಲ್ಲಿ ಸಾಕ್ಷರ ಭಾರತ ಕಾರ್ಯಕ್ರಮದಡಿಯಲ್ಲಿ ಪ್ರತಿ ಕೇಂದ್ರಕ್ಕೂ ಟಿ.ವಿ, ಬ್ಯಾಟರಿ, ಕಂಪ್ಯೂಟರ್, , ಟಿ.ವಿ. ಕೇಬಲ್ ಸಂಪರ್ಕ ಡಿಷ್ ಆಂಟಿನಾ, ಕ್ಯಾಮರಾ, ಡಿ.ವಿ.ಡಿ, ಆಫೀಸ್ ಕುರ್ಚಿಗಳು, ಹೊಲಿಗೆ ಯಂತ್ರಗಳು, ಜಮಖಾನೆಗಳು, ಟೇಬಲ್‌ಗಳು ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆಫೀಸಿಗೆ ಸಂಬಂಧಿತ ಅನುಕೂಲಕರ ಸಾಮಾನುಗಳೊಂದಿಗೆ ಸುಸಜ್ಜಿತವಾಗಿವೆ. ಇದರ ಸಂಪೂರ್ಣವಾದ ಜವಾಬ್ದಾರಿ ಮತ್ತು ಉಸ್ತುವಾರಿ ಅವರದ್ದೇ ಆಗಿದೆ. ಪ್ರಸ್ತುತ ಸಾಕ್ಷರ ಭಾರತ ಕಾರ್ಯಕ್ರಮವು ಇಲ್ಲದಿರುವುದರಿಂದ ಇಲ್ಲಿ ಯಾವುದೇ ಚಟುವಟಿಕೆಗಳು ಇರುವುದಿಲ್ಲ. ಆದರೆ ಜಿಲ್ಲಾ ಪಂಚಾಯಿತಿ ಲಿಂಕ್ ಡಾಕ್ಯುಮೆಂಟ್ ಅನುದಾನದಲ್ಲಿ ನಡೆಯುವ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಲಾಗುತ್ತದೆ.

ಕ್ರ. ಸಂ.	ತಾಲ್ಲೂಕು	ಮಾದರಿ ಲೋಕ ಶಿಕ್ಷಣ ಕೇಂದ್ರ	ಉಸ್ತುವಾರಿ ಮೂಖ್ಯೋಪಾಧ್ಯಾಯರ ಹೆಸರು	ಉಸ್ತುವಾರಿ ಶಿಕ್ಷಕರ, ಶಾಲಾ ವಿಳಾಸ
1	ಹೊಸಕೋಟೆ	ದೊಡ್ಡಗಟ್ಟಿಗನಬ್ಬೆ	ಶ್ರೀಮತಿ. ಶಾಂತಾಬಾಯಿ	ಮಾದರಿ .ಲೋ.ಶೀ.ಕೇಂದ್ರ ಸರ್ಕಾರಿ ಹೈಯರ್ ಪ್ರಾಥಮಿಕ ಶಾಲೆ, ದೊಡ್ಡಗಟ್ಟಿಗನಬ್ಬೆ.
2	ನೆಲಮಂಗಲ	ಬಸವನಹಳ್ಳಿ	ಶ್ರೀಮತಿ. ಉಮಾದೇವಿ	ಮಾದರಿ .ಲೋ.ಶೀ.ಕೇಂದ್ರ ಸರ್ಕಾರಿ ಹೈಯರ್ ಪ್ರಾಥಮಿಕ ಶಾಲೆ, ಬಸವನಹಳ್ಳಿ.
3	ದೊಡ್ಡಬಳ್ಳಾಪುರ	ದರ್ಗಾಜೋಗಿಹಳ್ಳಿ	ಶ್ರೀಮತಿ. ಉಮಾದೇವಿ	ಮಾದರಿ .ಲೋ.ಶೀ.ಕೇಂದ್ರ ಸರ್ಕಾರಿ ಹೈಯರ್ ಪ್ರಾಥಮಿಕ ಶಾಲೆ, ದೊಡ್ಡಬಳ್ಳಾಪುರ.

ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ :–

ದಿನಾಂಕ:08/09/2017 ರಿಂದ 14/09/2018 ರವರೆವಿಗೂ ಜಿಲ್ಲೆಯ ಎಲ್ಲಾ ಗ್ರಾಮ ಲೋಕ ಶಿಕ್ಷಣ ಕೇಂದ್ರಗಳಲ್ಲಿ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಸಪ್ತಾಹ ಆಚರಿಸಲಾಗಿದೆ. ಸಪ್ತಾಹದಲ್ಲಿ ಸಾಕ್ಷರತಾ ಜಾಥಾ, ಸಾಕ್ಷರತಾ ಘೋಷಣೆ ಮೂಲಕ ಪ್ರಚಾರ ಕಾರ್ಯ ನಿರ್ವಹಿಸಿದೆ. ಸಪ್ತಾಹದ ಅವಧಿಯಲ್ಲಿ ತಾಲ್ಲೂಕು ಹಂತದ ಮತ್ತು ಜಿಲ್ಲಾ ಹಂತದ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಆಚರಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಅನುದಾನ:

2017–18 ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟ್ ಯೋಜನಾ ಅನುದಾನ ರೂ. 8.00 ಲಕ್ಷ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಕಛೇರಿ ವಾಹನ ಬಾಡಿಗೆ, ಅಧಿಕಾರಿ/ಸಿಬ್ಬಂದಿಗಳ (ಸರ್ಕಾರೇತರ ತಾಲ್ಲೂಕು ಸಂಯೋಜಕರ ಪ್ರವಾಸ ಭತ್ಯೆ ಸೇರಿದಂತೆ)ಪ್ರವಾಸ ಭತ್ಯೆ, ವಾತಾವರಣ ನಿರ್ಮಾಣ ವೃತ್ತಿ ಕೌಶಲ ತರಬೇತಿ ಶಿಬಿರಗಳ ಅನುಷ್ಠಾನಕ್ಕಾಗಿ ಲೋಕ ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಅನುದಾನದಲ್ಲಿ ವೆಚ್ಚ ಮಾಡಲಾಗಿದೆ.

ಕಾರ್ಯಕ್ರಮ ವಿವರ:

2017–18 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಲಿಂಕ್‌ಡಾಕ್ಯುಮೆಂಟ್ ಅನುದಾನದಡಿಯಲ್ಲಿ ಇಲಾಖಾ ಕಾರ್ಯಕ್ರಮಕ್ಕಾಗಿ ರೂ.204000/– ಹಣ ಬಿಡುಗಡೆಯಾಗಿದ್ದು, ಜಿಲ್ಲೆಯ ನಾಲ್ಕೂ ತಾಲ್ಲೂಕುಗಳಲ್ಲಿ ಏಳು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಏಳು ಗ್ರಾಮಗಳಲ್ಲಿ ವೃತ್ತಿ ಕೌಶಲ್ಯ ತರಬೇತಿ ನೀಡಲಾಗಿದೆ. ಪ್ರತಿ ತಂಡದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ 20 ಅಕ್ಷರಸ್ಥರಾಗಿರುವ ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಸ್ಥಳೀಯ ಪ್ರೇರಕರನ್ನು ಕಾರ್ಯಕ್ರಮ ಸಂಯೋಜಕರು/ಸಂಪರ್ಕವ್ಯಕ್ತಿಗಳನ್ನಾಗಿ ಬಳಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಗಿದೆ. ಜೆ.ಎಸ್.ಎಸ್. ಸಂಸ್ಥೆ ಬನಶಂಕರಿ, ಬೆಂಗಳೂರು. ಇವರನ್ನು ಕಾರ್ಯಕ್ರಮದ ಅನುಷ್ಠಾನ ಸಂಸ್ಥೆಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು, ಈ ಸಂಸ್ಥೆಯೊಂದಿಗೆ ಒಪ್ಪಂದದಂತೆ ಹೊಲಿಗೆ ತರಬೇತಿಯ ಅವಧಿ 3 ತಿಂಗಳು ಮತ್ತು ಬ್ಯೂಟೀಷಿಯನ್ ತರಬೇತಿಗೆ 2 ತಿಂಗಳ ಅವಧಿ ನಿಗಧಿಯಾಗಿರುತ್ತದೆ. ಅದರಂತೆ ನಿಗಧಿತ ಅವಧಿಯಲ್ಲಿ 6 ಗ್ರಾಮಗಳಲ್ಲಿ ಹೊಲಿಗೆ ತರಬೇತಿ ಮತ್ತು 1 ಗ್ರಾಮದಲ್ಲಿ ಬ್ಯೂಟೀಷಿಯನ್ ತರಬೇತಿಯನ್ನು ನೀಡಲು ತೀರ್ಮಾನಿಸಿದಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು, ಕಾರ್ಯಕ್ರಮವನ್ನು ಪೂರ್ಣಗೊಳಿಸಲಾಗಿದೆ.

ಪ್ರತಿ ತರಬೇತಿಗೆ ರೂ.30,000/– ಮತ್ತು ಬ್ಯೂಟೀಷಿಯನ್ ತರಬೇತಿಗೆ ರೂ.20,000/– ಭರಿಸಲಾಗಿದೆ. ತರಬೇತಿ ಪಡೆದ ಎಲ್ಲಾ ಫಲಾನುಭವಿಗಳಿಗೆ ಮಾನ್ಯತೆ ಪಡೆದ ಸರ್ಟಿಫಿಕೇಟ್‌ಗಳನ್ನು ವಿತರಿಸಲಾಗಿದೆ. ಇದರಿಂದ ಫಲಾನುಭವಿಗಳು ಜೀವನೋಪಾಯಕ್ಕಾಗಿ ಸ್ವಯಂ ಉದ್ಯೋಗ ಹೊಂದಲು ಸರ್ಕಾರದ ಸಾಲ ಸೌಲಭ್ಯವನ್ನು ಪಡೆಯಬಹುದಾಗಿದೆ.

2017–18 ನೇ ಸಾಲಿನಲ್ಲಿ ವೃತ್ತಿ ಕೌಶಲ್ಯ ತರಬೇತಿಗೆ ಸಂಬಂಧಿತ ವಿವರ.

ಭೌತಿಕ ವರದಿ

ಕ್ರ ಸಂ	ತಾಲ್ಲೂಕಿನ ಹೆಸರು	ಗ್ರಾಮ ಪಂಚಾಯಿತಿ ಹೆಸರು	ತರಬೇತಿ ನಡೆಯುವ ಗ್ರಾಮ	ಕೇಂದ್ರಗಳ ಸಂಖ್ಯೆ	ಗುರುತಿಸಲಾದ ಕಲಿಕಾರ್ಥಿಗಳ ಸಂಖ್ಯೆ			ತರಬೇತಿಯ ಅವಧಿ
					ಗಂಡು	ಹೆಣ್ಣು	ಒಟ್ಟು	
1	ದೊಡ್ಡಬಳ್ಳಾಪುರ	ಕೊಡಿಗೇಹಳ್ಳಿ	ತಳಗವಾರ	1	0	20	20	ಹೊಲಿಗೆ ತರಬೇತಿ 3 ತಿಂಗಳ ಅವಧಿ
2	ನೆಲಮಂಗಲ	ಬಸವನಹಳ್ಳಿ	ಬಸವನಹಳ್ಳಿ	1	0	20	20	ಹೊಲಿಗೆ ತರಬೇತಿ 3 ತಿಂಗಳ ಅವಧಿ
3		ಟಿ. ಬೇಗೂರು	ಟಿ. ಬೇಗೂರು	1	0	20	20	ಹೊಲಿಗೆ ತರಬೇತಿ 3 ತಿಂಗಳ ಅವಧಿ
4	ದೇವನಹಳ್ಳಿ	ಅವತಿ	ಕೋರಮಂಗಲ	1	0	20	20	ಬ್ಯೂಟಿಷಿಯನ್ ತರಬೇತಿ 1 ರಿಂದ 2 ತಿಂಗಳ ಅವಧಿ
5		ಕೋರಮಂಗಲ	ಅವತಿ	1	0	20	20	ಹೊಲಿಗೆ ತರಬೇರಿ 3 ತಿಂಗಳ ಅವಧಿ
6	ಹೊಸಕೋಟೆ	ಕಲ್ಕುಂಟೆ ಅಗ್ರಹಾರ	ನಾರಾಯಣಕೆರೆ	1	0	20	20	ಹೊಲಿಗೆ ತರಬೇರಿ 3 ತಿಂಗಳ ಅವಧಿ
7		ಗಿಡ್ಡಪ್ಪನಹಳ್ಳಿ	ಅತ್ತಿಬೆಲೆ	1	0	20	20	ಹೊಲಿಗೆ ತರಬೇರಿ 3 ತಿಂಗಳ ಅವಧಿ
ಒಟ್ಟು				7	0	140	140	

ಆರ್ಥಿಕ ವರದಿ

ಕ್ರ. ಸಂ	ಬಳಕೆಯ ವಿವರ	ರೂ.30,000/–3 ತಿಂಗಳ 06 ಶಿಬಿರಗಳು (ಟೈಲರಿಂಗ್ ತರಬೇತಿ)	ರೂ.20,000/– 2 ತಿಂಗಳ 1 ಶಿಬಿರಗಳು (ಬ್ಯೂಟೀಷಿಯನ್ ಕೋರ್ಸ್
